ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 30 ಶುಕ್ರವಾರ 2022

₹4

ಸಂಪುಟ: 43 | ಸಂಚಿಕೆ: 165 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523


ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವಥ್ ನಾರಾಯಣ ಅವರಿಂದ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಹಸ್ತಪ್ರತಿಗಳ ಸಂರಕ್ಷಣೆ, ಪ್ರಧೂಮೀಕರಣ ಕೇಂದ್ರ ಉದ್ಘಾಟನೆ

ಎರಡು ವರ್ಷದಲ್ಲಿ ಹಸ್ತಪ್ರತಿ, ತಾಳೆಗರಿಗಳ ಡಿಜಿಟಲೀಕರಣ



ಮೈಸೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ಮಿಥಿಕ್ ಸೊಸೈಟಿ ಸಹಯೋಗದಲ್ಲಿ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ 'ಹಸ್ತಪ್ರತಿಗಳ ಸಂರಕ್ಷಣಾ ಮತ್ತು ಪ್ರಧೂಮೀಕರಣ ಕೇಂದ್ರ'ವನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವಥ್‌ನಾರಾಯಣ ಉದ್ಘಾಟಿಸಿ, ವೀಕ್ಷಿಸಿದರು. ಚಿತ್ರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್ ಕುಮಾರ್, ಮಿಥಿಕ್ ಸೊಸೈಟಿ ಕಾರ್ಯದರ್ಶಿ ವಿ.ನಾಗರಾಜ್, ಮುಖ್ಯಮಂತ್ರಿಗಳ ಇ-ಆಡಳಿತ ಸಲಹೆಗಾರ ಬೇಳೂರು ಸುದರ್ಶನ ಇನ್ನಿತರರು ಇದ್ದಾರೆ.

ಮೈಸೂರು, ಸೆ.29(ಆರ್‌ಕೆಬಿ)- ಇನ್ನೆರಡು ವರ್ಷದಲ್ಲಿ ಮೈಸೂರು ವಿವಿ ವ್ಯಾಪ್ತಿಗೆ ಒಳಪಡುವ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿರುವ ತಾಳೆಗರಿ ಹಾಗೂ ಹಸ್ತಪ್ರತಿಗೆ ಡಿಜಿಟಲ್ ಸ್ಪರ್ಶ ಸಿಗಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ಮಿಥಿಕ್ ಸೊಸೈಟಿ ಸಹಯೋಗದಲ್ಲಿ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ 'ಹಸ್ತಪ್ರತಿಗಳ ಸಂರಕ್ಷಣಾ ಮತ್ತು ಪ್ರಧೂಮೀಕರಣ ಕೇಂದ್ರ'ವನ್ನು ಗುರುವಾರ ಉದ್ಘಾಟಿಸಿ, ಮಾತನಾಡಿದರು.

ಮೈಸೂರು ವಿವಿ ಮತ್ತು ಮಿಥಿಕ್ ಸೊಸೈಟಿ 5 ಸಾವಿರ ಹಸ್ತಪ್ರತಿಗಳು ಮತ್ತು 16 ಸಾವಿರ ತಾಳೆಗರಿಗಳ ಡಿಜಿಟಲೀಕರಣ, ಸಂರಕ್ಷಣೆ ಮತ್ತು ಪ್ರಧೂಮೀಕರಣ (ಫ್ಯೂಮಿಗೇಶನ್)ಕ್ಕಾಗಿ 2 ವರ್ಷಗಳ ಒಡಂಬಡಿಕೆ ಮಾಡಿಕೊಂಡಿರುವುದು ರಚನಾತ್ಮಕ ಕ್ರಮವಾಗಿದೆ. ನಾಡಹಬ್ಬದ ಸಂದರ್ಭದಲ್ಲಿ ಮಾಡುವ ಸರಸ್ವತಿ ಪೂಜೆಯು ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಮಹದುದ್ದೇಶದೊಂದಿಗೆ ನಡೆಯುತ್ತಿರುವುದು ಅನುಕರಣಯೋಗ್ಯವಾಗಿದೆ ಎಂದರು.

ಇಂದು ತಂತ್ರಜ್ಞಾನ ಜಗತ್ತನ್ನು ಆಳುತ್ತಿದ್ದು, ಇಡೀ ವ್ಯವಸ್ಥೆ ಜ್ಞಾನಾಧಾರಿತ ಆಗುತ್ತಿದೆ. ಮೈಸೂರು ವಿ.ವಿ.ಯು ಮೂಲತಃ ಪ್ರಾರಂಭವಾದ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ನಾಡಿನ ಸಾಂಸ್ಕೃತಿಕ ಪುನರುತ್ಥಾನದ ಈ ಕಾರ್ಯ ನಡೆಯುತ್ತಿರುವುದಕ್ಕೆ ಬೆಲೆ ಕಟ್ಟುವುದು ಸಾಧ್ಯವಿಲ್ಲ ಎಂದು ಅವರು ಶ್ಲಾಘಿಸಿದರು.

ಈ ಸಂಸ್ಥೆಯಲ್ಲಿ ಸುಮಾರು 800-900 ವರ್ಷಗಳಷ್ಟು ಹಳೆಯ ತಾಳೆಗರಿಗಳಿವೆ. ಇವು ಒಂದು ನಾಡಿನ ಮತ್ತು ದೇಶದ ಕತೆಯನ್ನೇ ಕಟ್ಟಿಕೊಡುತ್ತವೆ. ಆಯಾ ಕಾಲಘಟ್ಟದ ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಮತ್ತಿತರ ಆಯಾಮಗಳ ಬಗ್ಗೆ ತಿಳಿದುಕೊಳ್ಳಲು ಇವು ಪ್ರಮುಖ ಆಕರಗಳಾಗಿವೆ. ಇಂತಹ ಪ್ರಾಚ್ಯ ಸಂಪತ್ತು ಕನ್ನಡ ನಾಡಿನಲ್ಲಿರುವಷ್ಟು ಬೇರೆ ಕಡೆಗಳಲ್ಲಿ ಇಲ್ಲ. ಇದನ್ನು ನಾವು ಕೂಲಂಕಷವಾಗಿ ಅಧ್ಯಯನ ಮಾಡಬೇಕು ಎಂದು ಅಭಿಪ್ರಾಯಪಟ್ಟರು. ಪ್ರಧಾನಿ ಮೋದಿಯವರು ರೂಪಿಸಿರುವ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿಯು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜಾರಿಯಾಗುತ್ತಿರುವ ಅತ್ಯಂತ ಜನಪರ ಮತ್ತು ಭರವಸೆದಾಯಕ ನೀತಿಯಾಗಿದೆ. ಇದರಿಂದಾಗಿ ಶೈಕ್ಷಣಿಕ ವಲಯದಲ್ಲಿ ಅಭೂತಪೂರ್ವ ಬದಲಾವಣೆಗಳು ಬರುತ್ತಿದ್ದು, ಸಮಾಜದ ಸಮಸ್ಯೆಗಳು ಇನ್ನು ಕೆಲವೇ ವರ್ಷಗಳಲ್ಲಿ ನಿರ್ಮೂಲನೆಯಾಗಿ ಹೋಗಲಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತಕುಮಾರ್, ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ರಾಮಪ್ರಿಯ, ಮುಖ್ಯಮಂತ್ರಿಗಳ ಇ-ಆಡಳಿತ ಸಲಹೆಗಾರ ಬೇಳೂರು ಸುದರ್ಶನ, ಮಿಥಿಕ್ ಸೊಸೈಟಿ ಗೌರವ ಕಾರ್ಯದರ್ಶಿ ವಿ.ನಾಗರಾಜ್, ಮೈಸೂರು ವಿವಿ ಕುಲಸಚಿವ ಪ್ರೊ.ಆರ್. ಶಿವಪ್ಪ ಉಪಸ್ಥಿತರಿದ್ದರು.

> "ಸದ್ಯಕ್ಕೆ ಇಲ್ಲಿ ಸ್ಥಳೀಯರನ್ನು ಬಳಸಿಕೊಂಡು ತಾಳೆಗರಿಗಳನ್ನು ಸ್ವಚ್ಛ ಮಾಡುವ ಕೆಲಸ ನಡೆಯುತ್ತಿದೆ. ಇವುಗಳನ್ನೆಲ್ಲ ನಾವು ತಂತ್ರಜ್ಞಾನದ ಬಲದಿಂದ ಉಳಿಸಿಕೊಳ್ಳುವುದು ಈಗ ಸುಲಭವಾಗಿದೆ. ಆದ್ದರಿಂದ ಯುವ ತಲೆಮಾರಿನ ವಿದ್ವಾಂಸರು ಕೂಡ ಶಾಸನಗಳು, ಲಿಪಿಗಳು, ಹಸ್ತಪ್ರತಿಗಳು ಮತ್ತು ತಾಳೆಗರಿಗಳನ್ನು ಅಧ್ಯಯನ ಮಾಡುವ ಅಭಿಜಾತ ಕುತೂಹಲವನ್ನು ಬೆಳೆಸಿಕೊಳ್ಳಬೇಕು.
> -ಡಾ.ಸಿ.ಎನ್.ಅಶ್ವಥ್ ನಾರಾಯಣ, ಸಚಿವ

ಕಾಂಗ್ರೆಸ್ ರಾಷ್ಟ್ರೀಯತೆಯ ವಿರೋಧಿ, ಅದರಲ್ಲೂ ಪಕ್ಕಾ ಹಿಂದುತ್ವದ ವಿರೋಧಿ

ಕಾಂಗ್ರೆಸ್-ಪಿಎಫ್‌ಐ ನಡುವೆ ತುಂಬ ವ್ಯತ್ಯಾಸವಿಲ್ಲ; ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಟೀಕಾಪ್ರಹಾರ

ಮೈಸೂರು,ಸೆ.29(ಪಿಎಂ)- ಕಾಂಗ್ರೆಸ್‌ನವರು ರಾಷ್ಟ್ರೀಯತೆಯ ವಿರೋಧಿಗಳು, ಅದರಲ್ಲೂ ಪಕ್ಕಾ ಹಿಂದುತ್ವ ವಿರೋಧಿಗಳು. ಮುಸಲ್ಮಾನರ ಓಟಿಗಾಗಿ ಇವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಟೀಕಾಪ್ರಹಾರ ನಡೆಸಿದರು.

ಮೈಸೂರಿನ ಜಗನ್ಮೋಹನ ಅರಮನೆ ಆವರಣದಲ್ಲಿ ಗುರುವಾರ ಆರ್‌ಎಸ್‌ಎಸ್ ವಿರುದ್ಧ ಕಾಂಗ್ರೆಸ್ ನಾಯಕರ ಹೇಳಿಕೆಗಳ ಸಂಬಂಧ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಪಾಕಿಸ್ತಾನ ವಿರುದ್ಧದ ಯುದ್ಧದಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರು ಸೈನ್ಯಕ್ಕೆ ಸಹಕರಿಸಿದ್ದರು. ದೇಶದ ಪ್ರಥಮ ಕಾಂಗ್ರೆಸ್ ಪ್ರಧಾನಿಯವರು ಆರ್‌ಎಸ್‌ಎಸ್ ಸ್ವಯಂ ಸೇವಕರು ಸೈನ್ಯದ ಜೊತೆಗೆ ರೂಟ್ ಮಾರ್ಚ್ ನಡೆಸಲು ಅವಕಾಶ ಮಾಡಿಕೊಟ್ಟಿದ್ದರು.

ಆದರೆ ಇಂದು ಕಾಂಗ್ರೆಸ್‌ಗೆ ದೇಶದ ರಕ್ಷಣೆ ಕಾಣುತ್ತಿಲ್ಲ. ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ಬೇಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದಾರೆ. ತಮ್ಮ ಪ್ರಾಣವನ್ನು ಲೆಕ್ಕಿಸದೆ ಸರ್ಜಿಕಲ್ ಸ್ಟ್ರೈಕ್ ನಡೆಸಿದ ಯೋಧರ ಬಗ್ಗೆಯೂ ಕಾಂಗ್ರೆಸ್‌ನವರು ಲಘುವಾಗಿ ಮಾತನಾಡಿದ್ದರು ಎಂದು ನಾಗೇಶ್ ಕಿಡಿಕಾರಿದರು.

ಅಂದರೆ ದೇಶಭಕ್ತಿ, ರಾಷ್ಟ್ರದ ಸಂಸ್ಕೃತಿ ಬಗ್ಗೆ ಕಾಂಗ್ರೆಸ್‌ನವರು ತಮ್ಮ ಜೀವನದಲ್ಲಿ ಕನಿಷ್ಠ ತಿಳಿದುಕೊಳ್ಳುವ ಪ್ರಯತ್ನವನ್ನೂ ಮಾಡಿಲ್ಲ. ರಾಷ್ಟ್ರ ಕಟ್ಟುವುದು ಗೊತ್ತಿಲ್ಲದ ಕಾಂಗ್ರೆಸ್‌ನವರು, ಆರ್‌ಎಸ್‌ಎಸ್ ಬಗ್ಗೆ ಇನ್ನೇನು ಹೇಳಲು ಸಾಧ್ಯ. ರಾಷ್ಟ್ರೀಯತೆ ವಿರೋಧಿ ಸಂಘಟನೆಗಳನ್ನು ನಿಷೇಧಿಸಿದಾಗ, ರಾಷ್ಟ್ರಭಕ್ತಿ ಹೊಂದಿರುವ ಸಂಘಟನೆಯನ್ನೂ ನಿಷೇಧಿಸಿ ಎಂದರೆ ಪಿಎಫ್‌ಐ ಹಾಗೂ ಕಾಂಗ್ರೆಸ್ ಚಿಂತನೆಗಳಲ್ಲಿ ವ್ಯತ್ಯಾಸ ಕಾಣಲಾಗದು. ಪಿಎಫ್‌ಐನವರೂ ಇದೇ ಬೇಡಿಕೆ ಮುಂದಿಟ್ಟಿದ್ದರು. ಏಕೆಂದರೆ ರಾಷ್ಟ್ರೀಯತೆ ಬೆಳೆದರೆ ರಾಷ್ಟ್ರೀಯತೆ ವಿರೋಧ ಶಕ್ತಿ ಕುಂದುತ್ತದೆ. ಹಾಗಾಗಿ ಪಿಎಫ್‌ಐನವರು ಆರ್‌ಆರ್‌ಎಸ್ ನಿಷೇಧಕ್ಕೆ ಒತ್ತಾಯಿಸಿದ್ದರು. ಈಗ ಕಾಂಗ್ರೆಸ್‌ನವರು ಅದನ್ನೇ ಕೇಳುತ್ತಿದ್ದು, ಈ ಇಬ್ಬರ ನಡುವೆ ವ್ಯತ್ಯಾಸವಿಲ್ಲ ಎಂದು ಟೀಕಿಸಿದರು.

ಆರ್‌ಎಸ್‌ಎಸ್ ನೋಂದಾಯಿತ ಸಂಘಟನೆಯಲ್ಲ ಎಂಬ ಕಾಂಗ್ರೆಸ್‌ನವರ ಹೇಳಿಕೆಗೆ ಪ್ರತಿಕ್ರಿಯಿಸಿ, ಆರ್‌ಎಸ್‌ಎಸ್ ನೋಂದಣಿ ಆಗಿದೆಯೋ ಇಲ್ಲವೋ ಎಂಬುದು ಮುಖ್ಯವಲ್ಲ. ಅದು ಸರ್ಕಾರದ ಸೌಲಭ್ಯ ಪಡೆಯುತ್ತಿದ್ದರೆ ಮಾತ್ರ ನೋಂದಾಯಿತ ಸಂಘಟನೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕಾಂಗ್ರೆಸ್‌ನವರಿಗೆ ಹಿಂದುತ್ವ ಎಂದರೆ ಆಗುವುದಿಲ್ಲ. ಅವರು ಹಿಂದು ಜೀವನ ಪದ್ಧತಿಯ ವಿರೋಧಿಗಳು ಎಂದು ಕಿಡಿಕಾರಿದರು. ಕಾಂಗ್ರೆಸ್‌ನವರು ಮುಸಲ್ಮಾನರ ಓಟನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಈ ರೀತಿ ನೂರೆಂಟು ಮಾತನಾಡುತ್ತಿದ್ದಾರೆ. ಇವರ ಬೆಂಬಲ ಇಲ್ಲದೆ ಪಿಎಫ್‌ಐ ಈ ರಾಜ್ಯದಲ್ಲಿ ಹೇಗೆ ಬೆಳೆಯುತ್ತಿತ್ತು. 176 ಕೇಸ್ ಅನ್ನು ಕೈಬಿಟ್ಟಿದ್ದು ಯಾರು? ಪಿಎಫ್‌ಐ ಮತ್ತು ಕಾಂಗ್ರೆಸ್ ನಡುವೆ ಸಂಬಂಧ ಇದೆ ಎನ್ನುವುದಕ್ಕೆ ಇದಕ್ಕಿಂತಲೂ ಸಾಕ್ಷ್ಯ ಬೇಕಾ? ಪಿಎಫ್‌ಐ ಮತ್ತು ಕಾಂಗ್ರೆಸ್ ಚಿಂತನೆಗಳಲ್ಲಿ ತುಂಬ ವ್ಯತ್ಯಾಸವಿಲ್ಲ ಎಂದರು.

'ಆರ್‌ಎಸ್‌ಎಸ್ ಬಿಜೆಪಿಯ ಪಾಪದ ಕೂಸು' ಎಂದು ಸಿದ್ದರಾಮಯ್ಯನವರ ಟೀಕೆ ಸಂಬಂಧ ಪ್ರತಿಕ್ರಿಯಿಸಿ, 'ನರೇಂದ್ರ ಮೋದಿ ಬರುತ್ತಾರೆ, ದೇಶ ಒಗ್ಗೂಡಿಸುತ್ತಾರೆ' ಎಂದು ಸಿದ್ದರಾಮಯ್ಯ ಹಲವು ಬಾರಿ ಹೇಳಿಕೆ (ಬಾಯಿತಪ್ಪಿ) ನೀಡಿರುವ ವಿಡಿಯೋ ವೈರಲ್ ಆಗಿದೆ. ಅಂದರೆ ಒಂದೊಂದು ಬಾರಿ ಸಿದ್ದರಾಮಯ್ಯನವರು ಹೀಗೆ ನಿಜ ಹೇಳುತ್ತಾರೆ. ಮಿಕ್ಕಿದ ಸಮಯದಲ್ಲಿ ಸುಳ್ಳು ಹೇಳುತ್ತಾರೆ. ಅಂತಹ ಸುಳ್ಳಿನಲ್ಲಿ ಆರ್‌ಎಸ್‌ಎಸ್ ವಿರುದ್ಧದ ಟೀಕೆಯೂ ಒಂದು ಎಂದು ಕುಟುಕಿದರು.

ಸಿದ್ದರಾಮಯ್ಯ ಹೆಗಲು ಮುಟ್ಟಿಕೊಳ್ಳುವುದೇಕೆ?



'ಶಿಕ್ಷಕರ ಅಕ್ರಮ ನೇಮಕಾತಿ ನನ್ನ ಅವಧಿಯಲ್ಲಿ ನಡೆದಿಲ್ಲ' ಎಂಬ ಸಿದ್ದರಾಮಯ್ಯ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಸಿದ್ದರಾಮಯ್ಯ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ನಾವು ಹೇಳೇ ಇಲ್ಲ. 'ಕುಂಬಳ ಕಾಯಿ ಕಳ್ಳ' ಎಂದರೆ ಹೆಗಲು ಮುಟ್ಟಿ ಸಿದ್ದರಾಮಯ್ಯ ಏಕೆ ನೋಡಿಕೊಳ್ಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಶಿಕ್ಷಕರ ಅಕ್ರಮ ನೇಮಕ ಸಂಬಂಧ ಸಿಐಡಿ ತನಿಖೆ ನಡೆಯುತ್ತಿದ್ದು, ಸಚಿವನಾಗಿ ಪೂರ್ಣ ವಿವರ ಈಗ ಹೇಳಬಾರದು ಎಂದರು.

ಕಾಮಾಲೆ ಕಣ್ಣಿನವರಿಗೆ ದಸರಾ ಕಾರ್ಯಕ್ರಮಗಳ ಯಶಸ್ಸು ಕಾಣಿಸುತ್ತಿಲ್ಲ

ಶಾಸಕ ಯತೀಂದ್ರ ಹೇಳಿಕೆಗೆ ಸಚಿವ ಎಸ್.ಟಿ.ಸೋಮಶೇಖರ್ ತಿರುಗೇಟು



ಮೈಸೂರು,ಸೆ.29(ಪಿಎಂ)- ದಸರಾ ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಎಂಬ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಟೀಕೆ ಸಂಬಂಧ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಎಲ್ಲಾ ಕಾರ್ಯಕ್ರಮಗಳು ವ್ಯವಸ್ಥಿತವಾಗಿಯೇ ನಡೆಯುತ್ತಿವೆ. ಆದರೆ ಕಾಮಾಲೆ ಕಣ್ಣಿನವರಿಗೆ ಇದು ಕಾಣುತ್ತಿಲ್ಲ ಎಂದು ತಿರುಗೇಟು ನೀಡಿದರು.

ಮೈಸೂರಿನ ಜಗನ್ಮೋಹನ ಅರಮನೆ ಆವರಣದಲ್ಲಿ ಗುರುವಾರ ದಸರಾ ವ್ಯವಸ್ಥಿತವಾಗಿ ನಡೆಸುವಲ್ಲಿ ವಿಫಲತೆ ಕಾಣುತ್ತಿದ್ದು, ಇದರ ಹೊಣೆಯನ್ನು ಉಸ್ತುವಾರಿ ಸಚಿವರು ಹೊರಬೇಕೆಂದ ಡಾ.ಯತೀಂದ್ರ ಸಿದ್ದರಾಮಯ್ಯನವರ ಟೀಕೆ ವಿರುದ್ಧ ಕಿಡಿಕಾರಿದರು.

ಅವರಿಗೆ ಬೇರೆ ಇನ್ನೇನು ಕೆಲಸವಿಲ್ಲ. ದಸರಾ ಅದ್ಧೂರಿ ಆಗಿಯೇ ನಡೆಯುತ್ತಿದೆ. ನಿನ್ನೆ ಯುವ ದಸರಾಗೆ 60 ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. 124 ಕಿ.ಮೀ. ದೀಪಾಲಂಕಾರ ಮಾಡಲಾಗಿದೆ. ಕಾಮಾಲೆ ಕಣ್ಣಿನವರಿಗೆ ಇದು ಕಾಣುತ್ತಿಲ್ಲ. ವಿಶ್ವವೇ ನೋಡುವ ನಾಡಹಬ್ಬವನ್ನು ಪಕ್ಷಾತೀತವಾಗಿ ನೋಡಿ ಆನಂದಿಸಬೇಕು. ಎಲ್ಲಾ ಕಾರ್ಯಕ್ರಮಗಳು ಚೆನ್ನಾಗಿಯೇ ನಡೆಯುತ್ತಿವೆ. ಯಾವುದೇ ಕೊರತೆ ಇಲ್ಲ ಎಂದರು.

ಅವರು ಕಾರ್ಯಕ್ರಮಗಳಿಗೆ ಬಂದು ಕುಳಿತು ಕೊಳ್ಳಲಿ, ಏಕೆ ಅವರು ಮೈಸೂರಿನಲ್ಲಿ ಇಲ್ಲವೇ? ಕೊರತೆ ಹೇಳಿದರೆ ಸರಿಪಡಿಸುತ್ತೇವೆ. ಅದನ್ನು ಬಿಟ್ಟು ಅವರಷ್ಟಕ್ಕೆ ಅವರೇ ಹೇಳಿಕೊಂಡರೆ ಏನೂ ಮಾಡಲಾಗದು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

ದಸರಾ ಕಾರ್ಯಕ್ರಮಗಳು



■ **ಯೋಗ ಸರಪಳಿ :** ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಸ್ಥಳ: ಅರಮನೆ ಆವರಣ, ಬೆಳಗ್ಗೆ 6ಕ್ಕೆ

■ **ಪಾರಂಪರಿಕ ಟಾಂಗಾ ಸವಾರಿ:** ಉದ್ಘಾಟನೆ: ಪ್ರವಾಸೋದ್ಯಮ, ಪರಿಸರ ಮತ್ತು ಪರಿಸರ ವಿಜ್ಞಾನ ಸಚಿವ ಆನಂದ್ ಸಿಂಗ್, ಸ್ಥಳ: ಮೈಸೂರು ಪುರಭವನ, ಬೆಳಗ್ಗೆ 7ಕ್ಕೆ

■ **ರೈತ ದಸರಾ ಮೆರವಣಿಗೆ :** ಉದ್ಘಾಟನೆ : ಕೃಷಿ ಸಚಿವ ಬಿ.ಸಿ.ಪಾಟೀಲ್, ಸ್ಥಳ: ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣ, ಬೆಳಗ್ಗೆ 9ಕ್ಕೆ.

■ **ವೈದ್ಯಕೀಯ ವಸ್ತುಪ್ರದರ್ಶನ :** ಸ್ಥಳ: ಮೈಸೂರು ಮೆಡಿಕಲ್ ಕಾಲೇಜು, ಬೆಳಗ್ಗೆ 11ಕ್ಕೆ.

■ **ಫಲಪುಷ್ಪ ಪ್ರದರ್ಶನ:** ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಫಲಪುಷ್ಪ ಪ್ರದರ್ಶನ, ಸ್ಥಳ: ಅರಮನೆ ಆವರಣ, ಸಂಜೆ 5.30ಕ್ಕೆ.

■ **ದೀಪಾಲಂಕಾರ:** ದಸರಾ ವಿದ್ಯುತ್ ದೀಪಾಲಂಕಾರ, ಸ್ಥಳ: ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 6.30ಕ್ಕೆ.

■ **ಕೃಷಿ ವಸ್ತುಪ್ರದರ್ಶನ:** ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸ್ಥಳ: ಜೆ.ಕೆ.ಮೈದಾನ, ಬೆಳಗ್ಗೆ 10.30ಕ್ಕೆ.

■ **ಯುವ ಕವಿಗೋಷ್ಠಿ:** ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಡಾ.ವೆಂಕಟೇಶಮೂರ್ತಿ, ಮುಖ್ಯ ಅತಿಥಿಗಳು: ವಿಮರ್ಶಕಿ ಡಾ. ಮಂಗಳಾ ಪ್ರಿಯದರ್ಶಿನಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ರೈತ ದಸರಾ ಸಂವಾದ ಹಾಗೂ ಸನ್ಮಾನ:** ಉದ್ಘಾಟನೆ : ಕೃಷಿ ಸಚಿವ ಬಿ.ಸಿ.ಪಾಟೀಲ್, ಸ್ಥಳ: ಜೆ.ಕೆ. ಅಲ್ಯೂಮಿನಿಯಂ ಅಸೋಸಿಯೇಷನ್ ಸಭಾಭವನ, ಮೈಸೂರು ಮೆಡಿಕಲ್ ಕಾಲೇಜು, ಬೆಳಗ್ಗೆ 11ಕ್ಕೆ.

■ **ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ:** ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸ್ಥಳ: ಅರಮನೆ ಆವರಣ, ಸಂಜೆ 4ಕ್ಕೆ

■ **ಮೈಸೂರು ಬೊಂಬೆ ರಂಗಮಂದಿರ:** ಬೊಂಬೆ ಆಟ ಪ್ರದರ್ಶನ, ಸ್ಥಳ: ಮೈಸೂರು ಬೊಂಬೆ ರಂಗ ಮಂದಿರ, ಚಾಮುಂಡಿಬೆಟ್ಟ, ಸಂಜೆ 5ರಿಂದ.

ಮಕ್ಕಳ ದಸರಾ- ಜಗನ್ಮೋಹನ ಅರಮನೆ

ಬೆಳಗ್ಗೆ 10ರಿಂದ : ಟಿ.ಎಸ್.ಶ್ರೀಲಕ್ಷ್ಮಿ ಮತ್ತು ತಂಡದಿಂದ ನೃತ್ಯ ಪ್ರದರ್ಶನ
ಬೆಳಗ್ಗೆ 10.30ರಿಂದ : ವಿಶೇಷ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ಸ್ಪರ್ಧೆಗಳು
ಬೆಳಗ್ಗೆ 10.30 ರಿಂದ : ಚಿತ್ರಕಲಾ ಸ್ಪರ್ಧೆ
ಹಿರಿಯ ಪ್ರಾಥಮಿಕ ವಿಭಾಗ-ನನ್ನ ಕನಸಿನ ಮೈಸೂರು ದಸರಾ
ಪ್ರೌಢಶಾಲಾ ವಿಭಾಗ - ಭಾರತ ಮತ್ತು ಸಾಂಸ್ಕೃತಿಕ ಪರಂಪರೆ
ವಿಶೇಷ ಅಗತ್ಯವುಳ್ಳ ಮಕ್ಕಳ ವಿಭಾಗ-ಫ್ರೀ ಹ್ಯಾಂಡ್ ಚಿತ್ರಕಲೆ
ಬೆಳಗ್ಗೆ 10.30 ರಿಂದ : ದೇಸಿ ಆಟಗಳು (ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ ವಲಯ)
ರಸಪ್ರಶ್ನೆ : ಪ್ರಾಥಮಿಕ ಶಾಲೆ, ಪ್ರೌಢಶಾಲೆ
ಮಧ್ಯಾಹ್ನ 2ರಿಂದ : ಮಂಡ್ಯದ ಸವಿತಾ ಮತ್ತು ತಂಡದವರಿಂದ ಮಹಿಳಾ ಪೂಜಾ ಕುಣಿತ
ಮ. 2.30ರಿಂದ : ಹುಲಿಕಲ್ ನಟರಾಜ್‌ರಿಂದ ಪವಾಡ ರಹಸ್ಯ ಬಯಲು
ಮ. 3.30 ರಿಂದ : ಧವನ್ ಎಸ್. ಅವರಿಂದ ಜನಪದ ಗೀತೆ
ಮ. 3.50 ರಿಂದ : ಚನ್ನರಾಯಪಟ್ಟಣ, ಹಾಸನ ಜಿಲ್ಲೆಯ ಕರ್ನಾಟಕ ರಾಜ್ಯ ಸಾಹಿತ್ಯ ಪರಿಷತ್ ಮಕ್ಕಳಿಂದ ನೃತ್ಯ ಮತ್ತು ನಾಟಕ ಪ್ರದರ್ಶನ
ಸಂಜೆ 4.15 ರಿಂದ : ಸಮಾರೋಪ ಮತ್ತು ಬಹುಮಾನ ವಿತರಣೆ

ಮೈಸೂರು ಅರಮನೆ

ಸಂಜೆ 5.30 ರಿಂದ : ಕೋಲಾರದ ಜ್ಞಾನಮೂರ್ತಿ ಮತ್ತು ತಂಡದಿಂದ ಭಕ್ತಿ ಸಂಗೀತ
ಸಂಜೆ 6 ರಿಂದ : ಡಾ. ಸುಕನ್ಯಾ ಪ್ರಭಾಕರ್ ಮತ್ತು ತಂಡದಿಂದ ವಾದ್ಯಗಳಲ್ಲಿ ಒಡೆಯರ್ ಕೃತಿಗಳು
ಸಂಜೆ 7 ರಿಂದ : ಬೆಂಗಳೂರಿನ ಕರ್ನಾಟಕ ಕಲಾಶ್ರೀ ರೂಪಾ ರಾಜೇಶ್ ಮತ್ತು ತಂಡದಿಂದ ಕೂಚುಪುಡಿ ನೃತ್ಯ
ರಾ. 8 ರಿಂದ : ಕೊಲ್ಕತ್ತಾದ ವಿದುಷಿ ಕೌಶಿಕಿ ಚಕ್ರವರ್ತಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ

ಜಗನ್ಮೋಹನ ಅರಮನೆ

ಸಂಜೆ 6 ರಿಂದ : ಕೊಪ್ಪಳದ ನೀಲಪ್ಪ ದೊಡ್ಡಮಣಿ ಅವರಿಂದ ಕಣಿವಾದ್ಯ
ಸಂಜೆ 6.45 ರಿಂದ : ಬೆಂಗಳೂರಿನ ಪೂಜಾ ಸಾತನೂರು ಮತ್ತು ತಂಡದಿಂದ ಭರತನಾಟ್ಯ
ರಾ. 7.30 ರಿಂದ : ಬೆಂಗಳೂರಿನ ಹಿದಾಯತ್ ಅಹಮದ್ ಮತ್ತು ತಂಡದಿಂದ ಜಾನಪದ ನೃತ್ಯ
ರಾ. 8.30 ರಿಂದ : ಶಿವಶಕ್ತಿ ಕಲ್ಲಟಂಡ ಎಂ.ಎಸ್.ನಟರಾಜು ಅವರಿಂದ ಬೊಂಬೆ ನೃತ್ಯ

ಕಲಾಮಂದಿರ

ಸಂಜೆ 6 ರಿಂದ : ಬಾಗಲಕೋಟೆಯ ಕುಲಸಗೇರಿಯ ಶ್ರೀ ಶಿವಶರಣ ಭಜನಾ ಮತ್ತು ಕಲಾ ಸಾಂಸ್ಕೃತಿಕ ಸಂಘದಿಂದ ಭಜನೆ



ಇಂದಿನ ಪಂಚಾಂಗ

30.09.2022 ಶುಕ್ರವಾರ, ಮಳೆ ನಕ್ಷತ್ರ: ಹಸ್ತ 27.09.2022 ರಿಂದ 10.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ : ವಿಶಾಖ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಸಂಜೆ 6.45 ರಿಂದ : ನಾಟ್ಯಾಂಕುರ ಪ್ರದರ್ಶಕ ಕಲೆಗಳ ಕೇಂದ್ರದ ನಾಗೇಶ್ ಅವರಿಂದ ನೃತ್ಯರೂಪಕ
ರಾ. 7.30ರಿಂದ : ಚಿಕ್ಕಮಗಳೂರಿನ ಭಾಗ್ಯಶ್ರೀಗೌಡ ಅವರಿಂದ ಸುಗಮ ಸಂಗೀತ
ರಾ. 8.30 ರಿಂದ : ಚಿತ್ರದುರ್ಗದ ಶ್ರೀ ಅಂಜನ ನೃತ್ಯ ಕಲಾಕೇಂದ್ರದವರಿಂದ ನೃತ್ಯ ವೈವಿಧ್ಯ

ಗಾನಭಾರತಿ

ಸಂಜೆ 6 ರಿಂದ : ಬೇಲೂರು ವೇಣುಗೋಪಾಲ್ ಅವರಿಂದ ಸ್ಯಾಕ್ಸೋಫೋನ್ ವಾದನ
ಸಂಜೆ 6.45 ರಿಂದ : ಗಂಗಾವತಿಯ ಐಶ್ವರ್ಯ ರಾಣಿ ಬೂದಿಹಾಳ ಅವರಿಂದ ಹಿಂದೂಸ್ಥಾನಿ ಸಂಗೀತ
ರಾ. 7.30 ರಿಂದ : ಬೆಂಗಳೂರಿನ ವಿದುಷಿ ಅಮಿತ್ ನಾಡಿಗ್ ಅವರಿಂದ ಕೊಳಲು ವಾದನ
ರಾ. 8.30 ರಿಂದ : ಹೊಸಪೇಟೆಯ ಜಿ. ಮಾರುತಿರಾವ್ ಪಾಂಡುರಂಗ ಸಂಗೀತ ಪಾಠಶಾಲೆ ಅವರಿಂದ ಸುಗಮ ಸಂಗೀತ

ಶ್ರೀ ನಾದಬ್ರಹ್ಮ ಸಂಗೀತ ಸಭಾ

ಸಂಜೆ 6 ರಿಂದ : ಹಾವೇರಿ ಮಂಜುನಾಥ್ ಮಿರ್ಜಿ ಅವರಿಂದ ವೀರಗಾಸೆ ಪುರವಂತಿಕೆ
ಸಂಜೆ 6.45 ರಿಂದ : ಕೊಪ್ಪಳದ ಶರಣಪ್ಪ ವಡಿಗೇರ ಅವರಿಂದ ಜಾನಪದ ಗೀತೆಗಳು
ರಾ. 7.30 ರಿಂದ : ಬೆಂಗಳೂರಿನ ಡಾ.ಶೈಲಜಾ ಪಂತುಲು ಅವರಿಂದ ದಾಸರ ಪದಗಳು
ರಾ. 8.30 ರಿಂದ : ಬೆಂಗಳೂರಿನ ಟಿ.ಪಿ.ರಚನಾರಿಂದ ಭರತನಾಟ್ಯ

ಚಿಕ್ಕಗಡಿಯಾರ

ಸಂಜೆ 5.30 ರಿಂದ : ಶ್ರೀ ಕಟ್ಟಿ ಮುನೇಶ್ವರ ತಮಟೆ ನಗರಿ ಯುವಕರ ಕಲಾತಂಡದಿಂದ ತಮಟೆ ವಾದ್ಯ
ಸಂಜೆ 6 ರಿಂದ : ಶ್ರೀ ಶಿವಕುಮಾರ್ ಮತ್ತು ತಂಡದಿಂದ ವೀರಭದ್ರ ಕುಣಿತ, ಅಂತಾರಾಷ್ಟ್ರೀಯ ಕಂಸಾಳೆ ಕಲಾವಿದರ ಸಂಘದಿಂದ ಕಂಸಾಳೆ
ರಾತ್ರಿ 7 ರಿಂದ : ಚೌಡಿಕೆ ಪದ ಮತ್ತು ಡೊಳ್ಳು ಕುಣಿತ
ರಾತ್ರಿ 8 ರಿಂದ : ಎಸ್.ವಿ.ಅಶ್ವಿನಿ ಮತ್ತು ತಂಡದಿಂದ ಸುಗಮ ಸಂಗೀತ

ಪುರಭವನ

ಬೆಳಗ್ಗೆ 10.30 ರಿಂದ : ಬೆಂಗಳೂರಿನ ಶ್ರೀ ರೇಣುಕಾಂಬ ಕಲಾಸಂಘದಿಂದ ಗಂಗೆ ಗೌರಿ ನಾಟಕ
ಮಧ್ಯಾಹ್ನ 3 ರಿಂದ : ಅಮರ ಸಾಧಕಿಯರ ಕಲಾಸಂಘದಿಂದ ಮರಳಿ ಬಂದ ಮಾಂಗಲ್ಯ ನಾಟಕ
ಸಂಜೆ 6 ರಿಂದ : ಬಳ್ಳಾರಿಯ ದಾತ್ರಿ ರಂಗ ಸಂಸ್ಥೆಯಿಂದ ಬಾಹುಬಲಿ ವಿಜಯಂ ನಾಟಕ

ಕಿರು ರಂಗಮಂದಿರ, ಕಲಾಮಂದಿರ

ಮ. 2 ರಿಂದ : ಮೈಸೂರಿನ ಆರ್. ಹೇಮಲತಾ ಕುಮಾರಸ್ವಾಮಿ ಅವರಿಂದ ಶಾಸ್ತ್ರೀಯ ಸಂಗೀತ
ಮ. 3ರಿಂದ : ಶ್ರೀಧರ ಮಿತ್ರ ಮಂಡಳಿಯವರಿಂದ ಅಣ್ಣ ತಂದ ಅತ್ತಿಗೆ ಸಾಮಾಜಿಕ ನಾಟಕ
ರಾ. 7 ರಿಂದ : ಮೈಸೂರಿನ ಜನಮನ ರಂಗ ತಂಡದಿಂದ ದೋಪ್ತಿ ಸಾಮಾಜಿಕ ನಾಟಕ

ಕುಸ್ತಿ ಪಂದ್ಯಾವಳಿ, ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ಕರ್ನಾಟಕ ವಸ್ತುಪ್ರದರ್ಶನ ಮೈದಾನ

ಬೆಳಗ್ಗೆ 8 ರಿಂದ : ಪಾಯಿಂಟ್ ಕುಸ್ತಿಗಳು
ಮಧ್ಯಾಹ್ನ 3 ರಿಂದ : ನಾಡ ಕುಸ್ತಿ ಪಂದ್ಯಾವಳಿ

ಮಹಿಳಾ ದಸರಾ ಜೆ.ಕೆ.ಮೈದಾನ

ಸಂಜೆ 4 ರಿಂದ : ತರಕಾರಿ ಕೆತ್ತನೆ ಸ್ಪರ್ಧೆಗಳು

ಯುವ ದಸರಾ ಮಹಾರಾಜ ಕಾಲೇಜು ಮೈದಾನ

ಸಂಜೆ 6ರಿಂದ : ಕೆಐಕೆಎಸ್, ಮಾನಸಗಂಗೋತ್ರಿ, ಸರ್ಕಾರಿ ಎಸ್‌ವಿಕೆ ಬಾಲಕಿಯರ ಪಿಯು ಕಾಲೇಜು ಮತ್ತು ಸ್ಥಳೀಯ ಕಲಾವಿದರಿಂದ ಕಾರ್ಯಕ್ರಮ
ರಾತ್ರಿ 7 ರಿಂದ : ಸಿಗ್ನೇಚರ್ ಗ್ರೂಪ್ ಡ್ಯಾನ್ಸ್ ತಂಡದಿಂದ ನೃತ್ಯ ರೂಪಕ, ಲೇಸರ್
ರಾ. 7.30 ರಿಂದ : ಸ್ಯಾಂಡಲ್‌ವುಡ್ ನೈಟ್ಸ್

ಶರನ್ನವರಾತ್ರಿ ಕಾರ್ಯಕ್ರಮ



■ **ತ್ರಯೀನ್ಯಾಸ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಲಲಿತಾ ಪಂಚಮಿ ಪ್ರಯುಕ್ತ ಮಹಾಭಿಷೇಕ, ಶ್ರೀ ಸ್ಕಂದಮಾತಾ, ಶ್ರೀ ವಿದ್ಯಾ ಜ್ವಲದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋ ಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಲಲಿತಾ ಮಹಾಯಾಗ ಮತ್ತು ಶ್ರೀ ದಶಮಹಾವಿದ್ಯಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ :** ಶ್ರೀ ಶಾರದಾ ಶರನ್ನವರಾತ್ರೋತ್ಸವ, ಸಹಸ್ರ ಮೋದಕ ಗಣಪತಿ ಹೋಮ, ಸಂಜೆ ಲಕ್ಷಾಕುಂಕುಮಾರ್ಚನೆ, ಲಲಿತಾ ಹೋಮ, ರಾಜರಾಜೇಶ್ವರಿ ಅಲಂಕಾರ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ರಾಜರಾಜೇಶ್ವರಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಅಶೋಕ ರಸ್ತೆ, ಸಂಜೆ 6 ರಿಂದ.

■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ, ವಿದ್ವಾನ್ ಕೇಶವ ಮೋಹನ್‌ಕುಮಾರ್ ಮತ್ತು ತಂಡದಿಂದ ವಯೋಲಿನ್ ವಾದನ, ಸ್ಥಳ: ಶ್ರೀ ರಾಮಮಂದಿರ, ಸಂಜೆ 6 ಗಂಟೆಗೆ.

■ **ಶ್ರೀ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ರಾಜರಾಜೇಶ್ವರಿ (ವೀಳ್ಯೆದೆಲೆ) ಅಲಂಕಾರ, ಸಂಜೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರಪೂಜೆ, ನವಾವರಣ ಪೂಜೆ, ವಿದುಷಿ ಅನಹಿತ ರವೀಂದ್ರನ್ ಮತ್ತು ವಿದುಷಿ ಅಪೂರ್ವ ರವೀಂದ್ರನ್ ಅವರಿಂದ ಕರ್ನಾಟಕ ಸಂಗೀತ ದ್ವಂದ್ವ ಗಾಯನ, ಮ. 12ಕ್ಕೆ ಅನ್ನಾರ್ಚನೆ, ಪರಾಶಕ್ತಿ ಪೂಜೆ, ಹೋಮ ಪೂರ್ಣಾಹುತಿ, ಮ. 3.30ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಶ್ರೀ ದುರ್ಗಾಸೂಕ್ತ ಹೋಮ, ಗಜಲಕ್ಷ್ಮಿ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿ ವಿಲಾಸ ಮೊಹಲ್ಲಾ, ಬೆಳಗ್ಗೆ 8 ಗಂಟೆಗೆ.

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಸಾಂಸ್ಕೃತಿಕ ಕಾರ್ಯಕ್ರಮ, ಜೆ.ಪಿ.ನಗರದ ಗಾಯತ್ರಿ ಪಾರಾಯಣ ಸಮಿತಿಯಿಂದ ಲಲಿತ ಸಹಸ್ರನಾಮ ಪಾರಾಯಣ, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.

■ **ರಂಗಾಯಣ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ-2022, ಬೆಂಗಳೂರಿನ ಎನ್‌ಎಸ್‌ಡಿ ತಂಡದಿಂದ ಈ ಕೆಳಗಿನವರು ನಾಟಕ ಪ್ರದರ್ಶನ, ನಿರ್ದೇಶನ : ವೀಣಾ ಶರ್ಮ, ರಚನೆ : ಮಾಕ್ಸಿಂ ಗಾರ್ಕಿ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಮೈಸೂರು ಗುಜರಾತಿ ಸಮಾಜ :** ನವರಾತ್ರಿ ಉತ್ಸವದ ಅಂಗವಾಗಿ ಗುಜರಾತಿ ಗರ್ಬಾ ಹಾಗೂ ದಾಂಡಿಯಾ ಜಾನಪದ ನೃತ್ಯ ಸ್ಥಳ: ಸಮಾಜದ ಭವನ, ಯಾದವಗಿರಿ, ಸಂಜೆ 7.30 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಬೆಳಗ್ಗೆ 10 ರಿಂದ ಶ್ರೀ ಲಲಿತಾ ಹೋಮ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ:** ಶರನ್ನವರಾತ್ರಿ ಮಹೋತ್ಸವ, ಗಂಧಾಲಂಕಾರ, ಬೆಳಗ್ಗೆ ಮತ್ತು ಸಂಜೆ ದರ್ಶನ, ರಾಮಕೃಷ್ಣನಗರದ ರಂಜನಿ ಗಾನ ಕಲಾ ಶಾಲೆ ಅವರಿಂದ ಸಂಗೀತ ಕಾರ್ಯಕ್ರಮ, ಸಂಜೆ. ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ.

■ **ಶ್ರೀ ಗಣಪತಿ ಸೇವಾ ಮಂಡಳಿ :** ಶರನ್ನವರಾತ್ರೋತ್ಸವ, ಶ್ರೀಗಂಧ ಅಲಂಕಾರ, ಸ್ಥಳ: ಶ್ರೀ ಗಣಪತಿ ಸೇವಾ ಮಂಡಳಿ, ರಾಮಕೃಷ್ಣನಗರ.

■ **ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಶ್ರೀ ಉತ್ತರಾದಿ ಮಠ :** ಶ್ರೀನಿವಾಸ ಕಲ್ಯಾಣೋತ್ಸವ, ಸ್ಥಳ: ರೈಲ್ವೆ ಮ್ಯೂಸಿಯಂ ಎದುರು, ಸಿಎಫ್‌ಟಿಆರ್‌ಐ ಪಕ್ಕ, ಸಂಜೆ 5ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಕಿನ್‌ಸನ್ಸ್ ಕಾಯಿಲೆಯ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಜೈವಿಕ ರಸಾಯನಶಾಸ್ತ್ರ ವಿಭಾಗ :** ಎನ್‌ಎಂಆರ್ ಸ್ಪೆಕ್ಟ್ರಾ ಡೇಟಾ ವ್ಯಾಖ್ಯಾನ ಕುರಿತು ರಾಷ್ಟ್ರೀಯ ಮಟ್ಟದ ಮೂರು ದಿನಗಳ ಕಾರ್ಯಾಗಾರ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಚಿತ್ರ ಮತ್ತು ಛಾಯಾಚಿತ್ರ ಕಲಾವಿದ ಬಿ.ಎಸ್. ದೇಸಾಯಿ ಅವರಿಂದ ಪಕ್ಷಿ-ಕೀಟಗಳ ನವರಾತ್ರಿ ಕಲೋತ್ಸವ ಏಕವ್ಯಕ್ತಿ ಛಾಯಾಚಿತ್ರ ಕಲಾ ಪ್ರದರ್ಶನ, ಸ್ಥಳ: ಶ್ರೀಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗ, ಅಖಿಲ ಭಾರತೀಯ ವನವಾಸಿ ಕಲ್ಯಾಣ ಆಶ್ರಮ :** ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಹೀರೋಗಳ ಕೊಡುಗೆ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ವಿಧಾನಪರಿಷತ್ ಸದಸ್ಯ ಶಾಂತಾರಾಂ ಬುದ್ನಾ ಸಿದ್ದಿ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಗೌರವ ಅತಿಥಿಗಳು : ಮೈಸೂರು ವಿವಿ ಕುಲಸಚಿವ ಪ್ರೊ. ಆರ್. ಶಿವಪ್ಪ, ಎಬಿವಿಕೆಎ ಕ್ಷೇತ್ರಿಯ ಸಂಘಟನಾ ಮಂತ್ರಿ ಶ್ರೀಪಾದ್, ಭಾಷಣ : ಎನ್‌ಸಿಎಸ್‌ಟಿಯ ಡಾ. ಸಿ.ಆರ್. ಸತ್ಯನಾರಾಯಣನ್, ಸ್ಥಳ: ಲಲಿತ ಕಲಾ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಶ್ರೀ ನಟರಾಜ ಸ್ನಾತಕೋತ್ತರ ಕೇಂದ್ರ :** ಸಮಾಜದ ಅಭಿವೃದ್ಧಿಗೆ ಎನ್‌ಜಿಓಗಳ ಪಾತ್ರ ಕುರಿತು ವಿಶೇಷ ಉಪನ್ಯಾಸ, ಉದ್ಘಾಟನೆ : ಪ್ರೊ. ನಾಗೇಂದ್ರ ಬಾಬು, ಸಂಪನ್ಮೂಲ ವ್ಯಕ್ತಿ : ಎಸ್. ಮುರುಗೇಶ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀನಟರಾಜ ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಅಭಿವೃದ್ಧಿ ಅಧ್ಯಯನ ಸಂಸ್ಥೆ :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ಭಾಷಣ: ಪ್ರಸಾರಾಂಗ ನಿರ್ದೇಶಕ ಪ್ರೊ. ಎ.ಎಸ್.ಶೇಖರ್, ಅಧ್ಯಕ್ಷತೆ : ಅಭಿವೃದ್ಧಿ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ. ಹೆಚ್.ಎಂ. ಚಂದ್ರಶೇಖರ್, ಭಾಷಾಂತರಕಾರ ಡಾ. ಪ್ರವೀಣ್ ಕುಮಾರ್ ಎಸ್ ಅವರಿಂದ ಕನ್ನಡದಲ್ಲಿ ಆಡಳಿತ ಮತ್ತು ಕಾನೂನು ಭಾಷಾಂತರ ಕುರಿತು ಉಪನ್ಯಾಸ, ಸ್ಥಳ: ಪ್ರೊ. ಆರ್.ಪಿ.ಮಿಶ್ರ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಎಟಿಎಂಇ:** ಶಿಕ್ಷಕರ ದಿನಾಚರಣೆ ಮತ್ತು ಇಂಜಿನಿಯರ್ಸ್ ಡೇ, ಮುಖ್ಯ ಅತಿಥಿಗಳು : ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಿ. ಸುಧನ್ವ, ಅಧ್ಯಕ್ಷತೆ : ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎಲ್. ಅರುಣ್‌ಕುಮಾರ್, ಗೌರವ ಅತಿಥಿಗಳು : ಡಾ. ಸೈಯ್ಯದ್ ಶಕೀಬ್ ಉರ್ ರೆಹಮಾನ್, ದೇವರಾಜಮೂರ್ತಿ, ಕೆ. ಶಿವಶಂಕರ್, ಆರ್. ವೀರೇಶ್, ಸ್ಥಳ: ಕಾಲೇಜು ಸಭಾಂಗಣ, ಮಧ್ಯಾಹ್ನ 2.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ದಸರಾ ವಿಶೇಷ ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ- ಪ್ರೊ. ಎನ್. ವೆಂಕೋಬರಾವ್, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜಮಾರ್ಗ' ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ, ಪ್ರಸ್ತುತಿ- ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.15'ಹರಿಕೇಶಾಂಗಿ ಮಾತಂಗಿ' ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ- ಮೈಸೂರು ಎಸ್. ರಾಜಲಕ್ಷ್ಮಿ, 10.00 ಶ್ರೀ ಕಮಲಾಂಬ ಜಯಂತಿ- ನವರಾತ್ರಿ ಸಂದರ್ಭದಲ್ಲಿ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೀರ್ತನೆಗಳನ್ನಾಧರಿಸಿದ ವಿಶೇಷ ಸರಣಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ-ಡಾ. ರಾಜ್‌ಕುಮಾರ್, ಬಿ.ಆರ್. ಛಾಯಾ, 12.45 ಕಾದಂಬರಿ ವಿಹಾರ-ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ- ಉಮೇಶ್ ಎಸ್.ಎಸ್., 1.20 'ಜಂಬೂಸವಾರಿ-ಮೈಸೂರು ದಸರಾ ಆನೆ ಸ್ಟೋರಿ' ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ, ಪ್ರಸ್ತುತಿ- ಅಬ್ದುಲ್ ರಶೀದ್ ಹಾಗೂ ಡಾ. ಮೈಸೂರು ಉಮೇಶ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ- ಜಿ.ಕೆ. ರವೀಂದ್ರಕುಮಾರ್, 4.00 ಮಹಿಳಾರಂಗ-ದಸರಾ ವಿಶೇಷ-ಸ್ವರ ಸಾಗರ ಸಂಗೀತ ಫೌಂಡೇಶನ್ ಸದಸ್ಯರಿಂದ ಕಾರ್ಯಕ್ರಮ ವೈವಿಧ್ಯ, 4.30 ವೃತ್ತಿ ಮಾರ್ಗದರ್ಶನ- ಕಾನೂನು ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊ.ಕೆ.ಎಸ್. ಸುರೇಶ್ ಅವರೊಂದಿಗೆ ಮಾತುಕತೆ, 5.30 ಚಾಮುಂಡಿ ಹಬ್ಬ- ಜನಪದ ನಾಲಗೆಯಲ್ಲಿ ಮೈಸೂರ ದೇವತೆ, ಲೇಖನ ಡಾ- ಪಿ.ಕೆ. ರಾಜಶೇಖರ್, ಪ್ರಸ್ತುತಿ- ಡಾ. ಮೈಸೂರು ಉಮೇಶ್, 6.50 ಕೃಷಿರಂಗ-ಕಿಸಾನ್ ವಾಣಿ-ಮಿಶ್ರ ಕೃಷಿಯಲ್ಲಿ ಆರ್ಥಿಕ ಅಭಿವೃದ್ಧಿ ಕುರಿತು ಕೃಷಿಕ ಸಿ. ಚೆನ್ನಪ್ಪ ಅವರೊಡನೆ ಸಂದರ್ಶನ, 10.00 ರಂಗಗೀತೆಗಳು-ದಶಾವತಾರದ ಹಾಡುಗಳು, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 30 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 165 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಹುಲ್ ಗಾಂಧಿ ಭಾರತ ಐಕ್ಯತಾ ಯಾತ್ರೆ

ಇಂದು ರಾಜ್ಯ ಪ್ರವೇಶ

■ ಗುಂಡ್ಲುಪೇಟೆ ಮೂಲಕ ಆಗಮಿಸುವ ರಾಹುಲ್ ಗಾಂಧಿ ಸ್ವಾಗತಕ್ಕೆ ಸಜ್ಜಾಗಿರುವ ರಾಜ್ಯ ಕಾಂಗ್ರೆಸ್ ಪಡೆ ■ ರಾಜ್ಯದಲ್ಲಿ ಮುಂದಿನ 18 ದಿನ ಸಾಗಲಿರುವ ಐಕ್ಯತಾ ಯಾತ್ರೆ ■ ಅಲ್ಲಲ್ಲಿ ಸಂತ್ರಸ್ತರು, ವಿವಿಧ ಕ್ಷೇತ್ರದ ಮುಖಂಡರೊಂದಿಗೆ ಸಂವಾದ



ರಾಹುಲ್ ಗಾಂಧಿ ನೇತೃತ್ವದ ಭಾರತ ಐಕ್ಯತಾ ಯಾತ್ರೆಯ ಬಹಿರಂಗ ಸಭೆ ಗುಂಡ್ಲುಪೇಟೆ ಪಟ್ಟಣದ ಅಂಬೇಡ್ಕರ್ ಭವನದ ಮುಂಭಾಗದಲ್ಲಿ ನಡೆಯಲಿದ್ದು, ಇದಕ್ಕಾಗಿ ನಿರ್ಮಿಸಿರುವ ಆಕರ್ಷಕ ಸ್ವಾಗತ ಕಮಾನು.

ಮೈಸೂರು, ಸೆ.29– ರಾಷ್ಟ್ರ ಮಟ್ಟದಲ್ಲಿ ಕುಸಿದಿರುವ ಕಾಂಗ್ರೆಸ್ ಪಕ್ಷದ ವರ್ಚಸ್ಸನ್ನು ಮೇಲೆತ್ತಲು ಮತ್ತೆ ಕೇಂದ್ರದಲ್ಲಿ ಆಡಳಿತ ಚುಕ್ಕಾಣಿ ಹಿಡಿಯುವ ನಿಟ್ಟಿನಲ್ಲಿ ಎಐಸಿಸಿ ನಾಯಕ ರಾಹುಲ್ ಗಾಂಧಿ ಅವರು ಕೈಗೊಂಡಿರುವ 'ಭಾರತ ಐಕ್ಯತಾ ಯಾತ್ರೆ' ನಾಳೆ (ಸೆ.30) ಕೇರಳದಿಂದ ರಾಜ್ಯದ ಗಡಿ ತಾಲೂಕು ಗುಂಡ್ಲುಪೇಟೆ ಪ್ರವೇಶಿಸಲಿದೆ.

ರಾಜ್ಯದಲ್ಲಿ ಮೊದಲನೇ ದಿನದ ರಾಹುಲ್ ಗಾಂಧಿ ಅವರ ಪಾದಯಾತ್ರೆ ನಾಳೆ ಬೆಳಗ್ಗೆ 9 ಗಂಟೆಗೆ ಗುಂಡ್ಲುಪೇಟೆಯ ಅಂಬೇಡ್ಕರ್ ಭವನದ ಮುಂಭಾಗದಿಂದ ಆರಂಭವಾಗಲಿದೆ. ರಾಜ್ಯಕ್ಕೆ ಆಗಮಿಸುವ ರಾಹುಲ್ ಗಾಂಧಿ ಅವರನ್ನು ಅದ್ಧೂರಿಯಾಗಿ ಬರಮಾಡಿಕೊಳ್ಳಲು ಕಾಂಗ್ರೆಸ್ ಮುಖಂಡರು ಸಜ್ಜಾಗಿದ್ದಾರೆ. ನಾಳೆ ಬೆಳಗ್ಗೆ 9 ಗಂಟೆಗೆ ಅಂಬೇಡ್ಕರ್ ಭವನದ ಮುಂಭಾಗ ಬಹಿರಂಗ ಸಭೆ ನಡೆಸಿದ ನಂತರ ರಾಹುಲ್ ಗಾಂಧಿ ಪಾದಯಾತ್ರೆಯನ್ನು ಆರಂಭಿಸಲಿದ್ದಾರೆ.

ಬಹಿರಂಗ ಸಭೆಗಾಗಿ ಬೃಹತ್ ವೇದಿಕೆ ನಿರ್ಮಿಸಲಾಗಿದ್ದು, 250 ಮಂದಿ ಆಸೀನರಾಗಲು ವೇದಿಕೆ ಮೇಲೆ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಕಾರ್ಯಕರ್ತರಿಗಾಗಿ 30 ಸಾವಿರ ಕುರ್ಚಿಗಳನ್ನು ಹಾಕಲಾಗಿದೆ. ಅಂಬೇಡ್ಕರ್ ಭವನದ ಮುಂಭಾಗ ಆಕರ್ಷಕವಾಗಿ ತಾತ್ಕಾಲಿಕ ಕಮಾನು ನಿರ್ಮಿಸಲಾಗಿದೆ. ಬೆಳಗ್ಗೆಯ ಪಾದಯಾತ್ರೆಯು ಬೆಂಡಗಳ್ಳಿ ಮೈದಾನದಲ್ಲಿ ವಿಶ್ರಾಂತಿ ಪಡೆಯಲಿದೆ. ಕಬ್ಬೆಕಟ್ಟೆ ಶನೇಶ್ವರ ದೇವಸ್ಥಾನದ ಬಳಿ 30 ಸಾವಿರ ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ನಂತರ ಸಂಜೆ 4 ಗಂಟೆಗೆ ಪಾದಯಾತ್ರೆ ಮುಂದುವರೆಯಲಿದ್ದು, ಬೇಗೂರಿನ ಪದವಿ ಪೂರ್ವ ಕಾಲೇಜು ಬಳಿ ಇರುವ ತ್ರಿಪುರ ಕನ್ವೆನ್ಷನ್ ಸೆಂಟರ್‌ನಲ್ಲಿ ಮೊದಲ ದಿನದ ಪಾದಯಾತ್ರೆ ಮುಕ್ತಾಯಗೊಳ್ಳಲಿದೆ.

ಸಂವಾದ: ಪಾದಯಾತ್ರೆ ಅಂಗವಾಗಿ ಮಾರ್ಗದುದ್ದಕ್ಕೂ ರಸ್ತೆಯ ಇಕ್ಕೆಲಗಳಲ್ಲಿ ಕಾಂಗ್ರೆಸ್ ಧ್ವಜ ಹಾಗೂ ಭಾರತ ಐಕ್ಯತಾ ಯಾತ್ರೆಗೆ ಸಂಬಂಧಿಸಿದ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ. ಗುಂಡ್ಲುಪೇಟೆಯಲ್ಲಿ ಮಧ್ಯಾಹ್ನ ವಿಶ್ರಾಂತಿ ವೇಳೆ ರಾಹುಲ್ ಗಾಂಧಿ ಅವರು ಆದಿವಾಸಿಗಳು ಮತ್ತು ಚಾಮರಾಜನಗರ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರ ಜೊತೆ ಸಂವಾದ ನಡೆಸಲಿದ್ದಾರೆ. ನಾಳೆ ಭಾರತ ಐಕ್ಯತಾ ಯಾತ್ರೆ ರಾಜ್ಯದಲ್ಲಿ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಇಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಧ್ರುವನಾರಾಯಣ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ವಿಧಾನಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಮುಂತಾದ ನಾಯಕರು ಗುಂಡ್ಲುಪೇಟೆಗೆ ಆಗಮಿಸಿ, ಸಿದ್ಧತೆಗಳನ್ನು ಪರಿಶೀಲಿಸಿದರು.

ಭಾರತ್ ಜೋಡೋ ಪಾದಯಾತ್ರೆ ಅಂಗವಾಗಿ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಏರ್ಪಡಿಸಿದ್ದು, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಕುಮಾರ್ ಅವರು ಬಹಿರಂಗ ಸಭೆ ನಡೆಯುವ ಸ್ಥಳ, ಮಧ್ಯಾಹ್ನ ವಿಶ್ರಾಂತಿ ಪಡೆಯುವ ಸ್ಥಳ ಹಾಗೂ ರಾತ್ರಿ ವಾಸ್ತವ್ಯ ಸ್ಥಳದ ಪರಿಶೀಲನೆ ▶ 8ನೇ ಪುಟಕ್ಕೆ



ವಾಹನ ಸಂಚಾರ ಮಾರ್ಗ ಬದಲು

ಮೈಸೂರು, ಸೆ.29– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಶುಕ್ರವಾರ (ಸೆ.30) ಗುಂಡ್ಲುಪೇಟೆಯಲ್ಲಿ ಭಾರತ್ ಜೋಡೋ ಯಾತ್ರೆ ನಡೆಯಲಿರುವುದರಿಂದ ಚಾಮರಾಜನಗರ ಮತ್ತು ಮೈಸೂರು ಜಿಲ್ಲಾ ಎಸ್ಪಿಗಳು ಸೆ.30ರಿಂದ ಅ.2ರವರೆಗೆ ವಾಹನ ಸಂಚಾರಕ್ಕೆ ಬದಲಿ ಮಾರ್ಗವನ್ನು ಸೂಚಿಸಿದ್ದಾರೆ.

ಸೆ.30 ಮತ್ತು ಅ.1ರಂದು ಕೇರಳದ ಸುಲ್ತಾನ್ ಬತ್ತೇರಿಯಿಂದ ಮೂಲೆಹೊಳೆ ಮಾರ್ಗವಾಗಿ ಮೈಸೂರಿಗೆ ಸಂಚರಿಸುವ ವಾಹನಗಳು ಗುಂಡ್ಲುಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಯಳದಹುಂಡಿ ಗ್ರಾಮದ ಕ್ರಾಸ್ ಬಳಿಯಿಂದ ಚೆನ್ನಮಲ್ಲಿಪುರ–ಹೊಂಗಹಳ್ಳಿ–ಮೂಕಹಳ್ಳಿ–ಮುಂಟಿಪುರ–ಬರಗಿ ಮಾರ್ಗವಾಗಿ ಚಲಿಸಿ, ಬೇಗೂರು ಠಾಣಾ ಸರಹದ್ದಿನ ದೇಶಿಪುರ ಕಾಲೋನಿ ಕ್ರಾಸ್–ದೇಶಿಪುರ–ಆಲತ್ತೂರು–ಹಸಗೂಲಿ ಮಾರ್ಗವಾಗಿ ಗರಗನಹಳ್ಳಿ ಗೇಟ್‌ಗೆ ಬಂದು ಮೈಸೂರಿಗೆ ತೆರಳುವುದು.

ಕೇರಳದ ಸುಲ್ತಾನ್ ಬತ್ತೇರಿಯಿಂದ ಮೂಲೆಹೊಳೆ ಮಾರ್ಗವಾಗಿ ಊಟಿ ಕಡೆಗೆ ಸಂಚರಿಸಲಿರುವ ಮತ್ತು ಊಟಿಯಿಂದ ಸುಲ್ತಾನ್ ಬತ್ತೇರಿಗೆ ಸಂಚರಿಸಲಿರುವ ವಾಹನಗಳನ್ನು ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದಿನ ಕಗ್ಗಳದಹುಂಡಿ ಕ್ರಾಸ್ ಬಳಿಯಿಂದ ಬೇರಂಬಾಡಿ–ಬೀಚನಹಳ್ಳಿ–ಲಕ್ಕಿಪುರ–ಗೋಪಾಲಪುರ–ಕಲುಣಗಳ್ಳಿ ಕಳ್ಳಿಪುರ–ದೇವರಹಳ್ಳಿ–ಹಂಗಳ ಮಾರ್ಗವಾಗಿ ಊಟಿಗೆ ಮತ್ತು ಕೇರಳದ ಕಡೆಗೆ ತೆರಳುವುದು. ▶ 8ನೇ ಪುಟಕ್ಕೆ

ಬಾಲಿವುಡ್ ಗಾಯಕಿ ಕನ್ನಿಕಾ ಕಪೂರ್ ಗಾಯನ ಮೋಡಿಗೆ ಕುಣಿದು ಕುಪ್ಪಳಿಸಿದ ಯುವ ಪಡೆ!

ನೆರೆದವರ ರಂಜಿಸಿದ ನೃತ್ಯ ರೂಪಕಗಳು, ಗಾಯನ



ಮೈಸೂರು, ಸೆ.29(ಜಿಎ)– ಬಾಲಿವುಡ್ ಖ್ಯಾತ ಹಿನ್ನೆಲೆ ಗಾಯಕಿ ಕನ್ನಿಕಾ ಕಪೂರ್ ಗಾಯನ ಮೋಡಿಗೆ ಮೈಸೂರಿನ ಯುವ ಸಮೂಹ ಕುಣಿದು ಕುಪ್ಪಳಿಸಿತು.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿರುವ 'ಯುವ ದಸರಾ'ದಲ್ಲಿ 2ನೇ ದಿನವಾದ ಗುರುವಾರ ಬಾಲಿವುಡ್‌ನ ಕನ್ನಿಕಾ ಕಪೂರ್ ಸುಮಧುರವಾಗಿ ಮಸ್ತ್ ಕಲಂದರ್, ಅಲ್ಲು ಅರ್ಜುನ್ ನಟಿಸಿರುವ ಪುಷ್ಪ ಚಿತ್ರದ ಹಿಂದಿ ಅವತರಣಿಕೆಯ 'ಹೂ ಬೋಲೆಗಾ ಹೂಹು ಬೋಲೇಗಾ' ಸೇರಿದಂತೆ ಬಾಲಿವುಡ್ ಚಿತ್ರಗಳ ಹಲವು ಹಾಡುಗಳನ್ನು ಹಾಡುವುದರ ಜೊತೆಗೆ ನರ್ತಿಸಿದರೆ, ಪಡ್ಡೆ ಹುಡುಗರು ಹುಚ್ಚೆದ್ದು ಕುಣಿದು, ಕುಪ್ಪಳಿಸಿದರು. ▶ 8ನೇ ಪುಟಕ್ಕೆ

ತಪ್ಪಿದ ಭಾರೀ ಅನಾಹುತ...



'ಯುವ ದಸರಾ' ನಡೆಯುವ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರಿನ ವಿವೇಕಾನಂದನಗರದ ನಿವಾಸಿ ಗೌರಮ್ಮ, ಸ್ವೀಟ್ ಕಾರ್ನ್ ಅನ್ನು ತಳ್ಳುವ ಗಾಡಿಯಲ್ಲಿ ಮಾರಾಟ ಮಾಡುತ್ತಿದ್ದರು. ಈ ವೇಳೆ ಆಕಸ್ಮಿಕವಾಗಿ ಗಾಡಿಯೊಳಗಿನ ಸಿಲಿಂಡರ್‌ಗೆ ಬೆಂಕಿ ಹೊತ್ತಿಕೊಂಡಿತು. ಬೆಂಕಿಯ ಜ್ವಾಲೆ ತಾಗಿ ಗೌರಮ್ಮ ಅವರ ಸೀರೆಯೂ ಸ್ವಲ್ಪ ಸುಟ್ಟಿದ್ದು, ಅದೃಷ್ಟವಶಾತ್ ಯಾವುದೇ ಅಪಾಯವಾಗಿಲ್ಲ. ತಕ್ಷಣ ಸ್ಥಳದಲ್ಲಿಯೇ ಇದ್ದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸಿ, 5 ಕೆ.ಜಿ ಸಿಲಿಂಡರ್ ಅನ್ನು ಗಾಡಿಯಿಂದ ಹೊರತೆಗೆದು, ಭಾರೀ ಅನಾಹುತ ತಪ್ಪಿಸಿದರು.

ನಕ್ಕರೆ ಅದೇ ಸ್ವರ್ಗ

ಆತ : ನಮ್ಮ ಏರಿಯಾದಲ್ಲೆಲ್ಲಾ ಡೆಂಗ್ಯೂ ಹಬ್ಬಿರೋದು ಒಳ್ಳೆಯದಾಯ್ತು

ಈತ : ಯಾಕೆ ಹೀಗೆ ಹೇಳ್ತಿದೀಯಾ?

ಆತ : ಕಳೆದ ಒಂದು ತಿಂಗಳಿಂದ ನಮ್ಮ ಅತ್ತೆಯವರು ನಮ್ಮ ಮನೆ ಕಡೆ ತಲೆ ಹಾಕಿಲ್ಲ!!"

ಮೈಸೂರು ಮಿತ್ರ

ಶುಕ್ರವಾರ, 30 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತಾಳ್ಮೆಯಿಂದ ಕಾಯುವುದಾದರೆ ಬಯಸಿದ್ದೇ ದೊರೆಯುತ್ತದೆ. – ಡಿಸ್ರೇಲಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಜನಕ್ಕಂಜದಿದ್ದರೂ ಮನಕ್ಕಂಜು

ನಿಮ್ಮ ಪತ್ರಗಳು

ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಅನ್ಯಾಯ...!?

ಮಾನ್ಯರೆ,

ಮೈಸೂರಿನ ಮಾನಸಗಂಗೋತ್ರಿ ಸ್ನಾತಕೋತ್ತರ ಪತಿಕೋದ್ಯಮ ವಿದ್ಯಾರ್ಥಿಗಳ ಕಲಿಕೆಗೆ ಇದ್ದಂತಹ ರೇಡಿಯೋ ಮಾನಸ 89.6 ಅನ್ನು ವಿದ್ಯಾರ್ಥಿಗಳಿಂದ ಮೈಸೂರು ವಿಶ್ವವಿದ್ಯಾನಿಲಯ ಕಸಿದುಕೊಂಡಿದೆ. ರೇಡಿಯೋ ಮಾನಸ ಕೋ–ಆರ್ಡಿನೇಟರ್ ಆಗಿದ್ದ ಪ್ರೊಫೆಸರ್ ಅವರನ್ನು ಕಾಲಾವಧಿಯ ಕಾರಣ ತಿಳಿಸಿ ತೆಗೆದುಹಾಕಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ವಿವಿಯ ಕುಲಪತಿ ಪ್ರೊ. ಜಿ ಹೇಮಂತ್‌ಕುಮಾರ್ ಅವರ ಹತ್ತಿರ ಮಾತನಾಡಿದಾಗ ಹೌದು ಕೋ–ಆರ್ಡಿನೇಟರ್‌ನಿಂದ ಅವರನ್ನು ತೆಗೆದು ಹಾಕಿದ್ದೇವೆ.

ಆದರೆ ನಿಮ್ಮ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಇದೇ ವರ್ಷದ 2ನೇ ಸೆಮಿಸ್ಟರ್ ಜುಲೈ ತಿಂಗಳಿಂದ ಪ್ರಾರಂಭವಾಗುತ್ತದೆ. ಆಗ ಪ್ರಾಯೋಗಿಕ ತರಗತಿಯಾಗಿ ಮಧ್ಯಾಹ್ನ 3ರಿಂದ 5ರವರೆಗೆ ರೇಡಿಯೋ ಮಾನಸವನ್ನು ನೀಡುತ್ತೇವೆ. ಆ ತರಗತಿಗೆ ಮಾರ್ಗದರ್ಶಕರಾಗಿ ಅವರನ್ನೇ ನೇಮಿಸುತ್ತೇವೆ ಎಂದ ತಿಳಿಸಿದ್ದರು. ಆದರೆ ತರಗತಿ ಪ್ರಾರಂಭವಾಗಿ ಎರಡು ತಿಂಗಳಾದರೂ ಇನ್ನೂ ಕೂಡ ನಮಗೆ ರೇಡಿಯೋ ತರಗತಿಗಳು ಪ್ರಾರಂಭವಾಗಿಲ್ಲ.

ಈ ಸೆಮಿಸ್ಟರ್ (2ನೆ ಸೆಮಿಸ್ಟರ್) ನಲ್ಲಿ ನಮಗೆ ಬೇಸಿಕ್ ಟಿ ವಿ ಮತ್ತು ರೇಡಿಯೋ ಪ್ರೊಡಕ್ಷನ್ ಪತ್ರಿಕೆ ಇದ್ದು ಇದಕ್ಕೆ ನಮಗೆ ರೇಡಿಯೋ ತರಗತಿ ಅಗತ್ಯವಿದೆ. ಈ ಪತ್ರಿಕೆಯು ಸಂಪೂರ್ಣ ಪ್ರಾಯೋಗಿಕ ಪತ್ರಿಕೆಯಾಗಿದ್ದು ನಮಗೆ ಪ್ರಾಯೋಗಿಕ ತರಗತಿಗಳು ಬೇಕಾಗಿದೆ. ಈ ಪತ್ರಿಕೆಯ ಶಿಕ್ಷಕರಾದ ಪ್ರೊಫೆಸರ್ ಅವರಿಗೂ ಹಾಗೂ ವಿಭಾಗಕ್ಕೆ ಇದುವರೆಗೂ ಯಾವುದೇ ರೀತಿಯ ಸಂದೇಶವನ್ನು ಮೈಸೂರು ವಿಶ್ವವಿದ್ಯಾನಿಲಯ ಕಳಿಸಿಲ್ಲ. ಕುಲಪತಿ ಪ್ರೊ. ಜಿ ಹೇಮಂತ್ ಕುಮಾರ್ ಅವರು ವಿಶ್ವವಿದ್ಯಾಲಯದ ಯಾವುದೇ ಕಾರ್ಯಕ್ರಮದಲ್ಲಿ ಮಾತನಾಡಿದರೂ ವಿದ್ಯಾರ್ಥಿಗಳಿಗೆ ಕೌಶಲ್ಯ ಬಹಳ ಮುಖ್ಯ. ವಿದ್ಯಾರ್ಥಿಗಳು ಕೌಶಲ್ಯವನ್ನು ಕಲಿಯಬೇಕು ಎಂದು ಹೇಳುತ್ತಾರೆ. ಈ ರೀತಿ ಹೇಳುವವರು ಪತ್ರಿಕೋದ್ಯಮ ವಿದ್ಯಾರ್ಥಿಗಳ ಮೇಲೆ ಏಕೆ ಈ ಮಲತಾಯಿ ಧೋರಣೆ! ರೇಡಿಯೋ ಮಾನಸ ಮೈವಿವಿಯ ಆಸ್ತಿ ನಮಗೂ ಗೊತ್ತು. ಆದರೆ ನಾವು ವಿಶ್ವವಿದ್ಯಾಲಯಕ್ಕೆ ಏನು ಅಲ್ಲವೇ? ನೂರಾರು ಕನಸುಗಳನ್ನು ಹೊತ್ತು ಮಾನಸಗಂಗೋತ್ರಿಗೆ ಬಂದು ವಿದ್ಯಾಭ್ಯಾಸ ಹಾಗೂ ಕೌಶಲ್ಯಗಳನ್ನು ಕಲಿಯಲು ಬಂದಿದ್ದೇವೆ. ರೇಡಿಯೋ ಸ್ಟೇಷನ್ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಉಪಯೋಗವಾಗಬೇಕು. ಅದನ್ನು ಬಿಟ್ಟರೆ ಆರ್ಕಿಟೆಕ್ಚರ್ ವಿದ್ಯಾರ್ಥಿಗಳಿಗಲ್ಲ. ಪತ್ರಿಕೋದ್ಯಮ ವಿದ್ಯಾರ್ಥಿಗಳು ಕೂಡ ಆರ್ಕಿಟೆಕ್ಚರ್ ವಿಶ್ವವಿದ್ಯಾನಿಲದ ಆಸ್ತಿ ಎಂದು ತರಗತಿಗೆ ಹೋಗಿ ಕುಳಿತರೆ ತರಗತಿ ಮಾಡುತ್ತಾರೆಯೇ? ಹಾಗಾದರೆ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಇರಬೇಕಾದ ರೇಡಿಯೋ ಮಾನಸ ಬೇರೆ ವಿಭಾಗಕ್ಕೆ ನೀಡಿದ್ದಾದರೂ ಏಕೆ? ನಾವು ಕೌಶಲ್ಯಗಳನ್ನು ಹೇಗೆ ಕಲಿಯುವುದು?ನಮ್ಮ ಪಠ್ಯ ಶಿಕ್ಷಣಕ್ಕೆ ತೊಂದರೆಯಾಗುತ್ತಿದೆಯಲ್ಲ ಇದಕ್ಕೆ ಯಾರು ನ್ಯಾಯ ಕೊಡಿಸುವವರು? ಸಂವಿಧಾನದ ನಾಲ್ಕನೇ ಅಂಗ ಎಂದು ಕರೆಯುವ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ನ್ಯಾಯ ಎಲ್ಲಿದೆ? ಇದಕ್ಕೆಲ್ಲ ಉತ್ತರ ನೀಡಿ.

– ಪವಿತ್ರ ವಿ, ಪತ್ರಿಕೋದ್ಯಮ ವಿದ್ಯಾರ್ಥಿನಿ, ಮಾನಸಗಂಗೋತ್ರಿ ಮೈಸೂರು.

ನಾಮಫಲಕ ಮುರಿದವರ ಮೇಲೆ ಕ್ರಮ ಕೈಗೊಳ್ಳಿ

ಮಾನ್ಯರೇ

ಮೈಸೂರಿನ ಹಿನಕಲ್ 4ನೇ ಕ್ರಾಸ್‌ನಲ್ಲಿ ಅಳವಡಿಸಿರುವ 'ಸಿದ್ದರಾಮಯ್ಯ ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್' ನಾಮಫಲಕಕ್ಕೆ ಯಾವುದೋ ವಾಹನ ಡಿಕ್ಕಿ ಹೊಡೆದೋ ಅಥವಾ ಕಿಡಿಗೇಡಿಗಳ ಕೃತ್ಯದಿಂದ ಮುರಿದು ಬಿದ್ದಿದೆ. ಈ ಕೃತ್ಯವೆಸಗಿರುವವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ವಿಜಯನಗರ ಠಾಣೆ ಪೊಲೀಸರು ಕ್ರಮ ಕೈಗೊಳ್ಳಬೇಕು. ಹಾಗೆಯೇ ಹೂಟಗಳ್ಳಿ ನಗರಸಭೆ ಆಯುಕ್ತರು



ಈ ಸಂಬಂಧ ಪೊಲೀಸರಿಗೆ ಅಧಿಕೃತವಾಗಿ ದೂರು ಸಲ್ಲಿಸುವುದರ ಜೊತೆಗೆ ನಾಮಫಲಕವನ್ನು ಸರಿಪಡಿಸಲು ಸೂಕ್ತ ಕ್ರಮ ವಹಿಸಬೇಕು.

–ಶ್ರೀಧರ್ ಮಾಯಪ್ಪ, ಹಿನಕಲ್

ನಾಡಗೀತೆಗೆ ಸಮಯ ನಿಗದಿ ಸ್ವಾಗತಾರ್ಹ

ಮಾನ್ಯರೆ,

ರವೀಂದ್ರನಾಥ ಟಾಗೋರ್ ಬರೆದ "ಜನಗಣ ಮನ ಅಧಿನಾಯಕ ಜಯಹೇ" ನಮ್ಮ ರಾಷ್ಟ್ರಗೀತೆ ನಮ್ಮ ಹೆಮ್ಮೆ ರಾಷ್ಟ್ರಗೀತೆಯನ್ನು 52 ಸೆಕೆಂಡ್‌ಗಳಲ್ಲಿ ಹಾಡಬೇಕೆಂಬ ನಿಯಮವಿದೆ ಹಾಗೂ ರಾಷ್ಟ್ರಗೀತೆ ಹಾಡುವ ಸಮಯದಲ್ಲಿ ರಾಷ್ಟ್ರಗೀತೆ ಮುಗಿಯುವರೆಗೂ ಅಲುಗಾಡದೆ ನಿಲ್ಲಬೇಕೆಂಬ ನಿಯಮವು ಇದೆ.

ಪ್ರಸ್ತುತ ಪ್ರತಿಯೊಂದು ಚಿತ್ರಮಂದಿರಗಳಲ್ಲಿ ಚಲನಚಿತ್ರ ಪ್ರಾರಂಭವಾಗುವ ಮುನ್ನ ರಾಷ್ಟ್ರಗೀತೆಯನ್ನು ಪ್ರಸಾರ ಮಾಡಲಾಗುತ್ತದೆ. ಈ ಗೌರವ ಸೂಚಿಸುವ ಪದ್ದತಿ ಪ್ರಾರಂಭವಾಗಿರುವುದು ಉತ್ತಮ ಬೆಳವಣಿಗೆಯಾಗಿದೆ. ಇದೇ ಹಾದಿಯಲ್ಲಿ ಕರ್ನಾಟಕ ಸರ್ಕಾರ ಕುವೆಂಪುರವರು ಬರೆದ "ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ" ನಾಡಗೀತೆಯನ್ನು 2:30 ನಿಮಿಷದಲ್ಲಿ ಹಾಡ ಬೇಕೆಂದು ನಿಯಮ ತಂದಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಇದರಿಂದಾಗಿ ನಾಡಗೀತೆಗೆ ಗೌರವ ಸಲ್ಲಿಸಿದಂತಾಗುತ್ತದೆ. ಕರ್ನಾಟಕದ ನಾಡಗೀತೆ ಇತಿಹಾಸವನ್ನು ಗಮನಿಸುವುದಾದರೆ ಮೈಸೂರು ರಾಜ್ಯದ ಸಮಯದಲ್ಲಿ ಬಸವಪ್ಪ ಶಾಸ್ತ್ರಿಗಳು ಬರೆದ "ಕಾಯೌ ಶ್ರೀ ಗೌರಿ"ಯನ್ನು ನಾಡಗೀತೆಯನ್ನಾಗಿ ಎಲ್ಲೆಡೆ ಹಾಡಲಾಗುತ್ತಿತ್ತು.

ನಂತರ 1973 ರಲ್ಲಿ ಮೈಸೂರು ರಾಜ್ಯವನ್ನು ಕರ್ನಾಟಕ ಎಂದೂ ನಾಮಕರಣ ಮಾಡಿದ ನಂತರ 1924 ರಲ್ಲಿ ರಾಷ್ಟ್ರಕವಿ ಕುವೆಂಪುರವರು "ಕಿಶೋರ್ ಚಂದ್ರ" ಕಾವ್ಯನಾಮದಲ್ಲಿ ಬರೆದ "ಭಾರತ ಜನನಿಯ ತನುಜಾತೆ" ಗೀತೆಯನ್ನು ರಾಜ್ಯದೆಲ್ಲೆಡೆ ಹಾಡಲಾಗುತ್ತಿತ್ತು, ಅದರೆ ಅಧಿಕೃತವಾಗಿ ನಾಡಗೀತೆ ಎಂದೂ ಘೋಷಿಸಿರಲ್ಲಿಲ್ಲ. ನಂತರ ಈ ಗೀತೆಯನ್ನು ಮೈಸೂರು ಅನಂತ ಸ್ವಾಮಿಯವರು ರಾಗಸಂಯೋಜಿಸಿ ರಾಜ್ಯದೆಲ್ಲೆಡೆ ಜನಪ್ರಿಯಗೊಳಿಸಿದ ಮೇಲೆ 2004 ಫೆಬ್ರವರಿ 23 ರಂದು ಕರ್ನಾಟಕ ಸರ್ಕಾರ ಈ ಗೀತೆಯನ್ನು ಅಧಿಕೃತ ನಾಡಗೀತೆಯನ್ನಾಗಿ ಘೋಷಿಸಿತು. ಪ್ರಸ್ತುತ ನಾಡಗೀತೆಯನ್ನು 2:30 ನಿಮಿಷಗಳಲ್ಲಿ ಹಾಡಬೇಕೆಂಬ ನಿಯಮ ಜಾರಿಗೆ ತಂದಿರುವುದು ಉತ್ತಮ ಬೆಳವಣಿಗೆಯಾಗಿದೆ. ನಾಡಗೀತೆಯನ್ನು ರಾಷ್ಟ್ರಗೀತೆಯಂತೆ ಎಲ್ಲಾ ರಾಜ್ಯದ ಎಲ್ಲಾ ಚಿತ್ರಮಂದಿರಗಳಲ್ಲಿ ಚಲನಚಿತ್ರ ಪ್ರಾರಂಭವಾಗುವುದಕ್ಕಿಂತ ಮುಂಚೆ ಹಾಡಬೇಕೆಂಬ ನಿಯಮ ತಂದರೆ ನಮ್ಮ ನಾಡಗೀತೆಗೆ ಗೌರವ ಸಲ್ಲಿಸಿದಂತಾಗುತ್ತದೆ. ಕರ್ನಾಟಕ ಸರ್ಕಾರದ ನಾಡಗೀತೆಗೆ ಸಮಯ ನಿಗದಿ ಮಾಡಿರುವುದಕ್ಕೆ ರಾಜ್ಯದ ಎಲ್ಲಾ ಜನತೆಯ ಪರವಾಗಿ ರಾಜ್ಯ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.



ರಾಜ್ಯಮಟ್ಟದ ದಸರಾ ಪಂಜ ಕುಸ್ತಿ ಪಂದ್ಯಾವಳಿ

ಮೈಸೂರಿನ ಪುನೀತ್ 'ದಸರಾ ಶ್ರೀ', ಹಾಸನದ ಮಧುರಾ 'ದಸರಾ ಕುಮಾರಿ', ಅಂತೋನಪ್ಪ 'ದಸರಾ ನವಚೇತನ' ಬೆಳಗಾವಿಯ ರಿಜ್ವಾನಾ 'ದಸರಾ ನವಚೇತನ ತಾರೆ'

ಮೈಸೂರು, ಸೆ.29(ಎಂಕೆ)– ನಗರದ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆದ 'ರಾಜ್ಯಮಟ್ಟದ ದಸರಾ ಪಂಜ ಕುಸ್ತಿ ಪಂದ್ಯಾವಳಿ'ಯಲ್ಲಿ ಮೈಸೂರಿನ ಪುನೀತ್ 'ದಸರಾ ಶ್ರೀ', ಹಾಸನದ ಕೆ.ಎನ್.ಮಧುರಾ 'ದಸರಾ ಕುಮಾರಿ', ಬಿ.ಸಿ.ಅಂತೋನಪ್ಪ 'ದಸರಾ ನವ ಚೇತನ' ಹಾಗೂ ಬೆಳಗಾವಿಯ ರಿಜ್ವಾನಾ 'ದಸರಾ ನವಚೇತನ ತಾರೆ'ಯಾಗಿ ಹೊರಹೊಮ್ಮಿದರು.

ವಿವಿಧ ವಿಭಾಗಗಳಲ್ಲಿ ನಡೆದ ದಸರಾ ಪಂಜ ಕುಸ್ತಿ ಪಂದ್ಯಾವಳಿಯಲ್ಲಿ **ಮಹಿಳೆಯರ ವಿಭಾಗದಲ್ಲಿ 50 ಕೆಜಿ ಒಳಗಿನ ಗ್ರೂಪ್‌ನಲ್ಲಿ** ಹಾಸನದ ಗೋಪಿಕಾ ಪ್ರಥಮ ಸ್ಥಾನ ಪಡೆದರೆ, ದೀಕ್ಷಾ ದ್ವಿತೀಯ ಸ್ಥಾನ ಪಡೆದುಕೊಂಡರು. **55 ಕೆಜಿ ಗ್ರೂಪ್‌ನಲ್ಲಿ** ಬೆಂಗಳೂರಿನ ಅಲಿಯಾ ಮುನ್ನಾವರ್ ಪ್ರಥಮ, ಉಡುಪಿಯ ಪ್ರತೀಕ್ಷಾ ವಿ ಅಮೀನ್ ದ್ವಿತೀಯ, ಬೆಳಗಾವಿಯ ಲಕ್ಷ್ಮಿ ಅಂಗಡಿ ತೃತೀಯ ಬಹುಮಾನ ಗಳಿಸಿದರು.

60 ಕೆಜಿ ಗ್ರೂಪ್‌ನಲ್ಲಿ ಬೆಂಗಳೂರಿನ ಬಿ.ವಿ. ಯಶಸ್ವಿನಿ ಪ್ರಥಮ ಸ್ಥಾನ ಗಳಿಸಿದರೆ, ಉಡುಪಿಯ ಅಲ್ವಿರಾ ರೀನಾಲ್ ಮಾಬೆನ್ ದ್ವಿತೀಯ ಬಹುಮಾನ ಪಡೆದರು. **65 ಕೆಜಿ ಗ್ರೂಪ್‌ನಲ್ಲಿ** ಉಡುಪಿಯ ನಮಿತಾ ಪ್ರಥಮ, ಮೈಸೂರಿನ ಹಂಸ ದ್ವಿತೀಯ ಹಾಗೂ ಉಡುಪಿಯ ಜ್ಯೋತಿ ತೃತೀಯ ಸ್ಥಾನ ಪಡೆದರೆ, **70 ಕೆಜಿ ಗ್ರೂಪ್‌ನಲ್ಲಿ ಹಾಸನದ** ಸುಶೀಲಾ ಪ್ರಥಮ ಬಹುಮಾನ ಗೆದ್ದರೆ, ಬಿಜಾಪುರದ ಭಾಗವತಿ ದ್ವಿತೀಯ ಸ್ಥಾನ ಪಡೆದರು. ಹಾಗೆಯೇ **80 ಕೆಜಿ ಗ್ರೂಪ್‌ನಲ್ಲಿ** ಹಾಸನದ ಕೆ.ಎನ್.ಮಧುರಾ ಪ್ರಥಮ ಹಾಗೂ ಉಡುಪಿಯ ಅಕ್ಷತಾ ಟಿ.ಶೆಟ್ಟಿ ದ್ವಿತೀಯ ಬಹುಮಾನ ಗೆದ್ದರು.

ವಿಶೇಷಚೇತನ ಮಹಿಳೆಯರ ವಿಭಾಗ: 50 ಕೆಜಿ ಒಳಗಿನ ವಿಭಾಗದಲ್ಲಿ ಹಾವೇರಿಯ ಮಂಜುಳಾ ಲಾನಾನಿ ಪ್ರಥಮ ಹಾಗೂ 60 ಕೆಜಿ ಗ್ರೂಪ್‌ನಲ್ಲಿ ಮಹಬೂಬ್ಬಿ ಸೌಧಗರ್ ಪ್ರಥಮ ಬಹುಮಾನ ಪಡೆದರು. **ವಿಶೇಷಚೇತನ ಮಹಿಳೆಯ ವಿಭಾಗ (ವೀಲ್‌ಚೇರ್): 50 ಕೆಜಿ ಗ್ರೂಪ್‌ನಲ್ಲಿ** ಬೆಳಗಾವಿಯ ಆರತಿ ಸುರೇಶ್ ಪವಾರ್ ಪ್ರಥಮ ಸ್ಥಾನ ಪಡೆದರೆ, ಎ.ನಿರ್ಮಲ ದ್ವಿತೀಯ ಸ್ಥಾನ ಪಡೆದುಕೊಂಡರು. **60 ಕೆಜಿ ಗ್ರೂಪ್‌ನಲ್ಲಿ** ಬೆಳಗಾವಿಯ ರಿಜ್ವಾನ ಪ್ರಥಮ, **70 ಕೆಜಿ ಗ್ರೂಪ್‌ನಲ್ಲಿ** ಹೊಸಿಂಬಿ ಎಂ ಪಕಲಿ ಪ್ರಥಮ, **70+ ಗ್ರೂಪ್‌ನಲ್ಲಿ** ಮೈಸೂರಿನ ಎಂ. ಶಕುಂತಲಾ ಮೊದಲ ಬಹುಮಾನ ಗೆದ್ದುಕೊಂಡರು.

ವಿಶೇಷಚೇತನ ಪುರುಷರ ವಿಭಾಗ: 60 ಒಳಗಿನ ವಿಭಾಗದಲ್ಲಿ ಬೆಂಗಳೂರಿನ ಮಂಜುನಾಥ್ ಪವಾರ್ ಪ್ರಥಮ, ಕೊಪ್ಪಳದ ಸಣ್ಣಗುಂಡಪ್ಪ ದ್ವಿತೀಯ, ಗದಗ್‌ನ ಗಣೇಶ್ ಕೆ ಛಲವಾದಿ ತೃತೀಯ ಸ್ಥಾನ ಪಡೆದರೆ, **70 ಕೆಜಿ ವಿಭಾಗದಲ್ಲಿ** ಮೈಸೂರಿನ ಶ್ರೀನಿವಾಸ್ ಪ್ರಥಮ ಸ್ಥಾನ ಪಡೆದರು. **80 ಕೆಜಿ ವಿಭಾಗದಲ್ಲಿ** ತುಮಕೂರಿನ ಎಂ.ಎಸ್.ಮೃತ್ಯುಂಜಯ ಪ್ರಥಮ, ಬಾಗಲಕೋಟೆಯ ಸಿದ್ದಾರೋಡ ಕೊಪ್ಪದ ದ್ವಿತೀಯ ಬಹುಮಾನ ಗೆದ್ದರು. **80+ ಗ್ರೂಪ್‌ನಲ್ಲಿ** ಉಡುಪಿಯ ಬಿ.ಸುರೇಶ್ ಪ್ರಥಮ, ಮೈಸೂರಿನ ಗಣೇಶ್ ಕುಮಾರ್ ಶರ್ಮಾ ದ್ವಿತೀಯ ಹಾಗೂ ಬಾಗಲಕೋಟೆಯ ವೈ.ವಿಶ್ವನಾಥ್ ತೃತೀಯ ಬಹುಮಾನ ಪಡೆದರು.

ವಿಶೇಷಚೇತನ ಪುರುಷರ ವಿಭಾಗ(ವೀಲ್‌ಚೇರ್): 55 ಕೆಜಿ ಗ್ರೂಪ್‌ನಲ್ಲಿ ಮೈಸೂರಿನ ಶಿಹಾಬುದ್ದೀನ್ ಪ್ರಥಮ, ರಿಜ್ವಾನ್ ಖಾನ್ ದ್ವಿತೀಯ, ಬಿ.ಸಿ.ಯಮುನಪ್ಪ ತೃತೀಯ ಸ್ಥಾನ ಪಡೆದರೆ, **65 ಕೆಜಿ ಗ್ರೂಪ್‌ನಲ್ಲಿ** ಹಾಸನದ ಬಿ.ಸಿ.ಅಂತೋನಪ್ಪ ಪ್ರಥಮ, ಮೈಸೂರಿನ ಈರಣ್ಣ ಅಂಗಡಿ ದ್ವಿತೀಯ ಬಹುಮಾನ ಗೆದ್ದರು. **75 ಕೆಜಿ ಗ್ರೂಪ್‌ನಲ್ಲಿ** ರಾಮನಗರದ ಟಿ.ಹೆಚ್.ಕೃಷ್ಣ ಮೂರ್ತಿ ಪ್ರಥಮ, ಬೆಳಗಾವಿ ಅಬ್ದುಲ್ ಮುಲ್ಲಾ ದ್ವಿತೀಯ, ಮಹೇಶ್ ಬಿ ಅಂಗಡಿ ತೃತೀಯ ಸ್ಥಾನ ಪಡೆದರು. ಹಾಗೆಯೇ **75+ ಗ್ರೂಪ್‌ನಲ್ಲಿ** ಬೆಂಗಳೂರಿನ ಬಿ.ದೇವರಾಜ ಪ್ರಥಮ, ಮೈಸೂರಿನ ಹೆಚ್.ವಿ.ಸಂತೋಷ್ ದ್ವಿತೀಯ ಹಾಗೂ ಕೆ.ಪಿ.ರಾಮಸ್ವಾಮಿ ತೃತೀಯ ಸ್ಥಾನ ಪಡೆದುಕೊಂಡರು.



'ರಾಜ್ಯಮಟ್ಟದ ದಸರಾ ಪಂಜ ಕುಸ್ತಿ ಪಂದ್ಯಾವಳಿ'ಯಲ್ಲಿ (ಎಡದಿಂದ) ಹಾಸನದ ಬಿ.ಸಿ.ಅಂತೋನಪ್ಪ 'ದಸರಾ ನವಚೇತನ', ಕೆ.ಎನ್.ಮಧುರಾ 'ದಸರಾ ಕುಮಾರಿ', ಮೈಸೂರಿನ ಪುನೀತ್ 'ದಸರಾ ಶ್ರೀ', ಹಾಗೂ ಬೆಳಗಾವಿಯ ರಿಜ್ವಾನಾ(ವೀಲ್‌ಚೇರ್‌ನಲ್ಲಿ ಕುಳಿತಿರುವವರು) 'ದಸರಾ ನವಚೇತನ ತಾರೆ'ಯಾಗಿ ಹೊರಹೊಮ್ಮಿದರು.

ಪುರುಷರ ವಿಭಾಗದ ಫಲಿತಾಂಶ ಪಟ್ಟಿ ಮಾಯ...!

ದಸರಾ ಪಂಜ ಕುಸ್ತಿ ಪಂದ್ಯಾವಳಿಯಲ್ಲಿ ಪುರುಷರ ವಿಭಾಗದ ಫಲಿತಾಂಶ ಪಟ್ಟಿ ಪಂದ್ಯಾವಳಿಯ ಕಡೆಯ ಹಂತದಲ್ಲಿ ಮಾಯವಾಗಿದೆ. ಫೈನಲ್ ಪಂದ್ಯಗಳು ಮುಗಿದ ಕೂಡಲೇ ಸ್ಥಳದಲ್ಲೇ ಬಹುಮಾನ ವಿತರಣೆ ಮಾಡಿದ್ದರಿಂದಾಗಿ ವಿಜೇತರಿಗೆ ಬಹುಮಾನ ನೀಡುವುದರಲ್ಲಿ ತೊಂದರೆ ಉಂಟಾಗದಿದ್ದರೂ ಫಲಿತಾಂಶ ಪಟ್ಟಿ ಕಡೆಯಲ್ಲಿ ಕಾಣೆಯಾಗಿದ್ದರಿಂದ ಸುದ್ದಿ ಮಾಧ್ಯಮಗಳಿಗೆ ಮಾಹಿತಿ ನೀಡಲು ತೊಂದರೆಯಾಯಿತು. ಒಲಂಪಿಕ್ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲ್ಲಿಕ್ ಬಂದಿದ್ದ ವೇಳೆ ಅಪಾರ ಜನರು ಸೇರಿದ್ದರು. ಈ ವೇಳೆ ಪಂಜ ಕುಸ್ತಿಯ ಪುರುಷರ ವಿಭಾಗದ ಫಲಿತಾಂಶ ಪಟ್ಟಿ ಕಾಣೆಯಾಗಿದೆ ಎಂದು ಪಂದ್ಯಾವಳಿ ಜವಾಬ್ದಾರಿ ಹೊತ್ತಿದ್ದ ಕೆಲವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಖ್ಯಾತ ಶಹನಾಯ್ ಕಲಾವಿದರಿಗೆ ಅರಮನೆ ಅಂಗಳದಲ್ಲಿ ಅವಕಾಶ

● 'ಮೈಸೂರು ಮಿತ್ರ'ನ ವರದಿ ಫಲಶ್ರುತಿ ● ಕಾರ್ಯಕ್ರಮ ಪಟ್ಟಿಯಲ್ಲಿದ್ದದ್ದು ತಂದೆ ಹೆಸರು; ಶಹನಾಯ್ ವಾದನವಿದ್ದದ್ದು ಪುತ್ರನದ್ದು! ● ದಸರಾ ಸಾಂಸ್ಕೃತಿಕ ಕಾರ್ಯಕ್ರಮ ಉಪಸಮಿತಿಯ ಮತ್ತೊಂದು ಎಡವಟ್ಟು

ಮೈಸೂರು, ಸೆ.29– ಮೈಸೂರು ದಸರಾ ಮಹೋತ್ಸವದಲ್ಲಿ ಶಹನಾಯ್ ಕಲಾವಿದರಿಗೆ ಕೊನೆ ಘಳಿಗೆಯಲ್ಲಿ ಸೂಕ್ತ ವೇದಿಕೆ ಕಲ್ಪಿಸಿಕೊಡುವ ಮೂಲಕ ದಸರಾ ಸಮಿತಿ ಮುಜುಗರದಿಂದ ಪಾರಾಗಿದೆ. ಮಾತ್ರವಲ್ಲ ಸಂಗೀತ ಪ್ರೇಮಿಗಳ ಮಾತಿಗೆ ಮನ್ನಣೆ ನೀಡಿದೆ.

ದೇವರಾಜ ಮಾರುಕಟ್ಟೆ ಮುಂಭಾಗದ ಚಿಕ್ಕಗಡಿಯಾರ ಸಾಂಸ್ಕೃತಿಕ ವೇದಿಕೆಯಲ್ಲಿ ಇಂದು ಸಂಜೆ ಪದ್ಮಶ್ರೀ ಪುರಸ್ಕೃತ ಖ್ಯಾತ ಶಹನಾಯ್ ವಾದಕ ಡಾ.ಎಸ್.ಬಲ್ಲೇಶ ಭಜಂತ್ರಿ ಅವರ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು. ಮೇರು ಕಲಾವಿದರಿಗೆ ಅದರಲ್ಲೂ ಶಹನಾಯ್ ವಾದನಕ್ಕೆ ಸೂಕ್ತ ವೇದಿಕೆ ಕಲ್ಪಿಸದೆ, ಮಾರುಕಟ್ಟೆ ಸದ್ದುಗದ್ದಲದ ಸ್ಥಳ ಕಲ್ಪಿಸಿದ್ದ ಬಗ್ಗೆ 'ಮೈಸೂರು ಮಿತ್ರ' ಸೆ.29ರ ಸಂಚಿಕೆಯಲ್ಲಿ 'ಖ್ಯಾತ ಶಹನಾಯ್ ವಾದಕ ಡಾ.ಎಸ್.ಬಲ್ಲೇಶ ಭಜಂತ್ರಿ ಕಾರ್ಯಕ್ರಮ' ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು.

ಅಲ್ಲದೆ 'ಸಂತೆಯ ಸದ್ದಲ್ಲಿ ಸಂಗೀತ ಆಲಿಸಲಾದೀತೆ? ಸದಾ ವಾಹನಗಳ ಶಬ್ಧ, ಹಾರನ್ ಕಿರಿಕಿರಿಯಲ್ಲಿ ಶಹನಾಯ್ ವಾದನ ಆಸ್ವಾದಿಸಲು ಸಾಧ್ಯವೇ? ಸಾಂಸ್ಕೃತಿಕ ನಗರಿ, ಸಂಗೀತದ ತವರು ಮೈಸೂರಿನಲ್ಲಿ ಯಾವ ಕಾರ್ಯಕ್ರಮವನ್ನು ಯಾವ ಸ್ಥಳದಲ್ಲಿ ಆಯೋಜಿಸಿದರೆ ಸೂಕ್ತ ಎನ್ನುವ ಕನಿಷ್ಠ ಜ್ಞಾನವಿಲ್ಲ ಎನ್ನುವಂತಾಗುತ್ತದೆ. ಆಹ್ವಾನವನ್ನು ಮನ್ನಿಸಿ ಆಗಮಿಸುವ ಕಲಾವಿದರು ಹಾಗೂ ಅವರ ಕಲೆಗೂ ಅಪಮಾನಿಸಿದಂತಾಗುತ್ತದೆ ಎಂಬ ಸಾರ್ವಜನಿಕರ ಆಕ್ರೋಶದ ಬಗ್ಗೆ ವರದಿ ಮೂಲಕ ಅಧಿಕಾರಿಗಳ ಗಮನ ಸೆಳೆಯಲಾಗಿತ್ತು. ಇದರಿಂದ ಎಚ್ಚೆತ್ತ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉಪಸಮಿತಿಯವರು 'ಶಹನಾಯ್ ವಾದನ ಕಾರ್ಯಕ್ರಮವನ್ನು ವಿಶ್ವಪ್ರಸಿದ್ಧ ಮೈಸೂರು ಅರಮನೆ ಮುಂಭಾಗದ ಪ್ರಧಾನ ವೇದಿಕೆಗೆ ಸ್ಥಳಾಂತರಿಸುವ ಮೂಲಕ ತಮ್ಮಿಂದಾಗುತ್ತಿದ್ದ ಪ್ರಮಾದದಿಂದ ಬಚಾವಾಗಿದ್ದಾರೆ.



ತಂದೆ ಬದಲು ಪುತ್ರ: ಆದರೆ ಅರಮನೆ ವೇದಿಕೆಯಲ್ಲಿ ಕಾರ್ಯಕ್ರಮ ನಡೆಸಿಕೊಟ್ಟಿದ್ದು ಡಾ.ಎಸ್. ಬಲ್ಲೇಶ ಭಜಂತ್ರಿ ಅವರಲ್ಲ, ಬದಲಾಗಿ ಅವರ ಪುತ್ರ ಡಾ.ಕೃಷ್ಣ ಬಲ್ಲೇಶ ಭಜಂತ್ರಿ ಶಹನಾಯ್ ವಾದನ ಉಣಬಡಿಸಿದರು. ಇದಕ್ಕೂ ಅಧಿಕಾರಿಗಳ ಎಡವಟ್ಟೇ ಕಾರಣ ಎನ್ನುವುದು ಅತ್ಯಂತ ವಿಷಾಧನೀಯ. ದಸರಾ ಸಾಂಸ್ಕೃತಿಕ ವೇದಿಕೆಯಲ್ಲಿ ಕೃಷ್ಣ ಬಲ್ಲೇಶ ಭಜಂತ್ರಿ ಅವರ ಕಾರ್ಯಕ್ರಮ ನಿಗದಿಯಾಗಿತ್ತು. ಆದರೆ ಕಾರ್ಯಕ್ರಮಗಳ ವಿವರವನ್ನೊಳಗೊಂಡ ಕೈಪಿಡಿಯಲ್ಲಿ ಕಲಾವಿದರ ಹೆಸರನ್ನು ಡಾ.ಎಸ್. ಬಲ್ಲೇಶ ಭಜಂತ್ರಿ ಎಂದು ಮುದ್ರಿಸಲಾಗಿದೆಯಂತೆ. ಹೀಗೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್ ಸ್ಪಷ್ಟಪಡಿಸಿದರು. ಆದರೆ ನಿನ್ನೆ ವರದಿ ಪ್ರಕಟಿಸುವ ಮುನ್ನ ದಸರಾ ಸಾಂಸ್ಕೃತಿಕ ಉಪ ಸಮಿತಿ ಕಾರ್ಯಾಧ್ಯಕ್ಷೆ ನಿರ್ಮಲಾ ಮಠಮತಿ ಪ್ರತಿಕ್ರಿಯೆ ಕೇಳಿದಾಗಲೂ ಅವರು ಹೇಳಿದ್ದು 'ಡಾ.ಎಸ್.ಬಲ್ಲೇಶ್ ಭಜಂತ್ರಿ' ಅವರ ಹೆಸರನ್ನೇ ಎನ್ನುವುದು ಗಮನಾರ್ಹ.

ಸದ್ಯ ಕೊನೆ ಗಳಿಗೆಯಲ್ಲಾದರೂ ಅಧಿಕಾರಿಗಳು ಎಚ್ಚೆತ್ತುಕೊಂಡು ಶಹನಾಯ್ ವಾದನಕ್ಕೆ ಪ್ರಶಾಂತವಾದ ಸೂಕ್ತ ವೇದಿಕೆ ಕಲ್ಪಿಸಿದ್ದು ಸಮಾಧಾನದ ಸಂಗತಿ. ಪೂರ್ವ ನಿಗದಿತ ಕಾರ್ಯಕ್ರಮಗಳಿಗೆ ಮುನ್ನ ಡಾ.ಕೃಷ್ಣ ಬಲ್ಲೇಶ ಭಜಂತ್ರಿ ಅವರು ಸಹವಾದನಕಾರರೊಂದಿಗೆ ಶಹನಾಯ್ ನುಡಿಸಿ ನೆರೆದಿದ್ದವರ ಮನಗೆದ್ದರು. ಒಂದು ಗಂಟೆ ಕಾಲ ನಡೆದ ಕಾರ್ಯಕ್ರಮದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಗಾಯನದ ಮೂಲಕವೂ ಪ್ರೇಕ್ಷಕರಿಗೆ ರಸಸ್ವಾದ ನೀಡಿದರು.

ಅರಮನೆ ಅಂಗಳದಲ್ಲಿ ಕಲಾಪ್ರೇಮಿಗಳ ರಂಜಿಸಿದ ವಿಶ್ವಸಂಗೀತ

ಜೊತೆಗೆ ವಚನಾಮೃತ, ನಾಟ್ಯ ವೈಭವ, ಪೊಲೀಸ್ ವಾದ್ಯ ಸಂಗೀತದ ಮೋಡಿ





ಮೈಸೂರು, ಸೆ.29(ಎಸ್‌ಬಿಡಿ)– ವಿಶ್ವಪ್ರಸಿದ್ಧ ಅರಮನೆ ಅಂಗಳದಲ್ಲಿ ಸಾವಿರಾರು ಕಲಾಪ್ರೇಮಿಗಳು ಗುರುವಾರ ವಿಶ್ವಸಂಗೀತ, ವಚನಾಮೃತ, ನಾಟ್ಯ ವೈಭವ ದೊಂದಿಗೆ ಹೆಮ್ಮೆಯ ಪೊಲೀಸ್ ವಾದ್ಯ ಸಂಗೀತ ರಸಾಯನವನ್ನು ಸವಿದರು.

ಅರಮನೆ ಪ್ರಧಾನ ವೇದಿಕೆಯಲ್ಲಿ ನಿತ್ಯ ವೈವಿಧ್ಯಮಯ ಕಾರ್ಯಕ್ರಮಗಳ ಪ್ರಸ್ತುತಿಯಿಂದಾಗಿ ದಿನದಿಂದ ದಿನಕ್ಕೆ ಪ್ರೇಕ್ಷಕರ ಸಂಖ್ಯೆ ಹೆಚ್ಚಾಗುತ್ತಿದೆ. ಅಂತೆಯೇ ಇಂದಿನ ಮನಮೋಹಕ ಕಾರ್ಯಕ್ರಮಗಳಿಗೂ ಸಾವಿರಾರು ಕಲಾಪ್ರೇಮಿಗಳು ಸಾಕ್ಷಿಯಾದರು. ಪ್ರತಿಯೊಂದು ಪ್ರಸ್ತುತಿಗೂ ಚಪ್ಪಾಳೆ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿ, ಕಲಾವಿದರನ್ನು ಪ್ರೋತ್ಸಾಹಿಸಿದರು. ಪ್ರೇಕ್ಷಕರ ಅಪ್ಯಾಯಮಾನ ಪ್ರತಿಕ್ರಿಯೆಗೆ ಮನಸೋತ ಕಲಾವಿದರು ಮತ್ತಷ್ಟು ಉತ್ಸಾಹದಿಂದ ತಮ್ಮ ಪ್ರತಿಭೆ ಅನಾವರಣಗೊಳಿಸಿದರು.

ವಿಶಿಷ್ಟ 'ವಿಶ್ವ ಸಂಗೀತ': ಪಂಡಿತ್ ಪ್ರವೀಣ್ ಡಿ.ರಾವ್ ಸಾರಥ್ಯದಲ್ಲಿ ಬೆಂಗಳೂರಿನ ಚಕ್ರ ಫೋನಿಕ್ಸ್ ತಂಡದ ಕಲಾವಿದರು ಪ್ರಸ್ತುತಪಡಿಸಿದ ಕರ್ನಾಟಕ ವಾದ್ಯ ಸಂಗೀತಗಳ ಸಮ್ಮಿಲನ 'ವಿಶ್ವ ಸಂಗೀತ' ವಿಶಿಷ್ಟವಾಗಿತ್ತು. ಭಾರತೀಯ ಸಂಗೀತದ ಮಹತ್ವವನ್ನು ವಿಶ್ವದೆಲ್ಲೆಡೆ ವಿಶೇಷ ರೀತಿಯಲ್ಲಿ ಪಸರಿಸುವ ಮಹೋದ್ದೇಶದೊಂದಿಗೆ ಕಲಾವಿದರ ಸ್ನೇಹ ಬಳಗ ರೂಪಿಸಿಕೊಂಡಿರುವ ವಿಭಿನ್ನ ಕಾರ್ಯಕ್ರಮ ನೆರೆದಿದ್ದವರ ಮನಸೂರೆಗೊಂಡಿತು. ಎಲ್ಲಾ ವಾದ್ಯಗಳ ಝೇಂಕಾರದೊಂದಿಗೆ ದಾಸರ ಪದ, ತತ್ವಪದ, ಜಾನಪದ, ಪಾಶ್ಚಾತ್ಯ ಕೃತಿಗಳ ಗಾಯನಕ್ಕೆ ಪ್ರೇಕ್ಷಕರಿಂದ ಅಪಾರ ಮೆಚ್ಚುಗೆ ವ್ಯಕ್ತವಾಯಿತು. ವಾರಿಜಾಶ್ರೀ ವೇಣುಗೋಪಾಲ್ ಕೊಳಲು ವಾದನದ ಜೊತೆಗೆ ಗಾಯನದ ಮೂಲಕವೂ ಮೋಡಿ ಮಾಡಿದರು. ಪ್ರಸಿದ್ಧ ಗಾಯಕ ಅಜಯ್ ವಾರಿಯರ್ ಹಾಡುಗಳು ಕಲಾರಸಿಕರ ಮನತಣಿಸಿದುವು. ಷಣ್ಮುಗಂ, ಸೂರ್ಯ ಕಿರಣ್ ಸೇರಿದಂತೆ ಹಲವು ವಾದ್ಯ ಸಂಗೀತಗಾರರು 'ವಿಶ್ವ ಸಂಗೀತ'ದ ಮೆರುಗು ಹೆಚ್ಚಿಸಿದರು.

ವಚನ ಗಾಯನ: ಧಾರವಾಡದ ಪಂಡಿತ್ ವೆಂಕಟೇಶ ಕುಮಾರ್ ಅವರ 'ವಚನ ಗಾಯನ' ನೆರೆದಿದ್ದವರನ್ನು ಕೆಲಕಾಲ ದೈವಲೋಕಕ್ಕೆ ಕರೆದೊಯ್ದಂತಿತ್ತು. ಪಕ್ಕ ವಾದ್ಯಗಳ ಸಹಕಾರ, ಶಾಸ್ತ್ರೀಯ ಆಲಾಪಗಳೊಂದಿಗೆ ಶ್ರೇಷ್ಠ ವಚನ ಕಾರರ ಪ್ರಸಿದ್ಧ ಕೃತಿಗಳನ್ನು ಪ್ರಸ್ತುತಪಡಿಸಿದ ರೀತಿ ಅತ್ಯಮೋಘವಾಗಿತ್ತು. 'ಉಳ್ಳವರು ಶಿವಾಲಯ ಮಾಡುವರು ನಾನೇನ ಮಾಡಲಿ ಬಡವನಯ್ಯ...', 'ಪ್ರಣತೆ ಇದೆ ಭಕ್ತಿ ಇದೆ ಜ್ಯೋತಿ ಬೆಳಗುವೆಡೆ...', 'ಅಕ್ಕ ಕೇಳವ್ವ ನಾನೊಂದಾ ಕನಸ ಕಂಡೆ... ಅಕ್ಕಿ ಅಡಿಕಿ ತೆಂಗಿನಕಾಯಿ...', 'ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ ಧರೆ ಹತ್ತಿ ಹುರಿದರೆ ನಿಲಬಹುದೇ?...', 'ಕಲ್ಯಾಣ ಬಸವಣ್ಣನೇ...ಕಲ್ಯಾಣವಾ ಮಾಡಯ್ಯ, ಕಲ್ಯಾಣದ ಮಾರ್ಗ ಎನಗೆ ತಿಳಿಯದೊಲ್ಲದಯ್ಯಾ...', 'ಬಸವ ಬಾರಯ್ಯ ಮರ್ತ್ಯ ಲೋಕದೊಳಗೆ ಮತ್ತಾರೂ ಇಲ್ಲವಯ್ಯಾ ನಾನೊಬ್ಬನೇ ಭಕ್ತ ನೋಡಾ...', 'ಬೆಳೆ ನಿಮ್ಮ ದಾನ ಇಳೆ ನಿಮ್ಮ ದಾನ, ಸುಳಿದು ಬೀಸುವ ಗಾಳಿ ಅದು ನಿಮ್ಮ ದಾನ, ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳೇನೆಂಬೆ ರಾಮನಾಥ...', 'ಒಂದು ಬಾರಿ ಸ್ಮರಣೆ ಸಾಲದೆ ಆನಂದ ತೀರ್ಥರ ಪೂರ್ಣ ಪ್ರಜ್ಞರ...' ವಚನಗಳನ್ನು ಪ್ರಸ್ತುತಪಡಿಸಿದಾಗ ಚಪ್ಪಾಳೆ ಮುಗಿಲು ಮುಟ್ಟುವಂತಿತ್ತು.

'ಒಡಿಸ್ಸಿ ನೃತ್ಯ' ವೈಭವ: ಬೆಂಗಳೂರಿನ ಮಧುಲಿತ ಮಹೋಪಾತ್ರ ಹಾಗೂ ತಂಡದ ಕಲಾವಿದರು ಪ್ರಸ್ತುತಪಡಿಸಿದ 'ಒಡಿಸ್ಸಿ ನೃತ್ಯ' ಮನಮೋಹಕವಾಗಿತ್ತು. ನೈಜ ಭಾವಾಭಿನಯದೊಂದಿಗೆ ಪ್ರದರ್ಶಿಸಿದ ನೃತ್ಯ ರೂಪಕಕ್ಕೆ ಕಲಾಸಕ್ತರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. 'ಜಯ ಜಯ ಚಾಮುಂಡೇಶ್ವರಿ...' ಕೃತಿಗೆ ತಾಯಿ ಚಾಮುಂಡೇಶ್ವರಿ ಮಹಿಷನನ್ನು ಮರ್ಧಿಸಿದ ಪ್ರಸಂಗವನ್ನು ಕಣ್ಣಿಗೆ ಕಟ್ಟಿದರು. ಮಧುಲಿತಾ ಮಹೋಪಾತ್ರ ಅವರು ಒಡಿಸ್ಸಿ ನೃತ್ಯದಲ್ಲಿ ನೈಪುಣ್ಯತೆ ಹೊಂದಿದ್ದು, ಆಸಕ್ತರಿಗೆ ತರಬೇತಿ ನೀಡುತ್ತಿದ್ದಾರೆ. ಭುವನೇಶ್ವರದ ಒರಿಸ್ಸಾ ಡ್ಯಾನ್ಸ್ ಅಕಾಡೆಮಿ, ಸಂಗೀತ ನಾಟಕ ಅಕಾಡೆಮಿ ಸೇರಿದಂತೆ ಹಲವು ನೃತ್ಯ ಸಂಸ್ಥೆಗಳು ಇವರಿಗೆ ಪ್ರಶಸ್ತಿ ನೀಡಿ ಅಭಿನಂದಿಸಿವೆ.

ರಾಜ್ಯಸಭಾ ಸದಸ್ಯ, ನಟ ಜಗ್ಗೇಶ್, ಕೃಷಿ ಸಚಿವ ಬಿ.ಸಿ.ಪಾಟೀಲ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಒಡಿಸ್ಸಿ ನೃತ್ಯ ಪ್ರದರ್ಶಿಸಿದ ತಂಡವನ್ನು ಅಭಿನಂದಿಸಿದರು. ಈ ವೇಳೆ ಜಗ್ಗೇಶ್ ಹಾಗೂ ಬಿ.ಸಿ. ಪಾಟೀಲ್ ಮೈಸೂರಿನ ಸಾಂಸ್ಕೃತಿಕ ವೈಭವವನ್ನು ಕೊಂಡಾಡಿದರಲ್ಲದೆ, ಸಚಿವ ಎಸ್.ಟಿ. ಸೋಮಶೇಖರ್ ಸಾರಥ್ಯದಲ್ಲಿ ಈ ಬಾರಿ ದಸರಾ ಅತ್ಯಂತ ಅದ್ಧೂರಿ ಹಾಗೂ ಅಚ್ಚುಕಟ್ಟಾಗಿ ನಡೆಯುತ್ತಿದೆ ಎಂದು ಶ್ಲಾಘಿಸಿದರು.

ಪೊಲೀಸ್ ಬ್ಯಾಂಡ್ ಜುಗಲ್‌ಬಂದಿ

ಅರಮನೆ ವೇದಿಕೆಯಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ನಾಲ್ಕನೇ ದಿನದ ಮೊದಲ ಕಾರ್ಯಕ್ರಮ ಪ್ರತಿಷ್ಠಿತ ಪೊಲೀಸ್ ವಾದ್ಯಗೋಷ್ಠಿ ಪ್ರೇಕ್ಷಕರ ಮನಸೂರೆಗೊಂಡಿತು. ಕರ್ನಾಟಕ ರಾಜ್ಯ ಪೊಲೀಸ್ ಅರ್ಪಿಸಿದ ಇಂಗ್ಲಿಷ್ ಮತ್ತು ಕರ್ನಾಟಕ ವಾದ್ಯವೃಂದಗಳ ಸಂಗೀತ ಕಾರ್ಯಕ್ರಮಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಯಿತು. ಆರ್.ಮೋಹನ್ ಹಾಗೂ ಆರ್.ದಾಸಪ್ಪ ಸಂಯೋಜನೆಯಲ್ಲಿ ಕರ್ನಾಟಕ ವಾದ್ಯ ವೃಂದದ ಕಲಾವಿದರು ಶ್ರೀ ಪಟ್ನಂ ಸುಬ್ರಹ್ಮಣ್ಯ ಅಯ್ಯರ್ ಅವರ 'ವಲಚಿ(ನವರಾಗ ಮಾಲಿಕೆ ವರ್ಣ)' ರಚನೆಯನ್ನು ನವರಾಗ ಹಾಗೂ ಆದಿ ತಾಳದಲ್ಲಿ, ಮುತ್ತುಸ್ವಾಮಿ ದೀಕ್ಷಿತರ 'ಶ್ರೀ ಮಹಾಗಣಪತಿಂ..' ರಚನೆಯನ್ನು ನಾಟ ರಾಗ ಹಾಗೂ ಚತುಶ್ರ ಏಕತಾಳದಲ್ಲಿ, ಕದ್ರಿ ಗೋಪಾಲನಾಥ್ ಹಾಗೂ ಪ್ರವೀಣ್ ಗೋಡ್ಖಿಂಡಿ 'ರಾಗರಂಗ' ಸಂಯೋಜನೆಯನ್ನು ಮಿಶ್ರ ಹಿಂದೋಳ ರಾಗ ಹಾಗೂ ಆದಿ ತಾಳದಲ್ಲಿ ಮತ್ತು ಶ್ರೀ ಮುತ್ತಯ್ಯ ಭಾಗವತರ 'ನೋಟು ಸ್ವರ' ರಚನೆಯನ್ನು ಶಂಕರಾಭರಣ ರಾಗ ಹಾಗೂ ಏಕ ತಾಳದಲ್ಲಿ ನುಡಿಸಿ ರಂಜಿಸಿದರು. ಎ.ಸಿ.ಫ್ರಾನ್ಸಿಸ್ ನೇತೃತ್ವದಲ್ಲಿ ಇಂಗ್ಲಿಷ್ ಬ್ಯಾಂಡ್ ಕಲಾವಿದರು 'ಸೆಲೆಕ್ಷನ್ ಆಫ್ ಅಬ್ಬಾ' ಸಂಗೀತ ನುಡಿಸಿದರು. ಜಗತ್ತಿನ್ನೆಲ್ಲೆಡೆ ಸದ್ದು ಮಾಡಿದ ಕನ್ನಡದ 'ಕೆಜಿಎಫ್' ಚಿತ್ರದ ಹಾಡು ಹಾಗೂ ಹಿನ್ನೆಲೆ ಸಂಗೀತವನ್ನು ಪ್ರಸ್ತುತಪಡಿಸಿದ್ದು ವಿಶೇಷವಾಗಿತ್ತು. ಪಿ.ಟೋನಿ ಮ್ಯಾಥ್ಯು ನೇತೃತ್ವದಲ್ಲಿ ಅಮೇರಿಕನ್ ಸಿಂಗರ್ ಕ್ರಿಸ್ಟಿನಾ ಪೆರ್ರಿ ಸಂಯೋಜನೆಯ 'ಥೌಸಂಡ್ ಇಯರ್ಸ್' ಗೀತೆಯನ್ನು ಪಿಯಾನೋ, ವಯಲಿನ್ ಹಾಗೂ ಕ್ಲಾರಿನೆಟ್ ಟ್ರಿಯೋ ವಾದನದಲ್ಲಿ ಮೊಳಗಿಸಿದರು. ಕೊನೆಯಲ್ಲಿ ಎರಡೂ ವಾದ್ಯವೃಂದಗಳ ಸಂಯೋಜಿತ ಸಂಗೀತ ಅತ್ಯಾಕರ್ಷಕವಾಗಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಗೋಕುಲಂನಲ್ಲಿ ಚಿರತೆ ಪ್ರತ್ಯಕ್ಷ: ಹೆಚ್ಚಿದ ಆತಂಕ



ಮೈಸೂರು,ಸೆ.29(ಆರ್‌ಕೆ)–ಮೈಸೂರಿನ ಪ್ರತಿಷ್ಠಿತ ಬಡಾವಣೆ ಗೋಕುಲಂನಲ್ಲಿ ಚಿರತೆ ಕಾಣಿಸಿಕೊಂಡಿದೆ. ಗೋಕುಲಂ 2ನೇ ಹಂತದ ಬಿಎಸ್‌ಎನ್‌ಎಲ್ ಟೆಲಿಫೋನ್ ಎಕ್ಸ್‌ಚೇಂಜ್ ಕಚೇರಿ ಸಮೀಪ, 4ನೇ ಮೇನ್, 15ನೇ ಕ್ರಾಸ್‌ನ ಮನೆಯೊಂದರ ಭದ್ರತಾ ಸಿಬ್ಬಂದಿ ಹರೀಶ್ ಕುಮಾರ್ ರಾತ್ರಿ ಕರ್ತವ್ಯದಲ್ಲಿದ್ದು, ಇಂದು ಮುಂಜಾನೆ 3 ಗಂಟೆ ವೇಳೆಗೆ ರಸ್ತೆ ದಾಟುತ್ತಿದ್ದ ಚಿರತೆ ಅವರ ಕಣ್ಣಿಗೆ ಬಿದ್ದಿದೆ. ಗಾಬರಿಗೊಂಡು ಅವರು, ನೋಡು ನೋಡುತ್ತಿರುವಂತೆಯೇ ಚಿರತೆ ಎದುರಿನ ಪಾರ್ಕ್‌ಗೆ ಹೊಂದಿಕೊಂಡಂತಿರುವ ಮಳೆ ನೀರು ಚರಂಡಿಯಲ್ಲಿ ಕಣ್ಮರೆಯಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ವಿವಿ ಪುರಂ ಠಾಣೆ ಗರುಡ ಪೊಲೀಸರು ಸ್ಥಳಕ್ಕೆ ಧಾವಿಸಿ ಟಾರ್ಚ್‌ಲೈಟ್ ಹಿಡಿದು ಶೋಧಿಸಿದರಾದರೂ, ಚಿರತೆ ಕಣ್ಣಿಗೆ ಬಿದ್ದಿಲ್ಲ. ಚರಂಡಿ, ಪಾರ್ಕ್, ಸುತ್ತಲಿನ ಗಿಡ–ಗಂಟಿ, ಪೊದೆಯನ್ನೆಲ್ಲಾ ಬೆಳಗ್ಗೆ 7 ಗಂಟೆವರೆಗೂ ಅಧಿಕಾರಿಗಳು ಜಾಲಾಡಿದರೂ ಪ್ರಯೋಜನವಾಗಲಿಲ್ಲ. ಅದೇ ಬಡಾವಣೆಯ ಮೊದಲ ಮಹಡಿ ಮನೆಯಲ್ಲಿ ವಾಸ ಮಾಡುವ ಮಹಿಳೆಯೊಬ್ಬರಿಗೂ ಕಳೆದ 3 ದಿನಗಳ ಹಿಂದೆ ರಾತ್ರಿ 10.30 ಗಂಟೆ ವೇಳೆಗೆ ಅದೇ ಸ್ಥಳದಲ್ಲಿ ಚಿರತೆ ಕಣ್ಣಿಗೆ ಬಿದ್ದಿದೆ. ರಸ್ತೆ ದಾಟುತ್ತಿದ್ದ ಚಿರತೆಯನ್ನು ಕಿಟಕಿಯಿಂದ ನೋಡಿದ ಬಗ್ಗೆ ಮಹಿಳೆ, ನನಗೆ ಹೇಳಿದ್ದರು ಎಂದು ಹರೀಶ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಗೋಕುಲಂ ಪಾರ್ಕ್ ಬಳಿ ಇಂದು ರಾತ್ರಿ ಚಿರತೆಗಾಗಿ ಕಾರ್ಯಾಚರಣೆ ಮಾಡಲಾಗುವುದು. ಒಂದು ವೇಳೆ ಪತ್ತೆಯಾಗದಿದ್ದರೆ, ಬೋನ್ ಇರಿಸಲಾಗುವುದು ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಮಲಾ ಕರಿಕಾಳನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಚಿರತೆ ಅಡ್ಡಾಡುತ್ತಿದೆ ಎಂಬ ವಿಷಯ ತಿಳಿದು ಗೋಕುಲಂ 2ನೇ ಹಂತದ ನಿವಾಸಿಗಳು ಆತಂಕಗೊಂಡಿದ್ದು, ರಾತ್ರಿ ವೇಳೆ ಮನೆಯಿಂದ ಹೊರ ಬರಲು ಹೆದರುತ್ತಿದ್ದಾರೆ. ಸಮೀಪದಲ್ಲಿರುವ ಸಿಎಫ್‌ಟಿಆರ್‌ಐ ಆವರಣದ ಗಿಡ–ಗಂಟಿಗಳಿಂದ ಕಾಂಪೌಂಡ್ ನೆಗೆದು ಹೊರಗೆ ಬಂದಿರಬಹುದು ಎಂದು ಭಾವಿಸಲಾಗಿದೆ. ಕಳೆದ ಒಂದು ವಾರದಿಂದ ಗೋಕುಲಂ 2ನೇ ಹಂತದಲ್ಲಿ ಚಿರತೆ ಅಡ್ಡಾಡುತ್ತಿರುವ ಶಂಕೆ ಇದ್ದು, ರಾತ್ರಿ ವೇಳೆ ಮಾತ್ರ ರಸ್ತೆಯಲ್ಲಿ ಸುತ್ತುತ್ತಿರಬಹುದೆಂದು ಅಲ್ಲಿನ ನಿವಾಸಿಗಳು ತಿಳಿಸಿದ್ದಾರೆ. ಇತ್ತೀಚೆಗಷ್ಟೇ ಆರ್‌ಬಿಐ ಕ್ಯಾಂಪಸ್‌ನಲ್ಲಿ ತನ್ನ 3 ಮರಿಗಳೊಂದಿಗೆ ಚಿರತೆ ಪ್ರತ್ಯಕ್ಷವಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.



ಮಾಜಿ ಸಚಿವರೂ ಆದ ಶಾಸಕ ಲೇಔಟ್ ಕೃಷ್ಣಪ್ಪ ಅವರನ್ನು ಮೈಸೂರು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕೂರ್ಗಳ್ಳಿ ಮಹದೇವು, ಉಪಾಧ್ಯಕ್ಷ ಬೆಳವಾಡಿ ಶ್ರೀನಿವಾಸ್, ನಿರ್ದೇಶಕರಾದ ಕೃಷ್ಣೇಗೌಡ, ಜಯರಾಮ್, ನಾಗರಾಜು ಬೆಂಗಳೂರಲ್ಲಿ ಭೇಟಿ ಮಾಡಿ, ಆತ್ಮೀಯವಾಗಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಘದ ಕಟ್ಟಡ ನಿರ್ಮಾಣ ಸಂಬಂಧ ಚರ್ಚಿಸಲಾಯಿತು.

ಈ ಬಾರಿ ತಮಿಳ್ನಾಡಿಗೆ ಹರಿದ 273 ಟಿಎಂಸಿ ನೀರು

ಬೆಂಗಳೂರು,ಸೆ.29(ಕೆಎಂಶಿ)–ಕಾವೇರಿ ನದಿ ಪಾತ್ರದಿಂದ ಈ ಬಾರಿ 273 ಟಿಎಂಸಿ ನೀರು ಸಮುದ್ರಕ್ಕೆ ಹರಿದು ಹೋಗಿದೆ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ನ್ಯಾಯಾಧೀಕರಣದ ತೀರ್ಪಿನ ಪ್ರಕಾರ ನಾವು ತಮಿಳುನಾಡಿಗೆ 177 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ ಕಳೆದ ಜೂನ್ 1ರಿಂದ ನಿನ್ನೆಯವರೆಗೆ 450.53 ಟಿಎಂಸಿಯಷ್ಟು ನೀರು ಹರಿದು ಹೋಗಿದೆ. ಕಳೆದ 3 ವರ್ಷಗಳಲ್ಲಿ ತಮಿಳುನಾಡಿಗೆ ಅತೀ ದೊಡ್ಡ ಪ್ರಮಾಣದಲ್ಲಿ ನೀರು ಹರಿದು ಹೋಗಿದ್ದು, ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ಉಭಯ ರಾಜ್ಯಗಳಿಗೆ ಸಾಧ್ಯವಾಗುತ್ತಿಲ್ಲ. ತಮಿಳುನಾಡಿಗೆ ನೀಡಿದ ನಂತರ ಇರುವ ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ನಾವು ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಲು ಮುಂದಾಗಿದ್ದೇವೆ ಎಂದರು.



ಸಾಕಾನೆ ದಾಳಿಗೆ ದುಬಾರೆ ಹಾಡಿ ವ್ಯಕ್ತಿ ಬಲಿ



ಸಿದ್ದಾಪುರ, ಸೆ.29– ಸಾಕಾನೆಯೊಂದು ಹಾಡಿ ವ್ಯಕ್ತಿಯ ಮೇಲೆ ದಾಳಿ ನಡೆಸಿದ ಪರಿಣಾಮ ಆತ ಸಾವನ್ನಪ್ಪಿರುವ ಘಟನೆ ದುಬಾರೆ ಹಾಡಿಯಲ್ಲಿ ನಡೆದಿದೆ.

ದುಬಾರೆ ಹಾಡಿ ನಿವಾಸಿ ಬಸಪ್ಪ(28) ಆನೆ ದಾಳಿಗೆ ಸಿಲುಕಿ ಬಲಿಯಾದ ವ್ಯಕ್ತಿ. ಸಾವು ಬದುಕಿನ ಮಧ್ಯೆ ಹೋರಾಟ ನಡೆಸುತ್ತಿದ್ದ ಬಸಪ್ಪ ಅವರನ್ನು ಸಿದ್ದಾಪುರ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಆನೆ ದಾಳಿ ವೇಳೆ ಕಂಡು ರಕ್ಷಣೆಗೆ ಮುಂದಾದ ಮಾವುತ ಶರತ್ ಮೇಲೂ ಕಾಡಾನೆ ದಾಳಿ ಮಾಡಲೆತ್ನಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಇತರ ಆನೆಗಳೊಂದಿಗೆ ನಂಜುಂಡ ಎಂಬ ಸಾಕಾನೆಯನ್ನ ರಾತ್ರಿ ಕಾಡಿಗೆ ಅಟ್ಟಲಾಗಿತ್ತು ಬೆಳಗ್ಗೆ ಮಾವುತ ಆನೆಯನ್ನು ಹುಡುಕಿ ಹೋದ ಸಂದರ್ಭದಲ್ಲಿ ಹಾಡಿ ಸಮೀಪವೇ ಇದ್ದ ಸಾಕಾನೆ ಹಾಡಿಯ ನಿವಾಸಿ ಬಸಪ್ಪ ಎಂಬುವರ ಮೇಲೆ ದಾಳಿ ಮಾಡಿದೆ. ಸ್ಥಳಕ್ಕೆ ತೆರಳಿದ ಮಾವುತ ಶರತ್ ಕಾಡಾನೆ ದಾಳಿಗೆ ಸಿಲುಕಿದ ಬಸಪ್ಪನ ರಕ್ಷಣೆಗೆ ಹೋದ ಸಂದರ್ಭದಲ್ಲಿ ಮಾವುತನ ಮೇಲೆ ಕಾಡಾನೆ ದಾಳಿ ಮಾಡಲೆತ್ನಿಸಿದ್ದ ಸಂದರ್ಭ ಸ್ಥಳದಿಂದ ಓಡಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತಕ್ಷಣ ಸ್ಥಳಕ್ಕಾಗಮಿಸಿದ ಉಪ ವಲಯ ಅರಣ್ಯಾಧಿಕಾರಿ ರಂಜನ್ ಸೇರಿದಂತೆ ಸಿಬ್ಬಂದಿಗಳು ಕಾಡಾನೆ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದ ಬಸಪ್ಪನನ್ನು ವಾಹನದಲ್ಲಿ ಸಿದ್ದಾಪುರ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಡಿಎಫ್‌ಓ ಪೂವಯ್ಯ, ಎಸಿಎಫ್ ಗೋಪಾಲ್, ಆರ್‌ಎಫ್‌ಓ ಶಿವರಾಂ, ಸಿದ್ದಾಪುರ ಠಾಣಾಧಿಕಾರಿ ಮೋಹನ್ ರಾಜ್ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಚಾಕುವಿನಿಂದ ಇರಿದು ಪತ್ನಿ ಹತ್ಯೆಗೆ ಯತ್ನ: ಪತಿ ಬಂಧನ

ಕುಶಾಲನಗರ, ಸೆ.29– ಚಾಕುವಿನಿಂದ ಇರಿದು ಪತಿಯೇ ಪತ್ನಿಯ ಹತ್ಯೆಗೆ ಯತ್ನಿಸಿದ ಘಟನೆ ಸುಂದರನಗರ ಗ್ರಾಮದಲ್ಲಿ ಬುಧವಾರ ಸಂಜೆ ನಡೆದಿದೆ.

ಕೌಟುಂಬಿಕ ಕಲಹ ತಾರಕ್ಕಕೇರಿದ ಹಿನ್ನೆಲೆಯಲ್ಲಿ ರಾಜೇಶ್ ಎಂಬಾತ ತನ್ನ ಪತ್ನಿ ಜ್ಯೋತಿಯನ್ನು ಚಾಕುವಿನಿಂದ ಇರಿದು ಹತ್ಯೆಗೆ ಯತ್ನಿಸಿದ. ಇದರಿಂದ ಘಟನೆಯಲ್ಲಿ ಪತ್ನಿಗೆ 9 ಕಡೆ ಇರಿದ ಗಾಯಗಳಾಗಿದ್ದು, ಗಂಭೀರ ಸ್ಥಿತಿಯಲ್ಲಿದ್ದ ಆಕೆಯನ್ನು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ಆರೋಪಿ ರಾಜೇಶನನ್ನು ಕುಶಾಲನಗರ ಗ್ರಾಮಾಂತರ ಪೊಲೀಸರು ಬಂಧಿಸಿ ಕೊಲೆ ಯತ್ನ ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವೃದ್ಧೆ ಮಹಿಳೆಗೆ ಮಂಕು ಬರಿಸುವ ಔಷಧಿ ಸಿಂಪಡಿಸಿ ಚಿನ್ನದ ಬಳೆ ಎಗರಿಸಿದ ಖದೀಮ

ಕುಶಾಲನಗರ, ಸೆ.29– ವೃದ್ಧೆ ಮಹಿಳೆಗೆ ಮಂಕು ಬರುವ ಔಷಧಿ ಹಾಕಿ ಆಕೆಯ ಕೈಯಲ್ಲಿದ್ದ ಸಾವಿರಾರು ರೂಪಾಯಿ ಮೌಲ್ಯದ ಎರಡು ಚಿನ್ನದ ಬಳೆಗಳನ್ನು ಎಗರಿಸಿ ಪರಾರಿಯಾಗಿರುವ ಘಟನೆ ಗುರುವಾರ ಕುಶಾಲನಗರದ ಜನತಾ ಕಾಲೋನಿಯಲ್ಲಿ ನಡೆದಿದೆ.

ಜನತಾ ಕಾಲೋನಿ ಒಂದನೇ ಕ್ರಾಸ್ ನಿವಾಸಿ ಅಬಕಾರಿ ಇಲಾಖೆ ನಿವೃತ್ತ ನೌಕರ ಐತಪ್ಪ ಪತ್ನಿ ದೇವಮ್ಮ ಎಂಬವರೇ ಚಿನ್ನದ ಬಳೆ ಕಳೆದುಕೊಂಡವರು. ದೇವಮ್ಮ ಮತ್ತು ಐತಪ್ಪ ದಂಪತಿ ಬಾಡಿಗೆಗೆ ನೀಡಿರುವ ಮನೆ ಮುಂಭಾಗ ಗೌರಿ–ಗಣೇಶ ದೇವಾಲಯವಿದೆ. ದೇವಾಲಯಕ್ಕೆ ಕಾಣಿಕೆ ನೀಡುವ ನೆಪದಲ್ಲಿ ಬಂದ ವ್ಯಕ್ತಿ ಇವರೊಂದಿಗೆ ಮಾತು ಬೆಳೆಸಿ ಮನೆಯಂಗಳಕ್ಕೆ ಬಂದಿದ್ದಾನೆ. ಈ ನಡುವೆ ಗಂಧದ ಕಡ್ಡಿ, ಬಿಸ್ಕತ್ ಪ್ಯಾಕ್, ಫೈವ್ ಸ್ಟಾರ್ ಚಾಕಲೇಟ್ ತುಂಬಿದ್ದ ಪ್ಲಾಸ್ಟಿಕ್ ಕವರ್ ಅನ್ನು ವೃದ್ಧೆಗೆ ನೀಡಿದ್ದಾನೆ.

100 ರೂಗಳ ಐದು ನೋಟು ಕೈಗೆ ನೀಡಿ ದೇವಾಲಯಕ್ಕೆ ಕಾಣಿಕೆ ಅರ್ಪಿಸಿ ಎಂದು ತಿಳಿಸಿದ ಬಳಿಕ 100 ರೂ. ಒಂದು ನೋಟನ್ನು ಮಹಿಳೆಯ ಕೈಗೆ ತಾಗುತ್ತಿದ್ದಂತೆ ಮಹಿಳೆ ಮತ್ತು ಆಕೆಯ ಜೊತೆಯಲ್ಲಿದ್ದ ಪತಿಗೆ ಮಂಕು ಬಡಿದಂತಾಗಿದೆ. ಈ ಸಂದರ್ಭ ಅಪರಿಚಿತ ಹೇಳಿದಂತೆ ಎರಡೂ ಕೈಯಲ್ಲಿದ್ದ ತಲಾ 12 ಗ್ರಾಂ.ನ ಎರಡು ಬಳೆಗಳನ್ನು ಬಿಚ್ಚಿ ಕೊಟ್ಟಿದ್ದಾರೆ. ಒಂದು ಹಂತದಲ್ಲಿ ಬಳೆ ಬಿಚ್ಚಿಕೊಟ್ಟ ಬಳಿಕ ಕುತ್ತಿಗೆಗೆ ಕೈ ಹಾಕುತ್ತಿದ್ದಂತೆ ಪತಿ ಐತಪ್ಪ ಅವರಿಗೆ ಎಚ್ಚರವಾಗಿ ಕೊಡಬೇಡ ಎನ್ನುತ್ತಿದ್ದಂತೆ ಪರಾರಿಯಾಗಿದ್ದಾನೆ. ನಂತರ ಸುಧಾರಿಸಿಕೊಂಡು ನೋಡುವಷ್ಟರಲ್ಲಿ ಬಳೆಯೊಂದಿಗೆ ಅಪರಿಚಿತ ಪರಾರಿಯಾಗಿದ್ದಾನೆ. ಬೈಕ್ ಅನ್ನು ಮುಖ್ಯ ರಸ್ತೆಯಲ್ಲಿ ನಿಲ್ಲಿಸಿ ಬಂದಿದ್ದ ಅಪರಿಚಿತನೊಂದಿಗೆ ಮತ್ತೊಬ್ಬ ಇದ್ದ ಎನ್ನಲಾಗಿದ್ದು ಸ್ಥಳಕ್ಕೆ ಭೇಟಿ ನೀಡಿದ ಕುಶಾಲನಗರ ಪೊಲೀಸರು ಸ್ಥಳ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಖದೀಮನ ಪತ್ತೆಗೆ ಕ್ರಮಕೈಗೊಂಡಿದ್ದಾರೆ.

ಮಾಲೀಕನೆದುರೇ ಹಸು ಕೊಂದು ಹಾಕಿದ ಹುಲಿ



ಗೋಣಿಕೊಪ್ಪ, ಸೆ.29– ಹಸು ಮೇಯಿಸುತ್ತಿದ್ದಾಗ ಮಾಲೀಕನ ಕಣ್ಣೆದುರೇ ಹುಲಿ ಹಸುವಿನ ಮೇಲೆ ದಾಳಿ ನಡೆಸಿ ಕೊಂದ ಘಟನೆ ನಿಟ್ಟೂರು–ಕಾರ್ಮಾಡು ಗ್ರಾಮದ ಬೆಂಡೆಕುತ್ತಿ ಎಂಬಲ್ಲಿ ಗುರುವಾರ ನಡೆದಿದೆ.

ರಾಜು ತಮ್ಮ 13 ಹಸುಗಳನ್ನು ಗದ್ದೆಯಲ್ಲಿ ಮೇಯಿಸುತ್ತಿದ್ದಾಗ ಹುಲಿ ದಾಳಿ ಮಾಡಿದೆ. ಒಂದು ಹಸು ಸ್ಥಳದಲ್ಲಿಯೇ ಸಾವಿಗೀಡಾಗಿದ್ದು, ಹುಲಿ ಬೇರೆ ಹಸುಗಳ ಮೇಲೆಯೂ ದಾಳಿಗೆ ಮುಂದಾಗಿತ್ತು. ಈ ಸಂದರ್ಭ ರಾಜು ಕೂಗಿಕೊಂಡ ಕಾರಣ ಹುಲಿ ಸ್ಥಳದಿಂದ ಓಡಿಹೋಗಿದೆ.

ಮಾಲೀಕ ಜೋರಾಗಿ ಕೂಗಿಕೊಂಡಾಗ ಉಳಿದ ಹಸುಗಳನ್ನು ಬಿಟ್ಟು ಹುಲಿ ತೋಟ ಸೇರಿಕೊಂಡಿದೆ. ಅರಣ್ಯ ಇಲಾಖೆ ತಂಡ ಸ್ಥಳಕ್ಕೆ ಆಗಮಿಸಿ ಕ್ರಮಕ್ಕೆ ಮುಂದಾಗಿದೆ.

ನಾಗರಹೊಳೆ ಎಸಿಎಫ್ ಗೋಪಾಲ್, ಕಲ್ಲಳ್ಳ ವಲಯ ಅಧಿಕಾರಿ ಚೌಗುಲೆ, ಪಶು ವೈದ್ಯಾಧಿಕಾರಿ ಡಾ. ಭವಿಷ್ಯಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಆಗಮಿಸಿ ಪರಿಶೀಲನೆ ನಡೆಸಿದರು. ಸ್ಥಳದಲ್ಲಿ ಕ್ಯಾಮೆರಾ ಅಳವಡಿಸಿದ್ದು, ಇಡೀ ಗ್ರಾಮದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ನಿಟ್ಟೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಕಾಟಿಮಾಡ ಶರೀನ್ ಮುತ್ತಣ್ಣ, ಉಪಾಧ್ಯಕ್ಷೆ ಪಡಿಞರಂಡ ಕವಿತ ಪ್ರಭು ಹುಲಿ ಸೆರೆಗೆ ಒತ್ತಾಯಿಸಿದರು.

ಬೈಕ್–ಸ್ಕೂಟರ್ ಡಿಕ್ಕಿ: ಓರ್ವ ಸಾವು, ಮತ್ತೊಬ್ಬನಿಗೆ ಗಾಯ

ಕುಶಾಲನಗರ, ಸೆ.29– ಸಮೀಪದ ಕಣಿವೆ ಗ್ರಾಮದಲ್ಲಿ ಗುರುವಾರ ಬೆಳಗ್ಗೆ ನಡೆದ ರಸ್ತೆ ಅಪಘಾತದಲ್ಲಿ ವ್ಯಕ್ತಿಯೋರ್ವ ಸಾವನ್ನಪ್ಪಿ, ಮತ್ತೋರ್ವ ಗಾಯಗೊಂಡಿರುವ ಘಟನೆ ನಡೆದಿದೆ. ಕಣಿವೆ ಗ್ರಾಮದ ನಿವಾಸಿ ಕೃಷ್ಣಮೂರ್ತಿ(48) ಮೃತಪಟ್ಟವರು. ಹೆಬ್ಬಾಲೆಯಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಬೈಕ್‌ಗೆ ಎದುರುಗಡೆಯಿಂದ ಬಂದ ಸ್ಕೂಟರ್ ಡಿಕ್ಕಿ ಹೊಡೆಯಿತು. ಇದರಿಂದ ಸ್ಕೂಟರ್ ಸವಾರ ಕೃಷ್ಣಮೂರ್ತಿ ತೀವ್ರವಾಗಿ ಗಾಯಗೊಂಡರು. ಕುಶಾಲನಗರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ಮೃತರು ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಬೈಕ್ ಹಾಗೂ ಸ್ಕೂಟರ್ ಎರಡು ಸಂಪೂರ್ಣ ಜಖಂಗೊಂಡಿದ್ದು, ಬೈಕ್ ಸವಾರ ಕೂಡ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಮಡಿಕೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಕುರಿತು ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಡಿಕೇರಿಯ ಪಿಎಫ್‌ಐ ಕಚೇರಿಗೆ ಬೀಗ



ಮಡಿಕೇರಿ,ಸೆ.29– ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯನ್ನು ಕೇಂದ್ರ ಸರಕಾರ ನಿಷೇಧಿಸಿರುವುದರಿಂದ ಮಡಿಕೇರಿ ನಗರದ ಮಹದೇವ ಪೇಟೆಯಲ್ಲಿರುವ ಪಿಎಫ್‌ಐ ಕಚೇರಿಗೆ ಅಧಿಕಾರಿಗಳು ಹಾಗೂ ಪೊಲೀಸರು ಬೀಗ ಜಡಿದಿದ್ದಾರೆ.

ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರ ಆದೇಶದ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿ ಯತೀಶ್ ಉಳ್ಳಾಲ್ ನೇತೃತ್ವದಲ್ಲಿ ಬುಧವಾರ ರಾತ್ರಿ 12.30 ಗಂಟೆಯವರೆಗೆ ಕಚೇರಿಯನ್ನು ತಪಾಸಣೆ ನಡೆಸಲಾಯಿತು. ನಂತರ ಬೀಗ ಜಡಿದು ಸೀಲ್ ಮಾಡಲಾಯಿತು. ತಪಾಸಣೆ ವೇಳೆ ಕಚೇರಿಯಲ್ಲಿ ಯಾವುದೇ ದಾಖಲೆಗಳು ಲಭ್ಯವಾಗಿಲ್ಲವೆಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ನಗರಠಾಣಾ ಪೊಲೀಸರ ಬಂದೋಬಸ್ತ್‌ನೊಂದಿಗೆ ಅಧಿಕಾರಿಗಳು ದಾಳಿ ನಡೆಸಿದರು.

ಪ್ರಗತಿಪರ ರೈತರು ಇತರೆ ರೈತರಿಗೂ ಪ್ರೇರಣೆಯಾಗಬೇಕು

ರೈತ ದಸರಾ ಉದ್ಘಾಟನೆಯಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್



ಚಾಮರಾಜನಗರ, ಸೆ.29– ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ಶ್ರೇಷ್ಠ ಕೃಷಿಕ ಪ್ರಶಸ್ತಿ ಪಡೆದ ಜಿಲ್ಲೆಯ ಪ್ರಗತಿಪರ ರೈತರು ಇತರೆ ರೈತರಿಗೂ ಪ್ರೇರಣೆಯಾಗಬೇಕು ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅಭಿಪ್ರಾಯಪಟ್ಟರು.

ಚಾಮರಾಜನಗರ ದಸರಾ ಮಹೋತ್ಸವ ಅಂಗವಾಗಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ಜಿಲ್ಲಾಡಳಿತ ಹಾಗೂ ಮೈಸೂರು ದಸರಾ ಮಹೋತ್ಸವ ಸಮಿತಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ರೈತ ದಸರಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲೆಯ ಎಲ್ಲಾ ರೈತರಿಗೂ ನಾಡಹಬ್ಬ ದಸರಾ ಶುಭಾಶಯಗಳು. ರೈತರನ್ನು ಉತ್ತೇಜಿಸುವ ಸಲುವಾಗಿ ಶ್ರೇಷ್ಠ ಕೃಷಿಕ ಪ್ರಶಸ್ತಿಗಳನ್ನು ನೀಡಲಾಗಿದೆ. ಪ್ರಶಸ್ತಿ ಪಡೆದಿರುವ ರೈತರು ಇತರರಿಗೂ ಮಾದರಿಯಾಗಬೇಕು. ಕೃಷಿ ಕ್ಷೇತ್ರದ ಪ್ರಗತಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ರೈತರು ಅವುಗಳ ಸದುಪಯೋಗ ಪಡೆದು ಆರ್ಥಿಕವಾಗಿ ಸದೃಢರಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ ಅವರು ಮಾತನಾಡಿ, ದಸರಾ ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ರೈತರಿಗೆ ಅನುಕೂಲವಾಗುವಂತಹ ಚಿಂತನಾ ಕಾರ್ಯಕ್ರಮಗಳನ್ನು ಏರ್ಪಡಿಸಬೇಕಾಗಿದೆ. ಕೃಷಿ ಕ್ಷೇತ್ರದಲ್ಲಿ ರೈತರನ್ನು ಹೆಚ್ಚಾಗಿ ತೊಡಗುವಂತೆ ಪ್ರೇರೇಪಿಸುವುದು ರೈತ ದಸರಾ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಕೃಷಿ ಎನ್ನುವುದು ನಿರಂತರ ಕಾರ್ಯವಾಗಿದೆ. ಕೋವಿಡ್‌ನಂತಹ ಸಂಕಷ್ಟ ಕಾಲದಲ್ಲಿ ಕೆಲ ಉದ್ಯಮಗಳು ಸ್ಥಗಿತಗೊಂಡರೂ ಕೃಷಿ ನಿರಂತರವಾಗಿ ಸಾಗುತ್ತಲಿತ್ತು. ಉನ್ನತ ವ್ಯಾಸಂಗ ಮಾಡಿದವರು ಸಹ ಕೃಷಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು. ಇದು ಕೃಷಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗೆ ಆಶಾದಾಯಕ ಅಂಶವಾಗಿದೆ. ರೈತರು ಬೆಳೆ ಬೆಳೆಯದಿದ್ದರೆ ನಮಗೆ ಆಹಾರವೇ ಇಲ್ಲ. ಉತ್ತಮ ಆಹಾರದಿಂದ ಆರೋಗ್ಯ, ಆಯಸ್ಸು ಸದೃಢಗೊಳ್ಳಲಿದೆ ಎಂದು ತಿಳಿಸಿದರು.

ಪ್ರತಿ ಬಾರಿ ರೈತರು ಒಂದೇ ಬೆಳೆಗೆ ಅವಲಂಬಿತರಾಗದೇ ತಮ್ಮ ದಿನನಿತ್ಯದ ಬಳಕೆಗಾಗಿ ಕೃಷಿ ಜೊತೆಗೆ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಮೂಲಕ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಹೆಚ್ಚಿನ ಲಾಭ ಗಳಿಸಬೇಕು. ರೈತರು ಬೆಳೆದ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ದೊರೆಯಬೇಕು. ಯುವಕರು ಹೆಚ್ಚಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಬೇಕು. ನೈಸರ್ಗಿಕ ಕೃಷಿಗೆ ಒತ್ತು ನೀಡಬೇಕು ಎಂದು ಜಿಪಂ ಸಿಇಒ ಕೆ.ಎಂ.ಗಾಯತ್ರಿ ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಚಿಕ್ಕಸ್ವಾಮಿ ಹಾಗೂ ಮುಖಂಡರಾದ ಹೆಬ್ಬಸೂರು ಬಸವಣ್ಣ ರೈತ ದಸರಾ ಕುರಿತು ಮಾತನಾಡಿದರು. ಶ್ರೇಷ್ಠ ಪ್ರಶಸ್ತಿ ಪಡೆದ ಲಿಂಗಪ್ಪ ಹಾಗೂ ನಟರಾಜು ಅವರು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಇಂದು ದಸರಾ ಸಮಾರೋಪ

ಚಾಮರಾಜನಗರ ದಸರಾ ಮಹೋತ್ಸವದ ಸಮಾರೋಪ ಸಮಾರಂಭವು ಸೆ.30ರಂದು ಸಂಜೆ 6 ಗಂಟೆಗೆ ಚಾಮರಾಜೇಶ್ವರ ದೇವಾಲಯದ ಆವರಣದ ಮುಖ್ಯ ವೇದಿಕೆಯಲ್ಲಿ ನಡೆಯಲಿದೆ.

ಗಮನ ಸೆಳೆದ ರೈತ ದಸರಾ

ಚಾಮರಾಜನಗರ: ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ನಗರದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತ ದಸರಾ ಮೆರವಣಿಗೆಯಲ್ಲಿ ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ಎತ್ತಿನ ಬಂಡಿಗಳು ನಾಗರಿಕರ ಗಮನಸೆಳೆದವು.

ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿ ರೈತ ದಸರಾ ಕಾರ್ಯಕ್ರಮದ ಅಂಗವಾಗಿ ಆಯೋಜಿಸಲಾಗಿದ್ದ ಎತ್ತಿನ ಬಂಡಿಗಳ ಮೆರವಣಿಗೆಗೆ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಹಾಗೂ ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ. ನಿಜಗುಣರಾಜು, ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ. ಎಂ. ಗಾಯತ್ರಿ ಅವರು ಹಸಿರು ನಿಶಾನೆ ತೋರಿದರು. ನಗರದ ಚಾಮರಾಜೇಶ್ವರ ದೇವಾಲಯದ ಮುಂಭಾಗದಿಂದ ಹೊರಟ ಮೆರವಣಿಗೆ ಸಾಂಸ್ಕೃತಿಕ ಕಲಾತಂಡಗಳಾದ ಡೊಳ್ಳುಕುಣಿತ, ನಗಾರಿ, ಡಮರುಗ, ಬ್ಯಾಂಡ್‌ಸೆಟ್ ಕಲಾವಿದರೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಮುಕ್ತಾಯಗೊಂಡಿತು.

ಇಂದಿನ ದಸರಾ ಕಾರ್ಯಕ್ರಮಗಳು

1. ಶ್ರೀ ಚಾಮರಾಜೇಶ್ವರ ದೇವಸ್ಥಾನ ವೇದಿಕೆ

ಮಧ್ಯಾಹ್ನ 3ಕ್ಕೆ– ಡೊಳ್ಳು ಕುಣಿತ, ಮಧ್ಯಾಹ್ನ 3.40ಕ್ಕೆ ಸ್ಯಾಕ್ಸೋಫೋನ್, ಸಂಜೆ 4ಕ್ಕೆ ಗೊರಕನ ನೃತ್ಯ, ಸಂಜೆ 4.15ಕ್ಕೆ ವಾದ್ಯ ಸಂಗೀತ, ಸಂಜೆ 4.45ಕ್ಕೆ ನೃತ್ಯ ರೂಪಕ, ಸಂಜೆ 5.15ಕ್ಕೆ ಭರತನಾಟ್ಯ, ಸಂಜೆ 5.45ಕ್ಕೆ ಜಾನಪದ ವೈಭವ, ಸಂಜೆ 6.15ಕ್ಕೆ ಮ್ಯೂಸಿಕ್, ಸಂಜೆ 6.45ಕ್ಕೆ ನೃತ್ಯೋತ್ಸವ, ಸಂಜೆ 7.15ಕ್ಕೆ ಗೀತೋತ್ಸವ, ರಾತ್ರಿ 8ಕ್ಕೆ ಅನುರಾಧ ಭಟ್, ಶ್ರೀ ಹರ್ಷ, ಅಕ್ಬರ್ ಶರ್ಮ, ಅಂಕಿಕುಂಡು ಮತ್ತು ತಂಡದವರಿಂದ ಮ್ಯೂಸಿಕಲ್ ನೈಟ್

2. ಜೆ.ಹೆಚ್. ಪಟೇಲ್ ಸಭಾಂಗಣ

ಬೆಳಗ್ಗೆ 9ಕ್ಕೆ ನಾದಸ್ವರ, ಬೆಳಗ್ಗೆ 9.30ಕ್ಕೆ ಕರ್ನಾಟಕ ಸಂಗೀತ, ಬೆಳಗ್ಗೆ 10.15ಕ್ಕೆ ಕಂಸಾಳೆ, ಬೆಳಗ್ಗೆ 10.30ಕ್ಕೆ ತಂಬೂರಿ ಪದ, ಮಧ್ಯಾಹ್ನ 1ಕ್ಕೆ ಸುಗಮ ಸಂಗೀತ, ಮಧ್ಯಾಹ್ನ 1.15ಕ್ಕೆ ನೃತ್ಯ ರೂಪಕ, ಮಧ್ಯಾಹ್ನ 1.45ಕ್ಕೆ ಜಾನಪದ ಗೀತೆಗಾಯನ, ಮಧ್ಯಾಹ್ನ 2.30ಕ್ಕೆ ವಾದ್ಯ ಸಂಗೀತ, ಮಧ್ಯಾಹ್ನ 3ಕ್ಕೆ ಸೋಬಾನೆ ಸಂಭ್ರಮ, ಸಂಜೆ 5ಕ್ಕೆ ನೃತ್ಯರೂಪಕ, ಸಂಜೆ 5.30ಕ್ಕೆ ಸಂಗೀತ ಸಂಜೆ

3. ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರ

ಬೆಳಗ್ಗೆ 10ಕ್ಕೆ ಶಿವಶರಣ ಹರಳಯ್ಯ ನಾಟಕ, ಮಧ್ಯಾಹ್ನ 1.30ಕ್ಕೆ ರಂಗಗೀತೆ ಗಾಯನ, ಮಧ್ಯಾಹ್ನ 2ಕ್ಕೆ ಚಂದ್ರಮಾನ ಪರಿಭವ ನಾಟಕ

ಭಾರತ್ ಜೋಡೋ ಯಾತ್ರೆ ಫ್ಲೆಕ್ಸ್‌ಗಳಿಗೆ ಬ್ಲೇಡ್

ಪೊಲೀಸ್ ಠಾಣೆಗೆ ಡಿಕೆಶಿ ಮುತ್ತಿಗೆ



ಗುಂಡ್ಲುಪೇಟೆ, ಸೆ.29– ಕಾಂಗ್ರೆಸ್ ನಡೆಸುತ್ತಿರುವ ಭಾರತ್ ಜೋಡೋ ಯಾತ್ರೆಯ ಅಂಗವಾಗಿ ಪಟ್ಟಣದಲ್ಲಿ ಅಳವಡಿಸಿದ್ದ ಕಾಂಗ್ರೆಸ್ ನಾಯಕರ ಫ್ಲೆಕ್ಸ್‌ಗಳನ್ನು ಕಿಡಿಗೇಡಿಗಳು ಬ್ಲೇಡಿನಿಂದ ಹರಿದು ಹಾಕಿದ್ದಾರೆ.

ಕಾರ್ಯಕ್ರಮದ ಅಂತಿಮ ಸಿದ್ಧತೆ ವೀಕ್ಷಿಸಲು ಆಗಮಿಸಿದ್ದ ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ವಿಷಯ ತಿಳಿದು ಪಟ್ಟಣ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿ ಕೂಡಲೇ ದುಷ್ಕರ್ಮಿಗಳ ಪತ್ತೆಗೆ ಕ್ರಮಕೈಗೊಳ್ಳಿ, ಇಲ್ಲದಿದ್ದರೆ ನಮ್ಮ ಕಾರ್ಯಕರ್ತರು ಸುಮ್ಮನಿರಲ್ಲ ಎಂದು ಪೊಲೀಸ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಮ್ಮಿಕೊಂಡಿರುವ ಭಾರತ್ ಜೋಡೋಯಾತ್ರೆ ಸೆ.30ರಂದು ಗುಂಡ್ಲುಪೇಟೆ ಮೂಲಕ ರಾಜ್ಯ ಪ್ರವೇಶಿಸುತ್ತಿದೆ. ಈ ಹಿನ್ನೆಲೆಯಲ್ಲಿ ಪಟ್ಟಣದ ಊಟಿ ಸರ್ಕಲ್‌ನಿಂದ ಮೈಸೂರು ರಸ್ತೆಯುದ್ದಕ್ಕೂ ಕಾಂಗ್ರೆಸ್ ತನ್ನ ನಾಯಕರ ಫ್ಲೆಕ್ಸ್ ಅಳವಡಿಸಿತ್ತು. ಆದರೆ ಗುರುವಾರ ನಸುಕಿನ ವೇಳೆಯಲ್ಲಿ ದುಷ್ಕರ್ಮಿಗಳು ರಾಹುಲ್‌ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಪುಟ್ಟರಂಗಶೆಟ್ಟಿ ಭಾವಚಿತ್ರಗಳಿಗೆ ಬ್ಲೇಡ್ ಹಾಕಿ ಹರಿದಿದ್ದಾರೆ.

ಈ ವಿಷಯ ತಿಳಿದ ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಶಾಸಕ ಸಿ.ಎಸ್.ನಿರಂಜನಕುಮಾರ್ ತಮ್ಮ ಶಿಷ್ಯ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರಣಯ್ ಕುಮ್ಮಕ್ಕಿನಿಂದ ಬಿಜೆಪಿ ಕಾರ್ಯಕರ್ತರು ಫ್ಲೆಕ್ಸ್ ಹರಿದು ಹಾಕಿ ಗುಂಡ್ಲುಪೇಟೆಯ ಗೌರವವನ್ನು ಹರಾಜು ಮಾಡುತ್ತಿದ್ದಾರೆ. ಬಿಜೆಪಿಯವರು ದರಿದ್ರ ರಾಜಕೀಯ ಮಾಡುತ್ತಿದ್ದಾರೆ ಪಟ್ಟಣದಲ್ಲಿ ಕಾನೂನು ಸುವ್ಯವಸ್ಥೆ ನೆಲಕಚ್ಚಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೀಳುಮಟ್ಟದ ರಾಜಕೀಯ ನಮಗೆ ಬೇಕಾಗಿಲ್ಲ: ಕಾಂಗ್ರೆಸ್ ಮುಖಂಡರ ಆರೋಪಕ್ಕೆ ಪ್ರತಿಕ್ರಿಯಿಸಿರುವ ಶಾಸಕ ಸಿ.ಎಸ್.ನಿರಂಜನಕುಮಾರ್ ತುರ್ತು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ನಮಗೆ ಕೀಳು ಮಟ್ಟದ ರಾಜಕೀಯ ಬೇಕಾಗಿಲ್ಲ. ಫ್ಲೆಕ್ಸ್ ಹರಿಯುವಂತಹ ಹೀನ ಕೃತ್ಯಕ್ಕೆ ಬಿಜೆಪಿ ಕಾರ್ಯಕರ್ತರು ಮುಂದಾಗುವುದಿಲ್ಲ. ರಾಹುಲ್ ಹೀಗೆ ಬಂದು ಹಾಗೆ ಹೋಗುತ್ತಾರೆ. ಇದರಿಂದ ಬಿಜೆಪಿಗೆ ಏನೂ ನಷ್ಟವಿಲ್ಲ ಎಂದರು.

ವೀರಭದ್ರಪ್ಪ ನಿಧನ



ಚಾಮರಾಜನಗರ, ಸೆ.29– ತಾಲೂಕು ಆಲೂರು ಗ್ರಾಮದ ಎ.ಎಂ. ವೀರಭದ್ರಪ್ಪ (74) ಗುರುವಾರ ಸಂಜೆ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ ಗುರುಸಿದ್ಧಮ್ಮ, ಪುತ್ರರಾದ ಗ್ರಾಪಂ ಮಾಜಿ ಅಧ್ಯಕ್ಷ ಎ.ವಿ. ರಮೇಶ್ ಬಾಬು, ಎ.ವಿ.ಮಲ್ಲೇಶ್ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಸ್ವಗ್ರಾಮ ಆಲೂರಿನ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜನಪರವಾಗಿ ಸರ್ಕಾರದ ಕಾರ್ಯ ನಿರ್ವಹಣೆ



ಶ್ರೀರಂಗಪಟ್ಟಣ, ಸೆ.29– ಮಹಾರಾಜರ ಕಾಲದಲ್ಲೇ ಮೈಸೂರು ಭಾಗದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು, ಇದಕ್ಕೆ ಕೆಆರ್‌ಎಸ್ ಸೇರಿದಂತೆ ಹತ್ತಾರು ಅಭಿವೃದ್ಧಿ ಕಾರ್ಯಗಳು ಇಂದಿಗೂ ಜೀವಂತವಾಗಿರುವುದಾಗಿ ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಪಟ್ಟಣದ ಶ್ರೀರಂಗನಾಥಸ್ವಾಮಿ ಮೈದಾನದ ಆವರಣದ ಶ್ರೀರಂಗ ವೇದಿಕೆಯಲ್ಲಿ ದಸರಾ ಮಹೋತ್ಸವದ ಅಂಗವಾಗಿ ಬುಧವಾರ ರಾತ್ರಿ ಹಮ್ಮಿಕೊಂಡಿದ್ದ 5 ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಜನರ ಪರವಾಗಿ ಹಾಗೂ ಜನರ ದನಿಯಾಗಿ ಕೆಲಸ ಮಾಡುತ್ತಿದೆ. ಸರ್ಕಾರ ಮನೆ ಬಾಗಿಲಿಗೆ ಸಾಮಾಜಿಕ ಪಿಂಚಣಿ ನೀಡುವ ಕೆಲಸ ಮಾಡುತ್ತಿದ್ದು, ಇದೇ ರೀತಿ ಹಲವಾರು ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ. ಚಾಮುಂಡೇಶ್ವರಿ ಎಂದರೆ ದುಷ್ಟ ಶಕ್ತಿ ಮಟ್ಟ ಹಾಕಿ ಶಿಷ್ಟ ರಕ್ಷಣೆ ಮಾಡುವುದು. ಇದೇ ವೇಳೆ ಸಮಸ್ತ ನಾಡಿನ ಜನತೆಗೆ ದಸರಾ ಹಬ್ಬದ ಶುಭಾಶಯಗಳನ್ನು ಸಚಿವರು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಹಾಗೂ ಅಬಕಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಮೈಸೂರಿನಲ್ಲಿ ನಡೆಯುತ್ತಿರುವ ದಸರಾ ಶ್ರೀರಂಗಪಟ್ಟಣದಲ್ಲಿ ಪ್ರಾರಂಭವಾಯಿತು. ಮುಖ್ಯಮಂತ್ರಿಗಳು ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮ ನಡೆಸಲು 1 ಕೋಟಿ ರು. ಅನುದಾನ ನೀಡಿದ್ದಾರೆ. ಅಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಕ್ರೀಡಾ ಇಲಾಖೆ ಸಚಿವರು ಸಹ ತಮ್ಮ ತಮ್ಮ ಇಲಾಖೆ ಮೂಲಕ ದಸರಾಗೆ ಸಹಾಯ ಒದಗಿಸಿದ್ದಾರೆ ಎಂದರು.

ಶಾಸಕ ರವೀಂದ್ರ ಶ್ರೀಕಂಠಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇನ್ನು ಮುಂದೆ ಮೈಸೂರು ದಸರಾ ಸಮಾನವಾಗಿ ಶ್ರೀರಂಗಪಟ್ಟಣ ದಸರಾ ಆಚರಣೆ ಮಾಡುವ ಪ್ರಯತ್ನವನ್ನು ಮಾಡೋಣ. ಒಂದು ಕಾಲದಲ್ಲಿ ದಸರಾವನ್ನ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಕಳುಹಿಸಿಕೊಟ್ಟಂತವರು ನಾವು, ಹಾಗಾಗಿ ದಸರಾವನ್ನು ವಿಶೇಷವಾಗಿ ಆಚರಣೆ ಮಾಡಬೇಕಾದದ್ದು, ಸರ್ಕಾರ ಹಾಗೂ ನಮ್ಮೆಲ್ಲರ ಕರ್ತವ್ಯ ಎಂದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ಸಾನ್ನಿಧ್ಯ ವಹಿಸಿದ್ದರು. ರೇಷ್ಮೆ, ಯುವ ಸಬಲೀಕರಣ ಹಾಗೂ ಕ್ರೀಡೆ ಸಚಿವ ಕೆ.ಸಿ. ನಾರಾಯಣಗೌಡ, ಜಿಲ್ಲಾಧಿಕಾರಿ ಎಸ್.ಅಶ್ವಥಿ, ಉಪ ವಿಭಾಗಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ, ತಹಸೀಲ್ದಾರ್ ಶ್ವೇತಾ ಎನ್.ರವೀಂದ್ರ, ವೇದ ಬ್ರಹ್ಮ ಡಾ. ಭಾನುಪ್ರಕಾಶ್ ಶರ್ಮಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕ್ಷುಲ್ಲಕ ಕಾರಣಕ್ಕೆ ಹಲ್ಲೆ : 5 ಮಂದಿಗೆ ಗಾಯ

ಭಾರತೀನಗರ.ಸೆ.29– ಕ್ಷುಲ್ಲಕ ಕಾರಣಕ್ಕೆ ಬೊಪ್ಪಸಮುದ್ರ ಗ್ರಾಮದಲ್ಲಿ ಯುವಕರಿಬ್ಬರು ಮನೆಯೊಂದಕ್ಕೆ ನುಗ್ಗಿ 5 ಮಂದಿಗೆ ಹಲ್ಲೆ ನಡೆಸಿರುವ ಘಟನೆ ಜರುಗಿದೆ.



ಗ್ರಾಮದ ಸಾಕಮ್ಮ, ರತ್ನಮ್ಮ, ದೊಡ್ಡಯ್ಯ, ರಾಜಲಿಂಗ, ಸತೀಶ್ ಹಲ್ಲೆಯಿಂದ ಗಾಯಗೊಂಡವರು. ಪಿತೃಪಕ್ಷದ ಹಬ್ಬದ ಹಿನ್ನೆಲೆಯಲ್ಲಿ ಸಾಕಮ್ಮ ಅವರ ಮನೆಗೆ ಮಳವಳ್ಳಿಯ ಸಂಬಂಧಿಕರು ಊಟಕ್ಕೆ ಬಂದಿದ್ದರು. ಈ ನಡುವೆ ಇವರಲ್ಲಿ ಅಭಿ ಎಂಬ ಯುವಕ ಗ್ರಾಮದ ಸಂಜಯ್, ನಾಗೇಂದ್ರ ಎಂಬುವವರೊಂದಿಗೆ ಗಲಾಟೆ ಮಾಡಿಕೊಂಡಿದ್ದು, ನಂತರ ಮನೆಗೆ ತೆರಳಿದ್ದಾನೆ. ಇದನ್ನು ಗಮನಿಸಿದ ಸಂಜಯ್ ಮತ್ತು ನಾಗೇಂದ್ರ ಅವರು ಸಾಕಮ್ಮನ ಮನೆಗೆ ಏಕಾಏಕಿ ತೆರಳಿ ನುಗ್ಗಲು ಪ್ರಯತ್ನಿಸಿದ್ದಾರೆ. ತಕ್ಷಣ ಸಾಕಮ್ಮ ಮನೆಯ ಬಾಗಿಲು ಮುಚ್ಚಿದರೂ ಹೊಡೆದು ಒಳನುಗ್ಗಿ 5 ಮಂದಿಯ ಮೇಲೆ ರಾಡ್‌ನಿಂದ ಹಲ್ಲೆ ನಡೆಸಿದ್ದಾರೆ. ತಕ್ಷಣವೇ ಇವರನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶ್ರೀರಂಗಪಟ್ಟಣ ಪಾರಂಪರಿಕ ದಸರಾ ಮಹೋತ್ಸವದ ಅಂಗವಾಗಿ ಕರೀಘಟ್ಟದ ತಪ್ಪಲಿನಲ್ಲಿ ಏರ್ಪಡಿಸಿದ್ದ ಚಾರಣ ಸ್ಪರ್ಧೆಗೆ ಶ್ರೀರಂಗನಾಯಕಿ ಮಹಿಳಾ ಸಮಾಜದ ಮುಖ್ಯಸ್ಥೆ ಆಶಾಲತಾ ಪುಟ್ಟೇಗೌಡ, ಕನ್ನಡ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷೆ ಸರಸ್ವತಮ್ಮ, ಡಿಎಸ್‌ಎಸ್ ಮುಖಂಡ ಕುಬೇರಪ್ಪ ಸೇರಿದಂತೆ ಇತರರು ಚಾಲನೆ ನೀಡಿದರು.

ದೀಪಾವಳಿ ಬಳಿಕ ಮಂಡ್ಯ ಕ್ಷೇತ್ರ ವ್ಯಾಪ್ತಿಯಲ್ಲಿ ಗ್ರಾಮ ವಾಸ್ತವ್ಯ



ಮಂಡ್ಯ,ಸೆ.29– ದೀಪಾವಳಿ ಹಬ್ಬದ ನಂತರ ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ, ವಾಸ್ತವ್ಯ ಹೂಡುವ ಮೂಲಕ ಪ್ರತಿ ಮನೆಗೆ ಭೇಟಿ ನೀಡಿ ಜನರ ಜೊತೆ ಚರ್ಚೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಜಿಲ್ಲಾ ಹಾಲು ಒಕ್ಕೂಟ ಹಾಗೂ ಶ್ರೀ ಶಂಭು ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಆರ್. ರಾಮಚಂದ್ರ ಹೇಳಿದರು.

ಶ್ರೀ ಶಂಭು ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ ಶ್ರೀ ಶಂಭು ಧರ್ಮ ಯಾತ್ರೆಗೆ ಮಂಡ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹಲವಾರು ಗ್ರಾಮಗಳಿಂದ 13 ಬಸ್ಸುಗಳಲ್ಲಿ ಹೊರಟ ಯಾತ್ರೆಗೆ ತಾಲೂಕಿನ ಬಸರಾಳು ಗ್ರಾಮದ ಕಾಲಭೈರವೇಶ್ವರ ದೇವಾಲಯದ ಆವರಣದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಮಂಡ್ಯ ತಾಲೂಕಿನ ಜನ ನನಗೆ ರಾಜಕೀಯ ಜೀವನ ಕೊಟ್ಟು ಬೆಳೆಸಿದ್ದೀರಿ, ಮುಂದಿನ ದಿನಗಳಲ್ಲಿ ನಿಮ್ಮ ಸೇವಕನಾಗಿ ಕೆಲಸ ಮಾಡಲು ಒಂದು ಅವಕಾಶ ಕಲ್ಪಿಸಿಕೊಡಿ ಎಂದು ಹೇಳಿದರು.

ಶ್ರೀ ಶಂಭು ಸೇವಾ ಟ್ರಸ್ಟ್ ವತಿಯಿಂದ ಈಗಾಗಲೇ ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ ಕಾರ್ಯಕ್ರಮ ನಡೆಯುತ್ತಿದ್ದು, ಇನ್ನು ಕೆಲವೇ ದಿನಗಳಲ್ಲಿ ಆ ಕಾರ್ಯಕ್ರಮ ಮುಗಿಯಲಿದೆ. ಶ್ರೀ ಶಂಭು ಧರ್ಮ ಯಾತ್ರೆ ಕಾರ್ಯಕ್ರಮ ನಿರಂತರವಾಗಿ ನಡೆಯಲಿದ್ದು, ಇಲ್ಲಿಯತನಕ 96 ಬಸ್ಸುಗಳಲ್ಲಿ 5300 ಮಂದಿ ಯಾತ್ರಾರ್ಥಿಗಳು ಧರ್ಮ ಯಾತ್ರೆ ಮುಗಿಸಿದ್ದಾರೆ. ಮುಂದಿನ ದಿನಗಳಲ್ಲಿ 15000 ಮಂದಿಗೆ ಶ್ರೀ ಶಂಭು ಧರ್ಮ ಯಾತ್ರೆ ಕಾರ್ಯಕ್ರಮ ರೂಪಿಸ ಲಾಗುವುದು ಎಂದರು.

ಶಂಭು ಧರ್ಮ ಯಾತ್ರೆಗೆ ತೆರಳುವ ಯಾತ್ರಾರ್ಥಿಗಳಿಗೆ ಊಟ, ತಿಂಡಿ, ವಸತಿ, ಸೌಲಭ್ಯ ಕಲ್ಪಿಸಿ ಸೌತಡ್ಕ ಗಣಪತಿ, ಧರ್ಮಸ್ಥಳ ಮಂಜುನಾಥ ಸ್ವಾಮಿಯ ದರ್ಶನ, ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿಯ ದರ್ಶನ ಮಾಡಿಸಿ ವಾಪಸ್ ಕರೆತರಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆಂಚನಹಳ್ಳಿ ಪುಟ್ಟಸ್ವಾಮಿ, ಪ್ರತಾಪ್, ಬಿ.ಆರ್.ಸುರೇಶ್, ಹೇಮಂತ್, ಕುಮಾರ್, ಶ್ರೇಯಸ್ ಸೇರಿದಂತೆ ಇತರರು ಹಾಜರಿದ್ದರು.

ಮಂಡ್ಯ ಜಿಲ್ಲಾ ಪಿಎಫ್‌ಐ ಕಚೇರಿ ಬಂದ್ ಮಾಡಿದ ಪೊಲೀಸರು

ಮಂಡ್ಯ,ಸೆ.29– ಕೇಂದ್ರ ಸರ್ಕಾರ ಪಿಎಫ್‌ಐ ಸಂಘಟನೆಯನ್ನು ಬ್ಯಾನ್ ಮಾಡಿದ ಹಿನ್ನೆಲೆಯಲ್ಲಿ ಮಂಡ್ಯ ನಗರದಲ್ಲಿದ್ದ ಪಿಎಫ್‌ಐ ಸಂಘಟನೆಯ ಜಿಲ್ಲಾ ಕಚೇರಿಗೆ ಪೊಲೀಸರು ಬೀಗ ಜಡಿದಿದ್ದಾರೆ. ನಗರದ ಗುತ್ತಲು ಬಡಾವಣೆಯಲ್ಲಿದ್ದ ಪಿಎಫ್‌ಐ ಕಚೇರಿಗೆ ಕಳೆದ ರಾತ್ರಿ ತೆರಳಿದ ಪೊಲೀಸರು, ಕಚೇರಿಯನ್ನು ಪರಿಶೀಲನೆಗೊಳಿಸಿ, ಅಗತ್ಯ ದಾಖಲೆಗಳನ್ನು ವಶಪಡಿಸಿಕೊಂಡು ಕಚೇರಿಗೆ ಬೀಗ ಜಡಿದರು. ಮುಂಜಾಗ್ರತಾ ಕ್ರಮವಾಗಿ ಕಚೇರಿ ಮುಂದೆ ಪೊಲೀಸ್ ಭದ್ರತೆ ಒದಗಿಸಿ, ಒಂದು ಕೆಎಸ್‌ಆರ್‌ಪಿ ತುಕಡಿಯನ್ನು ನಿಯೋಜನೆಗೊಳಿಸಲಾಗಿದೆ.



ಮೈಸೂರು ತಾಲೂಕು ಗ್ರಾಮೀಣ ದಸರಾ ಮಹೋತ್ಸವ

ಜಯಪುರ-ದಾರಿಪುರದಲ್ಲಿ ಕಳೆಗಟ್ಟಿದ ನಾಡಹಬ್ಬದ ಸಂಭ್ರಮ, ಸಡಗರ

ಎತ್ತಿನಗಾಡಿಯಲ್ಲಿ ಸಚಿವ ಸೋಮಶೇಖರ್, ಸಂಸದ ಪ್ರತಾಪ್‌ಸಿಂಹ, ಶಾಸಕ ಜಿ.ಟಿ.ದೇವೇಗೌಡ ಸವಾರಿ







ಮೈಸೂರು, ಸೆ.29(ಆರ್‌ಕೆಬಿ)- ಮೈಸೂರು ದಸರಾ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನ ಜಯಪುರ ಮತ್ತು ದಾರಿಪುರ ಗ್ರಾಮಗಳಲ್ಲಿ ಗುರುವಾರ ಗ್ರಾಮೀಣ ದಸರಾ ಕಳೆಗಟ್ಟಿತ್ತು. ಮಹಿಳೆಯರು, ಮಕ್ಕಳು ದಸರಾ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡು ಸಂತಸಪಟ್ಟರು.

ಮೈಸೂರು ಗ್ರಾಮೀಣ ದಸರಾ ಆಚರಣಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಗ್ರಾಮೀಣ ದಸರಾ ಕಾರ್ಯಕ್ರಮಕ್ಕೆ ದಾರಿಪುರ ಗ್ರಾಮದ ಕರೂರು ಬಸವೇಶ್ವರ ದೇವಸ್ಥಾನದ ಬಳಿ ದೇವರ ರಥಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಮೆರವಣಿಗೆಯಯಲ್ಲಿ ಗಜಪಡೆಯ ಆನೆಗಳು ಪ್ರಮುಖ ಆಕರ್ಷಣೆಯಾಗಿತ್ತು.

ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್‌ಸಿಂಹ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಪಂಚೆ ಎತ್ತಿ ಕಟ್ಟಿ, ಎತ್ತಿನ ಗಾಡಿಯಲ್ಲಿ ಮೆರವಣಿಗೆಯಲ್ಲಿ ಸಾಗಿದರು. ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರ್ಣಿಮಾ ಇನ್ನಿತರರು ಭಾಗವಹಿಸಿದ್ದರು.

ಮೆರವಣಿಗೆಯಲ್ಲಿ ಸಂಜೀವಿನಿ ಮಹಿಳಾ ಸಂಘದಿಂದ ನೂರೊಂದು ಕಳಸ, ನಂದಿ ಕಂಬ, ಜೇನು ಕುರುಬರ ನೃತ್ಯ, ಡೊಳ್ಳು ಕುಣಿತ, ಕೀಲು ಕುದುರೆ, ಗಾರುಡಿ ಗೊಂಬೆ, ಪೂಜಾ ಕುಣಿತ, ಭಾರತ್ ಬ್ಯಾಂಡ್ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿದ್ದವು. ಕುದುರೆ ಟಾಂಗಾಗಳು, ಅಲಂಕೃತ ಎತ್ತಿನಗಾಡಿಗಳು, ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳನ್ನು ಪ್ರತಿಬಿಂಬಿಸುವ ಟ್ಯಾಬ್ಲೋಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಡಾ.ಎಸ್.ಪ್ರೇಮಕುಮಾರ್, ತಹಶೀಲ್ದಾರ್ ಬಿ.ಎನ್.ಗಿರೀಶ್, ಮೈಸೂರು ತಾಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೆಚ್.ಡಿ. ಗಿರೀಶ್, ಗ್ರಾಮೀಣ ದಸರಾ ಉಪ ಸಮಿತಿಯ ಅಧ್ಯಕ್ಷ ಮಹೇಶ್ ಕುಮಾರ್, ಉಪಾಧ್ಯಕ್ಷರಾದ ಸ್ವಾಮಿಗೌಡ, ರಮೇಶ್‌ಕುಮಾರ್, ಪರಶಿವಮೂರ್ತಿ, ಜಯಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಹೆಚ್.ಎನ್.ಮಹಾದೇವಿ, ಉಪಾಧ್ಯಕ್ಷ ಬೈರೇಶ್ ಇನ್ನಿತರರು ಉಪಸ್ಥಿತರಿದ್ದರು.

> ಕೋವಿಡ್ ಕಾರಣದಿಂದ ಕಳೆದ ಎರಡು ವರ್ಷದಿಂದ ದಸರಾ ಆಚರಣೆಗೆ ಮಿತಿ ಇತ್ತು. ಈ ಬಾರಿ ಅದ್ಧೂರಿ ದಸರಾ ಮಾಡಲಾಗುತ್ತಿದೆ. ಜಿಲ್ಲೆಯ ಎಲ್ಲಾ ಅಧಿಕಾರಿಗಳು ದಸರಾ ಕಾರ್ಯಕ್ರಮಗಳನ್ನು ಉತ್ತಮವಾಗಿ ವ್ಯವಸ್ಥೆ ಮಾಡುತ್ತಿದ್ದಾರೆ.
> - **ಎಸ್.ಟಿ.ಸೋಮಶೇಖರ್,** ಜಿಲ್ಲಾ ಉಸ್ತುವಾರಿ ಸಚಿವ

> ಗ್ರಾಮೀಣ ದಸರಾ ಬಹಳ ಅಚ್ಚುಕಟ್ಟಾಗಿ ನೆರವೇರುತ್ತಿದೆ. ಆರೋಗ್ಯ ತಪಾಸಣಾ ಶಿಬಿರ ಸೇರಿದಂತೆ ಸರ್ಕಾರದ ಮಾಹಿತಿಗಳನ್ನು ಸಾರ್ವಜನಿಕರಿಗೆ ತಿಳಿಸುವ ಸಲುವಾಗಿ ನಾಡಹಬ್ಬ ದಸರಾ ನಗರಕ್ಕಷ್ಟೇ ಸೀಮಿತವಾಗದೆ ಗ್ರಾಮಗಳಲ್ಲಿಯೂ ನಡೆಸುವ ಉದ್ದೇಶದಿಂದ ಜಯಪುರದಲ್ಲಿ ದಸರಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು.
> - **ಜಿ.ಟಿ.ದೇವೇಗೌಡ,** ಶಾಸಕ, ಚಾಮುಂಡೇಶ್ವರಿ ಕ್ಷೇತ್ರ



ಆನ್‌ಲೈನ್‌ನಲ್ಲಿ ಬಿಡುಗಡೆಯಾದ ಸಾವಿರ ಗೋಲ್ಡ್ ಕಾರ್ಡ್‌ಗಳು ಕೆಲವೇ ಗಂಟೆಯಲ್ಲಿ ಮಾರಾಟ

ಮೈಸೂರು, ಸೆ.29(ಆರ್‌ಕೆ)-ಮೈಸೂರು ಜಿಲ್ಲಾಡಳಿತವು ಬಿಡುಗಡೆ ಮಾಡಿದ ಒಂದು ಸಾವಿರ ದಸರಾ ಗೋಲ್ಡ್ ಕಾರ್ಡ್‌ಗಳು ಆನ್‌ಲೈನ್‌ನಲ್ಲಿ ಕೇವಲ 7 ಗಂಟೆಯಲ್ಲಿ ಖಾಲಿ ಆಗಿವೆ

ಬುಧವಾರ ಸಂಜೆ 4 ಗಂಟೆಗೆ ಆನ್‌ಲೈನ್‌ನಲ್ಲಿ ಮಾರಾಟಕ್ಕಿಟ್ಟಿದ್ದ ಗೋಲ್ಡ್ ಕಾರ್ಡ್‌ಗಳು ಅಂದೇ ರಾತ್ರಿ 11 ಗಂಟೆ ವೇಳೆಗೆ ಪೂರ್ಣ ಮಾರಾಟವಾಗಿವೆ. 4,999 ರೂ. ಮುಖ ಬೆಲೆಯ ದಸರಾ ಗೋಲ್ಡ್ ಕಾರ್ಡ್‌ಗಳನ್ನು ಜಿಲ್ಲಾಡಳಿತದ ಅಧಿಕೃತ ದಸರಾ ವೆಬ್‌ಸೈಟ್ www.mysore.dasara.gov.in ನಲ್ಲಿ ಬಿಡುಗಡೆ ಮಾಡಲಾಗಿತ್ತು. ಒಬ್ಬರಿಗೆ 2 ಟಿಕೆಟ್ ಮಾತ್ರ ಖರೀದಿಸಲು ಅವಕಾಶವಿತ್ತು. ಆದರೂ ಕೆಲವೇ ಗಂಟೆಯಲ್ಲಿ ಖಾಲಿಯಾಗಿವೆ.

ಬುಧವಾರ ರಾತ್ರಿ 11 ಗಂಟೆ ನಂತರ ವೆಬ್‌ಸೈಟ್‌ನಲ್ಲಿ ಪ್ರಯತ್ನಿಸಿದವರಿಗೆ ನಿರಾಸೆಯಾಯಿತು. ಈ ಕಾರ್ಡ್ ಹೊಂದಿರುವವರಿಗೆ ಅರಮನೆ ಆವರಣದಲ್ಲಿ ಜಂಬೂ ಸವಾರಿ ಮೆರವಣಿಗೆ ವೀಕ್ಷಿಸಲು ವಿಶೇಷ ಆಸನದ ವ್ಯವಸ್ಥೆ ಮಾಡಲಾಗುವುದು. ಅದೇ ರೀತಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆಯುವ ದಸರಾ ಟಾರ್ಚ್‌ಲೈಟ್ ಪರೇಡ್‌ನಲ್ಲೂ ವಿಶೇಷ ಸ್ಥಳಾವಕಾಶ ಮಾಡಲಾಗುವುದು.

ಅಲ್ಲದೇ ಮೈಸೂರು ಅರಮನೆ, ಮೃಗಾಲಯ, ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ದಸರಾ ಫಲಪುಷ್ಪ ಪ್ರದರ್ಶನ, ದಸರಾ ವಸ್ತುಪ್ರದರ್ಶನ, ರೈಲ್ವೇ ಮ್ಯೂಸಿಯಂ, ಸೆಂಟ್ ಫಿಲೋಮಿನಾ ಚರ್ಚ್ ಹಾಗೂ ಕೃಷ್ಣರಾಜ ಸಾಗರ (ಕೆಆರ್‌ಎಸ್)ವನ್ನು ಒಂದು ಬಾರಿ ವೀಕ್ಷಿಸಲು ಗೋಲ್ಡ್ ಕಾರ್ಡ್‌ನಲ್ಲಿ ಪ್ರವೇಶಾವಕಾಶ ಕಲ್ಪಿಸಲಾಗುವುದು.

ಆನ್‌ಲೈನ್‌ನಲ್ಲಿ ಹಣ ಪಾವತಿಸಿ ಬುಕ್ ಮಾಡಿದವರಿಗೆ ಅದರ ಕಂಪ್ಯೂಟರ್ ರಶೀದಿ ಹಾಗೂ ಯಾವುದಾದರೊಂದು ಗುರುತಿನ ಚೀಟಿ ಪಡೆದು ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಯೂರ ಹೊಯ್ಸಳ ಹೋಟೆಲ್ ಆವರಣದಲ್ಲಿರುವ ಪ್ರವಾಸೋದ್ಯಮ ಇಲಾಖೆ ಕಚೇರಿಯಲ್ಲಿ ಇಂದು ಬೆಳಗ್ಗೆ 11 ರಿಂದ ಸಂಜೆ 5 ಗಂಟೆವರೆಗೆ ಗೋಲ್ಡ್ ಕಾರ್ಡ್‌ಗಳನ್ನು ವಿತರಿಸಲಾಯಿತು.

ಜನರು, ಪ್ರವಾಸಿಗರಿಂದ ಭಾರೀ ಬೇಡಿಕೆ ಇರುವುದರಿಂದ ಜಿಲ್ಲಾಡಳಿತವು ಎರಡನೇ ಹಂತದಲ್ಲೂ ಇನ್ನಷ್ಟು ಗೋಲ್ಡ್ ಕಾರ್ಡ್‌ಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡಲು ಮುಂದಾಗಿದ್ದು, ಆ ಕುರಿತು ಮಾಹಿತಿ ನೀಡಲಿದೆ. ದಸರಾ ವೀಕ್ಷಿಸಲು ಟಿಕೆಟ್, ಪಾಸ್‌ಗಳಿಗೂ ಬೇಡಿಕೆ ಹೆಚ್ಚಾಗಿರುವುದರಿಂದ ಜಂಬೂಸವಾರಿ ವೀಕ್ಷಣೆಗೆ 1500 ರೂ. ಬೆಲೆಯ 1,000 ಟಿಕೆಟ್ ಹಾಗೂ ಟಾರ್ಚ್‌ಲೈಟ್ ಪರೇಡ್ ನೋಡಲು 1,000 ರೂ. ಬೆಲೆಯ 1,000 ಹಾಗೂ 500 ರೂ. ಬೆಲೆಯ 2,000 ಟಿಕೆಟ್ ಮುದ್ರಿಸಿ ಮಾರಾಟ ಮಾಡಲು ಜಿಲ್ಲಾಡಳಿತ ನಿರ್ಧರಿಸಿದೆ.

ದಸರಾ ವೀಕ್ಷಣೆಗೆಂದು ಮೈಸೂರಿಗೆ ಬಂದಿರುವ ಪ್ರವಾಸಿಗರು, ಹೋಟೆಲ್‌ಗಳಲ್ಲಿ ಮುಂಗಡವಾಗಿ ರೂಂ ಬುಕ್ ಮಾಡಿಕೊಂಡು ಸುತ್ತಲಿನ ಪ್ರವಾಸಿ ತಾಣಗಳನ್ನು ವೀಕ್ಷಿಸುತ್ತಿರುವುದಲ್ಲದೆ, ಜಂಬೂಸವಾರಿ ಮೆರವಣಿಗೆ ಹಾಗೂ ಪಂಜಿನ ಕವಾಯತು ಪ್ರದರ್ಶನ ವೀಕ್ಷಿಸಲು ಪಾಸ್‌ಗಳಿಗಾಗಿ ಪರದಾಡುತ್ತಿದ್ದಾರೆ. ಆದರೆ ಜಿಲ್ಲಾಡಳಿತವು ವಿಐಪಿ ಪಾಸ್‌ಗಳನ್ನು ಇನ್ನೂ ಬಿಡುಗಡೆ ಮಾಡಿಲ್ಲ ಎಂದು ಪೊಲೀಸ್ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾಳಸಂತೆಯಲ್ಲಿ 7 ಸಾವಿರಕ್ಕೆ ಗೋಲ್ಡ್ ಕಾರ್ಡ್ ಮಾರಾಟ: ಆಡಿಯೋ ವೈರಲ್



ಮೈಸೂರು, ಸೆ.29(ಆರ್‌ಕೆ)-ದಸರಾ ಗೋಲ್ಡ್ ಕಾರ್ಡ್‌ಗಳನ್ನು 7,000 ರೂ.ಗಳಿಗೆ ಕಾಳಸಂತೆಯಲ್ಲಿ ಮಾರಲಾಗುತ್ತಿದೆ ಎಂಬ ಆಡಿಯೋ ಇದೀಗ ವೈರಲ್ ಆಗಿದೆ. ಬೆಂಗಳೂರು ಮೂಲದ ಟ್ರಾವೆಲ್ ಏಜೆನ್ಸಿಯೊಂದರ ಉದ್ಯೋಗಿ ತಮ್ಮ ಕಚೇರಿಗೆ ಫೋನ್ ಮಾಡಿದ ಮಹಿಳೆಯೊಬ್ಬರಿಗೆ 'ಕೇವಲ 10 ಗೋಲ್ಡ್ ಕಾರ್ಡ್‌ಗಳು ಮಾತ್ರ ಉಳಿದಿವೆ. ಬೇಗ ಬಂದು 7,000 ರೂ. ಪಾವತಿಸಿ ಪಡೆಯಬಹುದು. ಈಗಾಗಲೇ ಗೋಲ್ಡ್ ಕಾರ್ಡ್‌ಗಾಗಿ ಅನೇಕ ಫೋನ್ ಕಾಲ್‌ಗಳು ಬರುತ್ತಿವೆ. ತಡವಾಗಿ ಬಂದರೆ ಸಿಗುವುದಿಲ್ಲ' ಎಂದು ಹೇಳಿ, ಒಂದು ಗೋಲ್ಡ್ ಕಾರ್ಡ್‌ಗೆ 2,000 ರೂ. ಅಧಿಕ ಹಣ ಪಡೆದು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರಿಗೆ ಆಡಿಯೋ ವೈರಲ್ ತುಣುಕನ್ನು ಹಾಗೂ ಸಂಭಾಷಣೆ ಮಾಡಿರುವ ವ್ಯಕ್ತಿಯ ಮೊಬೈಲ್ ನಂಬರ್ ಸಮೇತ ಕಳುಹಿಸಿರುವ ಮೈಸೂರು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರು, ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ.

ಮೈಸೂರಿಗರು, ಪ್ರವಾಸೋದ್ಯಮಿಗಳಿಗೆ ಸಿಗದ ಗೋಲ್ಡ್ ಕಾರ್ಡ್‌ಗಳು, ಬೆಂಗಳೂರಿನ ಸಂಸ್ಥೆಯೊಂದಕ್ಕೆ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕಿದ್ದು ಹೇಗೆ ಎಂಬುದರ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಪಾರಂಪರಿಕ ಸೈಕಲ್ ಸವಾರಿ: ಪ್ರದಕ್ಷಿಣೆಯೊಂದಿಗೆ ಮೈಸೂರಿನ ಪಾರಂಪರಿಕ ಕಟ್ಟಡಗಳ ವೀಕ್ಷಣೆ



ಮೈಸೂರು,ಸೆ.29(ಎಂಟಿವೈ)- ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಗುರುವಾರ ಆಯೋಜಿಸಿದ್ದ 'ಪಾರಂಪರಿಕ ಸೈಕಲ್ ಸವಾರಿ'ಯಲ್ಲಿ ಹಲವು ಮಂದಿ ಸೈಕಲ್‌ನಲ್ಲೇ ನಗರ ಪ್ರದಕ್ಷಿಣೆ ಹಾಕಿ, ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಿದರು.

ಮೈಸೂರಿನ ಪುರಭವನದ ಆವರಣದಲ್ಲಿ ಇಂದು ಬೆಳಗ್ಗೆ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ ಆಯೋಜಿಸಿದ್ದ 'ಪಾರಂಪರಿಕ ಸೈಕಲ್ ಸವಾರಿ'ಯಲ್ಲಿ ಟ್ರಿಣ್-ಟ್ರಿಣ್ ಸೈಕಲ್ ಜಾಥಾಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಹಸಿರು ನಿಶಾನೆ ತೋರಿ, ಚಾಲನೆ ನೀಡಿದರು. ಅಲ್ಲದೆ, ಸೈಕಲ್ ಸವಾರರೊಂದಿಗೆ ದೊಡ್ಡಗಡಿಯಾರ ವೃತ್ತದವರೆಗೂ ತಾವೂ ಸೈಕಲ್‌ನಲ್ಲಿ ಸಾಗಿ ಗಮನ ಸೆಳೆದರು.

ಇದೇ ವೇಳೆ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ದಸರಾ ಹಿನ್ನೆಲೆಯಲ್ಲಿ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ ಸೈಕಲ್ ಜಾಥಾ ಆಯೋಜಿಸಿ, ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳ ಪರಿಚಯ, ಅವುಗಳ ಮಹತ್ವ ತಿಳಿಸುವುದಕ್ಕೆ ಕ್ರಮ ಕೈಗೊಂಡಿರುವುದು ಶ್ಲಾಘನೀಯ. ಸೈಕಲ್ ಜಾಥಾದಲ್ಲಿ ಯುವಕರು, ಹಿರಿಯರು ಸೇರಿದಂತೆ ಎಲ್ಲಾ ವರ್ಗದ ಜನರು ಸೈಕಲ್ ಸವಾರಿ ಮಾಡುವ ಮೂಲಕ ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಎಲ್. ನಾಗೇಂದ್ರ, ಪುರಾತತ್ವ, ಸಂಗ್ರ ಹಾಲಯ ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕಿ ಸಿ.ಎನ್.ಮಂಜುಳಾ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಚಾಮುಂಡಿಬೆಟ್ಟದಿಂದ ಮೆರವಣಿಗೆಯಲ್ಲಿ ಸಾಗಿದ ಕ್ರೀಡಾ ಜ್ಯೋತಿ



ಮೈಸೂರು,ಸೆ.29(ಎಂಟಿವೈ)- ನಾಡಹಬ್ಬ ದಸರಾ ಹಿನ್ನೆಲೆಯಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ದಸರಾ ಕ್ರೀಡಾಕೂಟದ 'ಕ್ರೀಡಾ ಜ್ಯೋತಿ'ಯ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ಚಾಮುಂಡಿಬೆಟ್ಟದಲ್ಲಿ ನಾಡದೇವಿ ಶ್ರೀ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಕ್ರೀಡಾ ಜ್ಯೋತಿಯನ್ನು ಬೆಳಗಿಸಿದರು. ಕ್ರೀಡಾಪಟುಗಳು ಹಾಗೂ ಉಪಸಮಿತಿಯ ಪದಾಧಿಕಾರಿಗಳು ಕ್ರೀಡಾ ಜ್ಯೋತಿ ಮೆರವಣಿಗೆಯಲ್ಲಿ ಪಾಲ್ಗೊಂಡರು. ಮೈಸೂರಿನ ವಿವಿಧ ರಸ್ತೆಗಳಲ್ಲಿ ಸಂಚರಿಸಿದ ಕ್ರೀಡಾ ಜ್ಯೋತಿಯನ್ನು ಕೊನೆಗೆ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣಕ್ಕೆ ತರಲಾಯಿತು. ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಕ್ರೀಡಾ ಜ್ಯೋತಿ ಮೆರವಣಿಗೆಯಲ್ಲಿ ಸಾಗಿದರು. ಈ ಸಂದರ್ಭದಲ್ಲಿ ಶಾಸಕ ಎಲ್.ನಾಗೇಂದ್ರ ಹಾಗೂ ಕ್ರೀಡಾಪಟುಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಕ್ಕಳಿಗೆ ಮೊದಲು ಕ್ರಿಕೆಟ್ ಅಭ್ಯಾಸಕ್ಕೆ ಆಸಕ್ತಿ ತೋರುತ್ತಿದ್ದ ಪೋಷಕರು ಈಗ ಯೋಗಾಭ್ಯಾಸದತ್ತ ಮುಖ ಮಾಡಿದ್ದಾರೆ: ಸಿಂಹ

ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ನೂರಾರು ಯೋಗಪಟುಗಳು ಭಾಗಿ

ಮೈಸೂರು,ಸೆ.29(ಎಂಟಿವೈ)- ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಯೋಗ ದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆಯಲ್ಲಿ ನೂರಾರು ಯೋಗಪಟುಗಳು ಪಾಲ್ಗೊಂಡು ವಿವಿಧ ಆಸನಗಳನ್ನು ಪ್ರದರ್ಶಿಸಿ ಗಮನ ಸೆಳೆದರು.



ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಆಯೋಜಿಸಿದ್ದ 'ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆ'ಯಲ್ಲಿ ಮೈಸೂರು, ಬೆಂಗಳೂರು, ಮಂಡ್ಯ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಯೋಗಪಟುಗಳು ಸ್ಪರ್ಧೆಗಾಗಿ ಸೂಚಿಸಿದ್ದ ಕೆಲವು ಆಸನಗಳನ್ನು ಪ್ರದರ್ಶಿಸಿ ಪ್ರಶಂಸೆಗೆ ಪಾತ್ರರಾದರು. ಸ್ಪರ್ಧೆಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ದೀಪ ಬೆಳಗುವ ಮೂಲಕ ಉದ್ಘಾಟಿಸಿ, ಯೋಗಪಟುಗಳಿಗೆ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಎರಡು ವರ್ಷದಿಂದ ದಸರಾ ಸಾಂಪ್ರದಾಯಿಕ ಆಚರಣೆಗಷ್ಟೇ ಸೀಮಿತವಾಗಿತ್ತು. ಈಗ ಕೊರೊನಾ ನಿಯಂತ್ರಣದಲ್ಲಿರುವುದರಿಂದ ಈ ಸಾಲಿನ ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ಸರ್ಕಾರ ಕ್ರಮ ಕೈಗೊಂಡಿದೆ. ನಾಡಹಬ್ಬದ ಯಶಸ್ಸಿಗೆ ಜಿಲ್ಲಾ ಉಸ್ತುವಾರಿ ಸಚಿವರು ಸಾಕಷ್ಟು ಪರಿಶ್ರಮದಿಂದ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಕಾರ್ಯಕ್ರಮ, ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಯಶಸ್ಸಿಗೂ ಸಹಕಾರಿಯಾಗಿ ಖುದ್ದು ಹಾಜರಾಗುತ್ತಿದ್ದಾರೆ. ಪ್ರಸಕ್ತ ಸಾಲಿನ ದಸರಾ ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮನ ಹಾಗೂ ಯುವ ದಸರಾದಲ್ಲಿ ಅಪ್ಪು ನಮನ ಕಾರ್ಯಕ್ರಮ ನಾಡಹಬ್ಬದ ಯಶಸ್ವಿಗೆ ಉದಾಹರಣೆ ಎಂದರು.

ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಆಗಮಿಸಿದ್ದರಿಂದ ಯೋಗ ನಗರಿ ಮೈಸೂರಿನ ಕೀರ್ತಿ ಇನ್ನಷ್ಟು ಉತ್ತುಂಗಕ್ಕೆ ಏರಿದಂತಾಗಿದೆ. ಮುಂದಿನ ದಿನಗಳಲ್ಲಿ ಯೋಗಕ್ಕೆ ಮತ್ತಷ್ಟು ಒತ್ತು ನೀಡುವ ಮೂಲಕ ಗಟ್ಟಿಗೊಳಿಸುವ ಕಾರ್ಯವಾಗಬೇಕಿದೆ. ಆರೋಗ್ಯಯುತ ಜೀವನಕ್ಕೆ ಯೋಗವು ಸಹಕಾರಿಯಾಗಿದ್ದು, ಪೋಷಕರು ಮಕ್ಕಳಿಗೆ ಯೋಗ ಕಲಿಸಲು ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಈ ಹಿಂದೆ ಪೋಷಕರು ತಮ್ಮ ಮಕ್ಕಳನ್ನು ಕ್ರಿಕೆಟ್ ಅಭ್ಯಾಸಕ್ಕೆ ಕಳುಹಿಸುತ್ತಿದ್ದರು. ಆದರೆ, ಈಗ ಆರೋಗ್ಯ ಹಿತದೃಷ್ಟಿಯಿಂದ ಬಹುತೇಕ ಮಕ್ಕಳನ್ನು ಯೋಗಾಭ್ಯಾಸಕ್ಕೆ ಕಳುಹಿಸುತ್ತಿರುವುದು ಶ್ಲಾಘನೀಯ ಎಂದರು.

11 ವಿಭಾಗದಲ್ಲಿ ಸ್ಪರ್ಧೆ: ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆಯಲ್ಲಿ 11 ವಿಭಾಗಗಳಲ್ಲಿ ಯೋಗಾಸನ ಸ್ಪರ್ಧೆ ಜರುಗಿತು. 8-10 ವರ್ಷ, 10-12 ವರ್ಷ, 12-14 ವರ್ಷ, 14-18 ವರ್ಷ, 18-21 ವರ್ಷ, 21-25 ವರ್ಷ, 25-35 ವರ್ಷ, 35-45 ವರ್ಷ, 45-55 ವರ್ಷ ಹಾಗೂ 55 ವರ್ಷ ಮೇಲ್ಪಟ್ಟವರಿಗೆ ಸ್ಪರ್ಧೆ ನಡೆಸಲಾಯಿತು. ಇದರೊಂದಿಗೆ ವಿಶೇಷಚೇತನರಿಗೂ ಪ್ರತ್ಯೇಕ ಸ್ಪರ್ಧೆ ಆಯೋಜಿಸಲಾಗಿತ್ತು. ಬಾಲಕ/ಬಾಲಕಿಯರು, ಪುರುಷ/ಮಹಿಳೆಯರಿಗೆ ಪ್ರತ್ಯೇಕವಾಗಿ ಸ್ಪರ್ಧೆ ನಡೆಸಲಾಯಿತು. ಈ ಸ್ಪರ್ಧೆಯಲ್ಲಿ ಕಡ್ಡಾಯವಾಗಿ ಪಾರ್ಶ್ವೋತ್ತಾಸನ, ವೃಕ್ಷಾಸನ, ಉಷ್ಟ್ರಾಸನ, ಧನುರಾಸನ, ಊರ್ಧ್ವಮುಖಶ್ವಾಸನ, ವೀರಭದ್ರಾಸನ, ಹಲಾಸನ, ಜಾನು ಶೀರ್ಷಾಸನ, ಶೀರ್ಷಾಸನ, ಚಕ್ರಾಸನ, ಮತ್ಸ್ಯಾಸನ, ಭರದ್ವಾಜಾಸನ, ಪಾದಾಂಗುಷ್ಠಾಸನ, ಸರ್ವಾಂಗಾಸನವನ್ನು ಕಡ್ಡಾಯವಾಗಿ ಮಾಡಲು ನಿರ್ಬಂಧ ಹೇರಲಾಗಿತ್ತು. ವಯೋಮಾನದವರಿಗೆ ಅನುಗುಣವಾಗಿ ಯೋಗ ಪ್ರದರ್ಶನಕ್ಕೆ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿತ್ತು.

ಈ ಸಂದರ್ಭ ದಸರಾ ಯೋಗಾ ಉಪಸಮಿತಿ ಉಪ ವಿಶೇಷಾಧಿಕಾರಿ ಸೀಮಂತಿನಿ, ಅಧ್ಯಕ್ಷ ಬಾಲಕೃಷ್ಣ, ಜಂಗಲ್ ರೆಸಾರ್ಟ್ ಮಾಜಿ ಅಧ್ಯಕ್ಷ ಅಪ್ಪಣ್ಣ, ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಉಪಾಧ್ಯಕ್ಷರಾದ ಈಶ್ವರ್, ಯೋಗೇಶ್‌ಕುಮಾರ್, ಕೆ.ವೈ.ಮಂಜು, ಅರುಣ್‌ಕುಮಾರ್, ಯೋಗ ಸಂಸ್ಥೆಗಳ ಮುಖ್ಯಸ್ಥರಾದ ಗಣೇಶ್ ಕುಮಾರ್, ಜಲೇಂದ್ರ ಕುಮಾರ್, ಶಶಿಕುಮಾರ್, ಬಿ.ಪಿ. ಮೂರ್ತಿ, ರಮೇಶ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಇಂದು ರಾಜ್ಯ ಪ್ರವೇಶ

ನಡೆಸಿದರು. ಅಲ್ಲದೇ ಪೊಲೀಸ್ ಬಂದೋಬಸ್ತ್ ಬಗ್ಗೆ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಮಾತ್ರವಲ್ಲದೇ ಪಾದಯಾತ್ರೆ ಸಾಗುವ ಮಾರ್ಗಮಧ್ಯೆ ಯಾವ ಯಾವ ಸ್ಥಳದಲ್ಲಿ ತೀವ್ರ ನಿಗಾ ವಹಿಸಬೇಕು ಎಂಬುದರ ಬಗ್ಗೆಯೂ ಸೂಚನೆಗಳನ್ನು ನೀಡಿದರು.

ಅ.1ರಂದು ಬೆಳಗ್ಗೆ 6.30ಕ್ಕೆ ಬೇಗೂರಿನಿಂದ 2ನೇ ದಿನದ ಪಾದಯಾತ್ರೆ ಆರಂಭವಾಗಿದ್ದು, ಕಳಲೆ ಗೇಟ್ ಬಳಿ ರಾಹುಲ್ ಗಾಂಧಿ ತಂಡ ಮಧ್ಯಾಹ್ನದ ಊಟ ನಂತರ ವಿಶ್ರಾಂತಿ ಪಡೆಯಲಿದೆ. ಈ ವೇಳೆ ರಾಹುಲ್ ಗಾಂಧಿಯವರು ಕೈಗಾರಿಕೋದ್ಯಮಿಗಳು ಮತ್ತು ವಿವಿಧ ರಂಗದ ಮುಖಂಡರುಗಳ ಜೊತೆ ಸಂವಾದ ನಡೆಸಲಿದ್ದಾರೆ. ಸಂಜೆ 4 ಗಂಟೆಗೆ ಪಾದಯಾತ್ರೆ ಮುಂದುವರೆದು ತಾಂಡವಪುರ ಬಸ್ ನಿಲ್ದಾಣದ ಬಳಿ ಮುಕ್ತಾಯಗೊಂಡ ನಂತರ ಅಲ್ಲಿನ ಕ್ರೈಸ್ಟ್ ಶಾಲೆಯ ಬಳಿ ಬಹಿರಂಗ ಸಭೆ ನಡೆಯಲಿದ್ದು ನಂತರ ಎಂಐಟಿ ಕಾಲೇಜಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ನಂಜನಗೂಡು ತಾಲೂಕಿನ ಕಾಂಗ್ರೆಸ್ ಕಾರ್ಯಕರ್ತರು ರಾಹುಲ್ ಗಾಂಧಿಯವರಿಗೆ ಅಭೂತಪೂರ್ವ ಸ್ವಾಗತ ನೀಡಲು ಸಕಲ ಸಿದ್ಧತೆ ನಡೆಸಿದ್ದಾರೆ. ತಾಲೂಕಿನ ಎಲಚಗೆರೆ ಬೋರೆಯ ಬಳಿ ಸ್ವಾಗತ ಕಮಾನು ನಿರ್ಮಿಸಿದ್ದು, ಸುಮಾರು 3ಸಾವಿರಕ್ಕೂ ಅಧಿಕ ಮಹಿಳೆಯರಿಂದ ಪೂರ್ಣಕುಂಭ ಸ್ವಾಗತ, ಕಲಾತಂಡಗಳ ಮೆರವಣಿಗೆಗೂ ಸಹ ಸಿದ್ಧತೆ ನಡೆಸಿದ್ದಾರೆ. ರಸ್ತೆ ಉದ್ದಕ್ಕೂ ಸಹ ಅಲ್ಲಲ್ಲಿ ವಿಶ್ರಾಂತಿ ತಾಣಗಳನ್ನು ನಿರ್ಮಿಸಿ ತಂಪು ಪಾನೀಯ, ಕಾಫಿ ಟೀ ವಿತರಣೆಗೆ ಸಿದ್ಧತೆ ನಡೆಸಲಾಗಿದೆ. ರಾಹುಲ್ ಗಾಂಧಿ ಪಾದಯಾತ್ರೆ ನಡೆಸುವ ರಾಷ್ಟ್ರೀಯ ಹೆದ್ದಾರಿ ಉದ್ದಕ್ಕೂ ಬೃಹತ್ ಫ್ಲೆಕ್ಸ್ ಮತ್ತು ಬ್ಯಾನರ್‌ಗಳ ಅಳವಡಿಕೆ ಕಾರ್ಯ ಮುಂದುವರಿದಿದ್ದು, ರಸ್ತೆಗಳ ಸ್ವಚ್ಛತೆ ನಡೆಸಿ ಮದುವಣಗಿತ್ತಿಯಂತೆ ಶೃಂಗರಿಸಿದ್ದಾರೆ. ತಾಂಡವಪುರದ ಎಂಐಟಿ ಕಾಲೇಜಿನಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಗಿದೆ.

ಅ.2ರಂದು ಗಾಂಧಿ ಜಯಂತಿ ಅಂಗವಾಗಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಭೇಟಿ ನೀಡಿದ್ದ ನಂಜನಗೂಡು ತಾಲೂಕಿನ ಬದನವಾಳು ಗ್ರಾಮದಲ್ಲಿರುವ ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ವಾಹನಗಳ ಮೂಲಕ ತೆರಳಲಿರುವ ರಾಹುಲ್ ಗಾಂಧಿ, ಅಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಿದ್ದಾರೆ. ನಂತರ ಮತ್ತೆ ನಂಜನಗೂಡಿಗೆ ಆಗಮಿಸಿ ಕಡಕೊಳ ಕೈಗಾರಿಕಾ ಪ್ರದೇಶದಿಂದ ಪಾದಯಾತ್ರೆಯನ್ನು ಮುಂದುವರೆಸಿ ಅಂದು ಸಂಜೆ ಮೈಸೂರು ಅರಮನೆ ಎದುರಿನ ವಸ್ತು ಪ್ರದರ್ಶನ ಪ್ರಾಧಿಕಾರ ಮೈದಾನ ತಲುಪಲಿದ್ದಾರೆ. ಅ.3ರಂದು ಮೈಸೂರಿನಿಂದ ಹೊರಡಲಿರುವ ಪಾದಯಾತ್ರೆಯು ಶ್ರೀರಂಗಪಟ್ಟಣ ಮೂಲಕ ಸಾಗಿ ಪಾಂಡವಪುರ ತಾಲೂಕಿನ ಕೆನ್ನಾಳು ಗ್ರಾಮದ ವಜಜಾ ಸುಂದರ ಕನ್ವೆನ್ಷನ್ ಹಾಲ್‌ನಲ್ಲಿ ವಿಶ್ರಾಂತಿ ಪಡೆದ ನಂತರ ಸಂಜೆ 4 ಗಂಟೆಗೆ ಪಾದಯಾತ್ರೆ ಮುಂದುವರೆದು ಟಿ.ಎಸ್.ಛತ್ರ ಗ್ರಾಮದ ವೆಂಕಟರಮಣಸ್ವಾಮಿ ದೇವಸ್ಥಾನದ ಎದುರು ವಾಸ್ತವ್ಯ ಹೂಡಲಿದೆ. ಆಯುಧ ಪೂಜೆ ಹಾಗೂ ವಿಜಯ ದಶಮಿ ಅಂಗವಾಗಿ ಅ.4 ಮತ್ತು 5ರಂದು ಪಾದಯಾತ್ರೆಗೆ ವಿರಾಮ ನೀಡಲಾಗಿದ್ದು, ಅ.6ರಂದು ಮಹದೇಶ್ವರ ದೇವಸ್ಥಾನದಿಂದ ಪಾದಯಾತ್ರೆ ಆರಂಭವಾಗಿ ನಾಗಮಂಗಲ ತಾಲೂಕು ಚೌಡೇನಹಳ್ಳಿ ಗೇಟ್ ಬಳಿ ವಿಶ್ರಾಂತಿ ಪಡೆದು ಸಂಜೆ 4 ಗಂಟೆಗೆ ಪಾದಯಾತ್ರೆ ಮುಂದುವರೆದು ಬ್ರಹ್ಮದೇವನಹಳ್ಳಿಯ ಎಂ.ಹೊಸೂರು ಗೇಟ್ ಬಳಿ ವಾಸ್ತವ್ಯ ಹೂಡಲಿದೆ. ಅ.7ರಂದು ವಿಶ್ವಮ ಪಬ್ಲಿಕ್ ಸ್ಕೂಲ್‌ನಿಂದ ಹೊರಡಲಿರುವ ಯಾತ್ರೆಯು ನಾಗಮಂಗಲ ತಾಲೂಕು ಅಂಚೆಚಿಟ್ಟನಹಳ್ಳಿಯಲ್ಲಿ ವಿಶ್ರಾಂತಿ ಪಡೆದು ಸಂಜೆ 4ಕ್ಕೆ ಯಾತ್ರೆ ಮುಂದುವರೆದು ಬೆಳ್ಳೂರು ಬಸ್ ನಿಲ್ದಾಣದ ಬಳಿ ಮುಕ್ತಾಯವಾದ ನಂತರ ಆದಿಚುಂಚನಗಿರಿ ಮಠದ ಬಳಿಯ ಮೈದಾನದಲ್ಲಿ ವಾಸ್ತವ್ಯ ಹೂಡಲಿದೆ.

ಅ.8ರಂದು ಅಲ್ಲಿಂದ ಆರಂಭವಾಗುವ ಯಾತ್ರೆ ತುರುವೇಕೆರೆ ತಾಲೂಕು ವಡವನಘಟ್ಟ ಗ್ರಾಮದಲ್ಲಿ ವಿಶ್ರಾಂತಿ ಪಡೆದು ಸಂಜೆ 4ಕ್ಕೆ ಪಾದಯಾತ್ರೆ ಮುಂದುವರೆದು ಮತ್ತಿಘಟ್ಟದ ಬನ್ನಿಹಟ್ಟಿಯಲ್ಲಿ ವಾಸ್ತವ್ಯ ಹೂಡಲಿದೆ. ಅ.9ರಂದು ಬೆಳಿಗ್ಗೆ 7 ಗಂಟೆಗೆ ಆರಂಭವಾಗುವ ಯಾತ್ರೆ ಸಿದ್ದನಘಟ್ಟ ಪಬ್ಲಿಕ್ ಸ್ಕೂಲ್ ಬಳಿ ವಿಶ್ರಾಂತಿ ಪಡೆದು ಸಂಜೆ 4ಕ್ಕೆ ಮುಂದುವರೆದು ಸೋಮಲಾಪುರದ ಕೋಡಿಯಾಳದಲ್ಲಿ ವಾಸ್ತವ್ಯ ಹೂಡಲಿದೆ. ಅ.10ರಂದು ಅಲ್ಲಿಂದ ಹೊರಡುವ ಯಾತ್ರೆ ಅಂಕಸಂದ್ರ ಹಳ್ಳಿ ಮೈದಾನದಲ್ಲಿ ವಿಶ್ರಾಂತಿ ಪಡೆದು ಸಂಜೆ 4 ಗಂಟೆ ಮುಂದುವರೆದು ಕಳ್ಳಿಬೆಳ್ಳ ಗ್ರಾಮದಲ್ಲಿ ವಾಸ್ತವ್ಯ ಹೂಡಲಿದೆ. ಅ.11ರಂದು ಬೆಳಗ್ಗೆ 11 ಅಲ್ಲಿಂದ ಹೊರಡುವ ಯಾತ್ರೆ ಸಿರಿಗಂಧ ಆರಮನೆ ಬಳಿ ವಿಶ್ರಾಂತಿ ಪಡೆದ ನಂತರ ತಾವರೆಕೆರೆ ಶನೇಶ್ವರ ದೇವಾಲಯದ ಬಳಿ ವಾಸ್ತವ್ಯ ಹೂಡಲಿದೆ. ಅ.12ರಂದು ಬೆಳಗ್ಗೆ 7 ಗಂಟೆಗೆ ಅಲ್ಲಿಂದ ಪ್ರಾರಂಭವಾಗುವ ಪಾದಯಾತ್ರೆ ಹಿರಿಯೂರು ಬೈಪಾಸ್‌ನಲ್ಲಿ ವಿಶ್ರಾಂತಿ ಪಡೆದು ಸಂಜೆ 4 ಗಂಟೆಗೆ ಹೊರಟು ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆ ಗ್ರಾಮದಲ್ಲಿ ವಾಸ್ತವ್ಯ ಹೂಡಲಿದೆ. ಅ.14ರಂದು ಅಲ್ಲಿಂದ ಆರಂಭವಾಗುವ ಯಾತ್ರೆ ಸಾಣಿಕೆರೆ ಬಳಿ ವಿಶ್ರಾಂತಿ ಪಡೆದು ಸಂಜೆ 4ಕ್ಕೆ ಮುಂದುವರೆದು ಚಳ್ಳಕೆರೆಯಲ್ಲಿ ವಾಸ್ತವ್ಯ ಹೂಡಲಿದೆ. ಅ.15ರಂದು ಬೆಳಗ್ಗೆ ಹೊರಡುವ ಪಾದಯಾತ್ರೆ ಗಿರಿಯಮ್ಮನಹಳ್ಳಿಯಲ್ಲಿ ವಿಶ್ರಾಂತಿ ಪಡೆದ ನಂತರ ಮುಂದುವರೆದು ಹಿರೇಹಳ್ಳಿ ಸ್ವಾಮಿ ವಿವೇಕಾನಂದ ಸ್ಕೂಲ್ ಬಳಿ ವಾಸ್ತವ್ಯ ಹೂಡಲಿದೆ. ಅ.16ರಂದು ಬೆಳಗ್ಗೆ ಅಲ್ಲಿಂದ ಹೊರಡುವ ಯಾತ್ರೆ ಕಣಸಾಗರಹಳ್ಳಿ ಮೈದಾನದಲ್ಲಿ ವಿಶ್ರಾಂತಿ ಪಡೆದ ನಂತರ ಮುಂದುವರೆದು ಮೆಳಕಾಲ್ಮೂರು ರಾಂಪುರ ಗ್ರಾಮದಲ್ಲಿ ವಾಸ್ತವ್ಯ ಹೂಡಲಿದೆ. ಅ.17ರಂದು ಬೆಳಗ್ಗೆ ಅಲ್ಲಿಂದ ಹೊರಡುವ ಯಾತ್ರೆ ಮಾದೇನಹಳ್ಳಿ ಗ್ರಾಮದಲ್ಲಿ ವಿಶ್ರಾಂತಿ ಪಡೆದು ಮುಂದುವರೆದು ಬಳ್ಳಾರಿಯ ಹಾಲಕುಂದಿ ಗ್ರಾಮದಲ್ಲಿ ವಾಸ್ತವ್ಯ ಹೂಡಲಿದೆ. ಮರುದಿನ ಅಲ್ಲಿಂದ ಮುಂದುವರೆಯುವ ಯಾತ್ರೆಯು ಸಂಗನಕಲ್ಲು ಗ್ರಾಮದಲ್ಲಿ ವಿಶ್ರಾಂತಿ ಪಡೆದ ನಂತರ ಮುಂದುವರೆದು ಬಳ್ಳಾರಿಯ ಹೊಸ ಮೋಕಹಳ್ಳಿ ಗ್ರಾಮದಲ್ಲಿ ವಾಸ್ತವ್ಯ ಹೂಡಿ ಮರುದಿನ ರಾಜ್ಯದಿಂದ ನಿರ್ಗಮಿಸಲಿದೆ.

ರಾಹುಲ್ ಗಾಂಧಿ ಅವರು ಈ ಪಾದಯಾತ್ರೆಯಲ್ಲಿ ಪ್ರತಿದಿನವೂ ಕೆಲವು ಮುಖಂಡರು ಭಾಗವಹಿಸಲು ನಿಗದಿಪಡಿಸಲಾಗಿದೆ. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಒಂದೊಂದು ಗಂಟೆ ಕಾಲ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿಪಕ್ಷ ನಾಯಕ ಸಿದ್ದರಾಮಯ್ಯ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಜ್ಯದ ಭಾರತ್ ಜೋಡೋ ಪಾದಯಾತ್ರೆಯ ಉಸ್ತುವಾರಿಯನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣ್‌ದೀಪ್ ಸಿಂಗ್ ಸುರ್ಜೇವಾಲ ವಹಿಸಿಕೊಂಡಿದ್ದು, ಅವರಿಗೆ ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಸಾಥ್ ನೀಡಲಿದ್ದಾರೆ. ರಾಹುಲ್ ಗಾಂಧಿ ಅವರು ಪ್ರತಿದಿನ ವಿಶ್ರಾಂತಿ ವೇಳೆ ಯುವಕರು, ಉದ್ಯಮಿಗಳು, ಸಾಹಿತಿಗಳು, ಆದಿವಾಸಿಗಳು, ವಿವಿಧ ಸಂಘಟನೆಗಳ ಮುಖಂಡರು, ವಿವಿಧ ಜನಾಂಗಗಳ ಮುಖಂಡರೊಂದಿಗೆ ಸಂವಾದ ನಡೆಸಲು ನಿಗದಿಪಡಿಸಲಾಗಿದೆ.

ವಾಹನ ಸಂಚಾರ ಮಾರ್ಗ ಬದಲು

ಊಟಿ ಕಡೆಯಿಂದ ಮೈಸೂರಿಗೆ ಸಂಚರಿಸಲಿರುವ ವಾಹನಗಳು ಹಂಗಳ–ಹಂಗಳಪುರ–ಶಿವಪುರ ಕೋಡಹಳ್ಳಿ–ಅಣ್ಣೂರುಕೇರಿ ಮಾರ್ಗ ಗುಂಡ್ಲುಪೇಟೆ ಪಟ್ಟಣದ ಕೋಡಹಳ್ಳಿ ಸರ್ಕಲ್‌ಗೆ ಬಂದು ಚಾಮರಾಜನಗರ ರಸ್ತೆಯ ಮಾರ್ಗವಾಗಿ ಮೈಸೂರಿಗೆ ತೆರಳುವುದು ಎಂದು ಚಾಮರಾಜನಗರ ಎಸ್ಪಿ ಶಿವಕುಮಾರ್ ತಿಳಿಸಿದ್ದಾರೆ.

ಅ.30ರಂದು ಬೆಳಗ್ಗೆ 7 ರಿಂದ ರಾತ್ರಿ 9ಗಂಟೆ ವರೆಗೆ ಮೈಸೂರಿನಿಂದ ನಂಜನಗೂಡಿಗೆ ಬಂದು ಗುಂಡ್ಲುಪೇಟೆ ಕಡೆಗೆ ಹೋಗುವ ವಾಹನಗಳು ನಂಜನಗೂಡು ಪಟ್ಟಣದ ಅಪೋಲೋ ವೃತ್ತ(ಬಿಡಿಓ ಸರ್ಕಲ್) ಕಡೆಯಿಂದ ಗೋಳೂರು–ಬದನವಾಳು–ಕವಲಂದೆ–ಬದನಗುಪ್ಪೆ–ಚಾಮರಾಜನಗರ ಮಾರ್ಗವಾಗಿ ಗುಂಡ್ಲುಪೇಟೆ ತಲುಪುವುದು. ಅ.1ರಂದು ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಮೈಸೂರಿನಿಂದ ನಂಜನಗೂಡು ಮಾರ್ಗವಾಗಿ ಗುಂಡ್ಲುಪೇಟೆಗೆ ತೆರಳುವ ವಾಹನಗಳು ನಂಜನಗೂಡು ಪಟ್ಟಣದ ಅಪೋಲೋ ವೃತ್ತ(ಬಿಡಿಓ ಸರ್ಕಲ್) ಕಡೆಯಿಂದ ಗೋಳೂರು– ಬದನವಾಳು–ಕವಲಂದೆ–ಬದನಗುಪ್ಪೆ–ಚಾಮರಾಜನಗರ ಮಾರ್ಗವಾಗಿ ಗುಂಡ್ಲುಪೇಟೆ ತಲುಪುವುದು.

ಅ.1ರಂದು ಮಧ್ಯಾಹ್ನ 2 ಗಂಟೆ ಯಿಂದ ಅ.2ರಂದು ರಾತ್ರಿ 9 ಗಂಟೆವರೆಗೆ ಮೈಸೂರಿಂದ ಚಾಮರಾಜನಗರ ಮತ್ತು ಗುಂಡ್ಲುಪೇಟೆ ಕಡೆಗೆ ಸಂಚರಿಸುವ ವಾಹನಗಳು ಮೈಸೂರು ನಗರದ ರಿಂಗ್‌ರೋಡ್ ಜಂಕ್ಷನ್‌ನಿಂದ ವರುಣಾ, ಮೇಗಲಾಪುರ, ಟಿ.ನರಸೀಪುರ, ಮೂಗೂರು, ಸಂತೇಮರಳ್ಳಿ, ಚಾಮರಾಜನಗರ ಮಾರ್ಗವಾಗಿ ಗುಂಡ್ಲುಪೇಟೆಗೆ ಸಂಚರಿಸುವಂತೆ ಮೈಸೂರು ಎಸ್ಪಿ ಚೇತನ್ ಸೂಚಿಸಿದ್ದಾರೆ.

ಕುಣಿದು ಕುಪ್ಪಳಿಸಿದ ಯುವಪಡೆ!

ಇದಕ್ಕೂ ಮೊದಲು ನವದುರ್ಗೆಯರ ದರ್ಶನ, ವಿಘ್ನ ನಿವಾರಕನ ಆರಾಧನೆ, ಶಿವನ ಸ್ಮರಣೆಯ ಮೂಲಕ ಯುವ ದಸರಾದಲ್ಲಿ ನೆರೆದಿದ್ದ ಜನರನ್ನು ವಿವಿಧ ಕಲಾತಂಡಗಳು ತಮ್ಮ ನೃತ್ಯ ರೂಪಕದ ಮೂಲಕ ಮೋಡಿ ಮಾಡಿದವು. ನೃತ್ಯ ರೂಪಕದ ಮೂಲಕ ಕೊಳ್ಳೆಗಾಲದ ನಿಸರ್ಗ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ನವಶಕ್ತಿ ವೈಭವ ಪ್ರದರ್ಶಿಸಿದರು. ಪಾರ್ವತಿ ದೇವಿ ಕಾಳಿಯ ರೂಪತಾಳಿ ರಕ್ತಬೀಜಾಸುರನ ಸಂಹಾರ, ಚಾಮುಂಡೇಶ್ವರಿಯಿಂದ ಮಹಿಷನ ವಧೆ ಪ್ರಸಂಗವನ್ನು ನೃತ್ಯ ರೂಪಕದ ಮೂಲಕ ಪ್ರದರ್ಶಿಸಿ, ನವಶಕ್ತಿಯ ಅವತಾರವನ್ನು ಕಣ್ಣಿಗೆ ಕಟ್ಟಿಕೊಡುವ ಮೂಲಕ ಭಕ್ತಿ ಸುಧೆ ಹರಿಸಿದರು.

ರಾಷ್ಟ್ರಿಯ ಐಕ್ಯತೆ ಕುರಿತು ಪಂಜಾಬಿಗಳ ನೃತ್ಯ, ದಕ್ಷಿಣ ಕನ್ನಡದ ಯಕ್ಷಗಾನ, ಭರತನಾಟ್ಯ, ಲಂಬಾಣಿ ನೃತ್ಯ, ಕೇರಳದ ಮೋಹಿನಿಯಾಟ್ಟಂ ಸೇರಿದಂತೆ ವಿವಿಧ ರಾಜ್ಯಗಳ ಸಂಸ್ಕೃತಿ ಬಿಂಬಿಸುವ, ನಾವೆಲ್ಲರೂ ಒಂದೇ ಎಂಬ ಸಂದೇಶವನ್ನು ಮೈಸೂರಿನ ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ನೃತ್ಯ ಪ್ರಾಕಾರದ ಮೂಲಕ ಸಾರಿದರು. ನಂತರ ಮೈಸೂರು ನೃತ್ಯಗಾರ ಸಂಘದ ಕಲಾವಿದರು 1990ರಿಂದ ಇತ್ತೀಚಿನವರೆಗೂ ತೆರೆಕಂಡ ಕನ್ನಡ, ತಮಿಳು, ತೆಲುಗು, ಹಿಂದಿ ಚಿತ್ರಗೀತೆಗಳಿಗೆ ಹೆಜ್ಜೆ ಹಾಕಿ ಭಾರತ ಚಿತ್ರರಂಗದ ವಿಶೇಷತೆಯನ್ನು ಮೆರೆದರು. ಪಾಪ್ ಲೋಕದ ದೊರೆ ಮೈಕಲ್ ಜಾಕ್ಸನ್ ಗೀತೆ ಮತ್ತು ಮೂನ್ ವಾಕ್‌ಗೆ ಭಾರೀ ಕರತಾಡನ, ಶಿಳ್ಳೆಗಳು ಮೇಳೈಸಿದವು.

ಆಪ್ತಮಿತ್ರ ಖ್ಯಾತಿಯ ಶ್ರೀಧರ್ ಜೈನ್ ಮತ್ತು ತಂಡವು 'ಸತ್ಯ ಹರಿಶ್ಚಂದ್ರ' ಚಿತ್ರದ ಮತದಲ್ಲಿ ಕೀಳ್ಯಾವುದೋ ಹುಚ್ಚಪ್ಪ... ರಘು ದೀಕ್ಷಿತ್ ಅವರ ಲೋಕದ ಕಾಳಜಿ ಮಾಡುತಿನಂತಿ.... ಹಾಡಿಗೆ ಮನಮೋಹಕ ನೃತ್ಯ ನೆರೆದಿದ್ದ ಸಭಿಕರನ್ನು ತಲೆದೂಗುವಂತೆ ಮಾಡಿದರೆ, ಜೀ ಕನ್ನಡ ವಾಹಿನಿಯ 'ಡಾನ್ಸ್ ಕರ್ನಾಟಕ ಡಾನ್ಸ್' ಖ್ಯಾತಿಯ ನೃತ್ಯ ನಿರ್ದೇಶಕರಾದ ಪವನ್ ಮತ್ತು ರುದ್ರ ತಂಡವು ಪುನೀತ್ ನಟಿಸಿರುವ ರಾಜಕುಮಾರ್ ಚಿತ್ರದ ಟ್ವಿಂಕಲ್ ಲಿಟಲ್ ಸ್ಟಾರ್... ದರ್ಶನ್ ಅಭಿನಯದ ಯಜಮಾನ ಚಿತ್ರದ ಒಂದು ಮುಂಜಾನೆ... ಮತ್ತು ಸುದೀಪ್ ಚಿತ್ರದ ರಾ..ರಾ.. ರಕ್ಕಮ್ಮ... ಹಾಡಿಗೆ ಹೆಜ್ಜೆ ಹಾಕಿದರು. ನೆಚ್ಚಿನ ನಟನ ಗೀತೆಗಳ ಕೇಳಿದ ತಕ್ಷಣ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಮಂಗಳೂರಿನ ವಿಯಾನ್ಸ್ ತಂಡವು ಕರಾವಳಿ ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ನೃತ್ಯ ಪ್ರಾಕಾರದ ಮೂಲಕ ಪ್ರಸ್ತುತಪಡಿಸಿದರು. ಹುಲಿ ಕುಣಿತ ಮತ್ತು ಸಾಹಸ ನೃತ್ಯವು ಹುಬ್ಬೇರಿಸುವಂತೆ ಮಾಡಿತು.

ಮಾವುತರು, ಕಾವಾಡಿಗಳ ಮಕ್ಕಳ ತಾತ್ಕಾಲಿಕ ಶಾಲೆಗೆ ಪ್ರಾಥಮಿಕ ಶಿಕ್ಷಣ ಸಚಿವ ನಾಗೇಶ್ ಭೇಟಿ

ಮಕ್ಕಳ ಪ್ರತಿಭೆಗೆ ಮಾರುಹೋದ ಸಚಿವರು



ಮೈಸೂರು, ಸೆ.29(ಎಂಟಿವೈ)– ದಸರಾ ಗಜಪಡೆಯ ಮಾವುತರು, ಕಾವಾಡಿಗಳ ಮಕ್ಕಳಿಗಾಗಿ ಅರಮನೆ ಆವರಣದಲ್ಲಿ ತೆರೆದಿರುವ ತಾತ್ಕಾಲಿಕ ಶಾಲೆಗೆ ಗುರುವಾರ ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಭೇಟಿ ನೀಡಿ, ಹಾಡಿ ಮಕ್ಕಳ ಕುಶಲೋಪರಿ ನಡೆಸಿದರು.

ಮಕ್ಕಳ ದಸರಾದಲ್ಲಿ ಪಾಲ್ಗೊಳ್ಳುವ ಸಲುವಾಗಿ ಮೈಸೂರಿಗೆ ಆಗಮಿಸಿದ್ದ ಅವರು, ತಾತ್ಕಾಲಿಕ ಶಾಲೆಗೆ ಭೇಟಿ ನೀಡಿ, ಶಿಕ್ಷಕರಿಂದ ಮಾಹಿತಿ ಪಡೆದರು. ಈ ವೇಳೆ ಮಾವುತರು, ಕಾವಾಡಿಗಳ ಮಕ್ಕಳು ಶಿಕ್ಷಣ ಸಚಿವರ ಮುಂದೆ ಬುಡಕಟ್ಟು ಸಾಂಪ್ರದಾಯಿಕ ಗೀತೆಗೆ ನೃತ್ಯ ಪ್ರದರ್ಶಿಸಿ, ಪ್ರತಿಭೆ ಮೆರೆದರು.

ಇದೇ ವೇಳೆ ಸಚಿವ ಬಿ.ಸಿ.ನಾಗೇಶ್ ಮಾತನಾಡಿ, ದಸರಾ ಗಜಪಡೆಯ ಮಾವುತ, ಕಾವಾಡಿಗಳ ಮಕ್ಕಳು ಬುದ್ಧಿವಂತರಿದ್ದಾರೆ. ಅವರಲ್ಲಿ ಕಲಿಕೆಯ ಆಸಕ್ತಿ ಹೆಚ್ಚಾಗಿದೆ. ದೇವರು ಅವರಿಗೆ ವಿಶೇಷವಾದ ಶಕ್ತಿ ಕೊಟ್ಟಿದ್ದಾನೆ. ಹೊಸಬರು ಬಂದರೂ ಸಂಕೋಚವಿಲ್ಲದೆ ಬೆರೆತು ಮಾತನಾಡುವ ಕಲೆ ಹಾಡಿ ಮಕ್ಕಳಲ್ಲಿದೆ. ತಾತ್ಕಾಲಿಕ ಶಾಲೆಗೆ ಬಂದ ಕಡಿಮೆ ಅವಧಿಯಲ್ಲೇ ಉತ್ತಮವಾಗಿ ಕಲಿತಿದ್ದಾರೆ. ಶಾಲೆಯ ಶಿಕ್ಷಕರು ಕೂಡ ಕಡಿಮೆ ಅವಧಿಯಲ್ಲೇ ಮಕ್ಕಳ ಪ್ರೀತಿ ಸಂಪಾದಿಸಿದ್ದಾರೆ, ಉತ್ತಮವಾಗಿ ಕಲಿಸಿದ್ದಾರೆ. 1 ರಿಂದ 9ನೇ ತರಗತಿಯ ಮಕ್ಕಳಿಗೆ ಕಲಿಸಲಾಗುತ್ತಿದೆ. ಇದನ್ನೆಲ್ಲಾ ನೋಡಿದರೆ ಈ ಹಿಂದೆ ಸರ್ವಶಿಕ್ಷಣ ಅಭಿಯಾನದ ಕನಸು ಕಂಡಿದ್ದವರ ಆತ್ಮಕ್ಕೆ ಸಂತೋಷ ಸಿಕ್ಕಿದೆ ಎಂಬುದು ನನ್ನ ಭಾವನೆ. ಈ ಮಕ್ಕಳಿಗೆ ವಿಶೇಷ ಆಸಕ್ತಿ ವಹಿಸಿ ಕಲಿಸಿದರೆ, ಸಮಾಜದ ಎಲ್ಲಾ ಸ್ತರಗಳಲ್ಲೂ ಸಾಧನೆ ಮಾಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ 2022ರ ಶೈಕ್ಷಣಿಕ ಚಟುವಟಿಕೆಯ ಚಿತ್ರಣ ಬಿಡುಗಡೆಯಾಗಿದೆ. ಇದೇ ವೇಳೆ ರಾಜ್ಯ ಶೈಕ್ಷಣಿಕ ಚಿತ್ರಣ ತಯಾರಾಗುತ್ತಿದೆ. ಪ್ರಾದೇಶಿಕ ಭಾಷೆಗೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ. ಮಹಾರಾಜನಿಗೂ ಒಂದೇ ಶಿಕ್ಷಣ, ಅರಮನೆಯಲ್ಲಿ ಕೆಲಸ ಮಾಡುವವರಿಗೂ ಒಂದೇ ಶಿಕ್ಷಣ ಸಿಗಬೇಕು ಎಂಬುದೇ ನೂತನ ಶಿಕ್ಷಣ ನೀತಿಯ ಗುರಿ ಎಂದರು.

ಪಾತ್ರೆ–ಪಡಗ ಕೊಡುಗೆ: ದಸರಾ ಗಜಪಡೆಯ ಮಾವುತರು ಹಾಗೂ ಕಾವಾಡಿಗಳ ಕುಟುಂಬಗಳಿಗೆ ರೋಟರಿ ಸೆಂಟ್ರಲ್ ಮೈಸೂರು ಹಾಗೂ ರೋಟರಿ ಮಿಡ್‌ಟೌನ್ ಸಂಸ್ಥೆ ವತಿಯಿಂದ ಪಾತ್ರೆ–ಪಡಗಗಳನ್ನು ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಿತರಿಸಿದರು. ಅಡುಗೆ ಮಾಡಲು ಅಗತ್ಯವಿರುವ ಒಂದು ಸೆಟ್ ಪಾತ್ರೆಯನ್ನು ಕೋಡಿ ಸೋಮೇಶ್ವರ ದೇವಾಲಯದ ಬಳಿ ವಿತರಿಸಲಾಯಿತು. ಇದೇ ವೇಳೆ ರೋಟರಿ ಸೆಂಟ್ರಲ್ ಮೈಸೂರು ಹಾಗೂ ರೋಟರಿ ಮಿಡ್‌ಟೌನ್ ಸಂಸ್ಥೆಗಳ ಕಾರ್ಯವೈಖರಿ ಬಗ್ಗೆ ಸಚಿವರು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಡಾ.ವಿ.ಕರಿಕಾಳನ್, ಕೆ.ಕಮಲಾ ಕರಿಕಾಳನ್, ರೋಟರಿ ಸೆಂಟ್ರಲ್ ಮೈಸೂರು ಅಧ್ಯಕ್ಷ ಪ್ರತಾಪ್ ಶೆಟ್ಟಿ, ಕಾರ್ಯದರ್ಶಿ ಸಚ್ಚಿದಾನಂದ ಹೆಗಡೆ, ರೋಟರಿ ಮಿಡ್‌ಟೌನ್ ನವೀನ್ ಚಂದ್ರ, ಕಾರ್ಯರ್ಶಿ ಕುಮಾರಸ್ವಾಮಿ, ಸದಸ್ಯರಾದ ಕಿರಣ್ ಲೋಕಂಡೆ, ಪ್ರೇಮ್, ಉಮೇಶ್, ಸೌಜನ್ಯ ಅತ್ತಾವರ್ ಹಾಗೂ ಇನ್ನಿತರರು ಇದ್ದರು.

ರೈತರಿಂದ ಖರೀದಿಸುವ ಪ್ರತೀ ಲೀಟರ್ ಹಾಲಿಗೆ 1 ರೂ. ಹೆಚ್ಚಳ

ಮೈಮುಲ್ ಸಭೆಯಲ್ಲಿ ನಿರ್ಧಾರ



ಮೈಸೂರು, ಸೆ.29–ರೈತರಿಂದ ಖರೀದಿಸುವ ಹಾಲಿನ ದರವನ್ನು ಅಕ್ಟೋಬರ್ 1 ರಿಂದ ಲೀಟರ್‌ಗೆ 1 ರೂ. ಹೆಚ್ಚಿಸಲು ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ (ಮೈಮುಲ್) ನಿರ್ಧರಿಸಿದೆ.

ಮೈಮುಲ್ ಅಧ್ಯಕ್ಷರು ಮತ್ತು ನಿರ್ದೇಶಕರು ಇಂದು (ಸೆ.29) ನಡೆಸಿದ ಆಡಳಿತ ಮಂಡಲಿ ಸಭೆಯಲ್ಲಿ ದಸರಾ ಹಬ್ಬದ ಕೊಡುಗೆಯಾಗಿ ಅ.1 ರಿಂದ ಜಾರಿಗೆ ಬರುವಂತೆ ರೈತರಿಂದ ಖರೀದಿಸುವ ಹಾಲಿನ ದರವನ್ನು ಪ್ರತೀ ಲೀಟರ್‌ಗೆ 1 ರೂ. ಹೆಚ್ಚಿಸಲು ತೀರ್ಮಾನಿಸಲಾಗಿದೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹಾಲಿ ರೈತರಿಗೆ ಪ್ರತೀ ಲೀಟರ್ 29 ರೂ. ಪಾವತಿಸಲಾಗುತ್ತಿದ್ದು, ಇನ್ನು ಮುಂದೆ 30 ರೂ. ನೀಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮುಕ್ತ ವಿವಿ ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್ ಈಗ ಬೆಳಗಾವಿ ವಿಟಿಯು ಕುಲಪತಿ

ಮೈಸೂರು, ಸೆ.29(ಆರ್‌ಕೆ)–ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (VTU)ದ ಕುಲಪತಿಗಳಾಗಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ ಎಸ್.ವಿದ್ಯಾಶಂಕರ್ ನೇಮಕಗೊಂಡಿದ್ದಾರೆ.



ವಿಟಿಯು ಕುಲಪತಿಯಾಗಿರುವ ಪ್ರೊ. ಕರಿಸಿದ್ದಪ್ಪ ಅವರ ಅಧಿಕಾರಾವಧಿ ನಾಳೆ (ಸೆ.30)ಗೆ ಮುಕ್ತಾಯವಾಗಲಿರುವುದರಿಂದ ಮುಕ್ತ ವಿವಿ ಕುಲಪತಿ ಪ್ರೊ ವಿದ್ಯಾಶಂಕರ್ ಅವರನ್ನು ವಿಟಿಯು ಕುಲಪತಿಯನ್ನಾಗಿ ಮೂರು ವರ್ಷಗಳ ಅವಧಿಗೆ ನೇಮಿಸಿ ಕುಲಾಧಿಪತಿಗಳಾದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಇಂದು ಆದೇಶ ಹೊರಡಿಸಿದ್ದಾರೆ.

ನಾಳೆ(ಸೆ.30) ಬೆಳಗಾವಿಯಲ್ಲಿ ವಿಟಿಯು ಕುಲಪತಿಯಾಗಿ ಪ್ರೊ ವಿದ್ಯಾಶಂಕರ್ ಅಧಿಕಾರ ವಹಿಸಿಕೊಳ್ಳುವರು. 3 ವರ್ಷ, 4 ತಿಂಗಳು ಮೈಸೂರಿನ ಮುಕ್ತ ವಿವಿ ಕುಲಪತಿಗಳಾಗಿದ್ದ ಅವರು, ದೂರ ಶಿಕ್ಷಣಕ್ಕೆ ಮುಕ್ತ ವಿವಿಯಲ್ಲಿ ಮಾತ್ರಪ್ರವೇಶ, 12 ಬಿ ಮಾನ್ಯತೆ, 11 ಹೊಸ ಕೋರ್ಸ್‌ಗಳ ಪರಿಚಯ, ಪ್ರಯೋಗಾಲಯಗಳ ಪುನರುಜ್ಜೀವನ, ಬೋಧಕ–ಬೋಧಕೇತರ ಸಿಬ್ಬಂದಿ ಸಮಸ್ಯೆ ಸೇರಿದಂತೆ ಹಲವು ಸುಧಾರಣೆ ತಂದಿದ್ದರು.

ವಿವಿಧ ವೇದಿಕೆಗಳಲ್ಲಿ ಕಲಾಸಕ್ತರಿಗೆ ಸಂಗೀತ ರಸದೌತಣ

ಮೈಸೂರು,ಸೆ.29(ಎಸ್‌ಪಿಎನ್)–ವಿದುಷಿ ಚೈತ್ರ ಸಾಯಿರಾಂ ಸಂಗೀತ ಗಾಯನಕ್ಕೆ ಹಾಗೂ ಹುಬ್ಬಳ್ಳಿಯ ನೃತ್ಯೋದಯ ಕಲಾ ಅಕಾಡೆಮಿ ಕಲಾವಿದರು ಪ್ರಸ್ತುತಪಡಿಸಿದ ನೃತ್ಯ ರೂಪಕ ಪ್ರೇಕ್ಷಕರ ಗಮನ ಸೆಳೆದವಲ್ಲದೆ, ನಗರದ ವಿವಿಧ ವೇದಿಕೆಗಳಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ದಸರೆಗೆ ಮತ್ತಷ್ಟು ಮೆರುಗು ತಂದುಕೊಟ್ಟವು.

ಮೈಸೂರು ಕಲಾಮಂದಿರದಲ್ಲಿ ಏರ್ಪಡಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ 'ಗೋವಿಂದ ನಿನ್ನ ಸ್ಮರಣೆವೊಂದೇ', 'ಹಿಮಾದ್ರಿ ಸುತೆ ಪಾಹಿಮಾಮ್', 'ಜಗದೋದ್ಧಾರನ' ಗಾಯನ ಸೇರಿದಂತೆ ಇತರೆ ಗೀತೆಗಳನ್ನು ಪ್ರಸ್ತುತಪಡಿಸಿದ ವಿದುಷಿ ಚೈತ್ರ ಸಾಯಿರಾಂ ಗಾಯನ ಪ್ರೇಕ್ಷಕರ ಮನ ಸೆಳೆದವು. ಇವರಿಗೆ ವಿದ್ವಾನ್ ಸಾಯಿರಾಂ ಮೃದಂಗ ಸಾಥ್ ನೀಡಿದರು.

ನಂತರ ನೃತ್ಯೋದಯ ಕಲಾವಿದರು ಬ್ರಹ್ಮ, ವಿಷ್ಣು, ಮಹೇಶ್ವರ ತ್ರಿಮೂರ್ತಿ ಅಂಜಲಿ, ರಾಮಾಯಣದ ರಾಮನ ಜನನ ಹಾಗೂ ಸೀತೆ ಕಲ್ಯಾಣ ಸಂದರ್ಭವನ್ನು ವಿವರಿಸುವ ಶ್ರೀ ರಾಮವರ್ಣಂ ನೃತ್ಯ, 'ಓಂಕಾರ ಶಿವನೇ ನೃತ್ಯ' ನೋಡುಗರ ಗಮನ ಸೆಳೆದವು. ಸಪ್ತಸ್ವರಗಳು ಶಿವನಲ್ಲಿ ಲೀನವಾಗುವ 'ಶಿವನ ನೃತ್ಯ' ಅಮೋಘವಾಗಿ ಮೂಡಿಬಂದಿತು. ಈ ನೃತ್ಯರೂಪಕದಲ್ಲಿ ವಿದ್ಯಾರ್ಥಿಗಳಾದ ನೀಶಾಂತ, ಸುನಂದಾ, ಅದಿತಿ, ಮಾನಸಿ, ಚಂದನಾ, ಸುಕನ್ಯಾ, ಸುದಿಕ್ಷಾ, ರೋಹಿತ್ ಭಾಗವಹಿಸಿದ್ದರು. ಈ ವೇದಿಕೆಯಲ್ಲಿ ಮೈಸೂರಿನ ವಿದ್ವಾನ್ ಹೆಚ್.ಎಸ್.ಲಕ್ಷ್ಮಣ್ ಅವರಿಂದ ನಾದಸ್ವರ, ಬೆಂಗಳೂರಿನ ಸಂಗೀತ ಸಂಭ್ರಮ(ಪುಸ್ತಕ ರಮಾ) ಪ್ರಸ್ತುತಪಡಿಸಿದರು. ಕಾರ್ಯಕ್ರಮವನ್ನು ಸೌಭಾಗ್ಯ ಪ್ರಭು ನಿರೂಪಿಸಿದರು.

ಕಿರುರಂಗಮಂದಿರ(ಕಲಾಮಂದಿರ ಆವರಣ): ಜ್ಞಾನವೀಣೆ ಟ್ರಸ್ಟ್‌ನ ಜಾನಪದ ಕಲಾವಿದ ದೇವರಾಜು ತಂಡ ಜಾನಪದ ಗಾಯನ ನಡೆಸಿಕೊಟ್ಟರು. ಮೈಸೂರಿನ ಶಶಿ ಕ್ರಿಯೇಷನ್ ತಂಡದಿಂದ ಉರಿಯ ಉಯ್ಯಾಲೆ ನಾಟಕ, ಬೆಂಗಳೂರಿನ ರಂಗಸೌರಭ ಕಲಾವಿದರು ಪ್ರದರ್ಶಿಸಿದ 'ಕೂಡಲಸಂಗಮ' ನಾಟಕ ನೋಡುಗರ ಗಮನ ಸೆಳೆಯಿತು.

ರಂಗಾಯಣ: ಮಂಗಳೂರಿನ ರಂಗ ಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನದ ಕಲಾವಿದರು ಅಭಿನಯದ ಶಶಿರಾಜ್ ಕಾವೂರ್ ನಿರ್ದೇಶನದ 'ದಟ್ಸ್ ಆಲ್ ಯುವರ್ ಆನರ್' ನಾಟಕ ಪ್ರದರ್ಶನ ಕಂಡಿತು. ಇಲ್ಲಿಗೆ ಆಗಮಿಸಿದ ಪ್ರೇಕ್ಷಕರು 'ನಾಲ್ವಡಿ ಕೃಷ್ಣರಾಜ ಒಡೆಯರ್' ನೆನಪಿನಾರ್ಥ ಏರ್ಪಡಿಸಿರುವ ಅಪರೂಪದ ಭಾವಚಿತ್ರ, ವಿವಿಧ ಸಂದರ್ಭದಲ್ಲಿ ಗಣ್ಯರಿಗೆ ನೀಡಿದ ಆಹ್ವಾನ ಪತ್ರಗಳು, ಲಗ್ನಪತ್ರಿಕೆ ಪ್ರದರ್ಶನವನ್ನು ವೀಕ್ಷಿಸಿದರು.


ಗಾನಭಾರತಿ: ಬೆಂಗಳೂರಿನ ಆಶಿಕಾ ಭರತನಾಟ್ಯ ಪ್ರದರ್ಶಿಸಿದರೆ, ಡಿ.ಬಾಲಕೃಷ್ಣ ವೀಣಾವಾದನ ನಡೆಸಿಕೊಟ್ಟರು. ಕಲಬುರಗಿಯ ಮೃತ್ಯುಂಜಯ ಹಿರೇಮಠ್ ಅವರಿಂದ ಹಿಂದಿನ ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸಿದರೆ, ಬೆಂಗಳೂರಿನ ನಾಟ್ಯಕಲಾ ಮೈತ್ರಿ ಸ್ಕೂಲ್ ಆಫ್ ಡ್ಯಾನ್ಸ್ ವಿದುಷಿ ಟಿ.ಕೆ.ಮೈತ್ರಿ ಮತ್ತು ತಂಡದಿಂದ ಭರತನಾಟ್ಯ ನಡೆಸಿಕೊಟ್ಟರು. ಮೈಸೂರಿನ ನಾದಬ್ರಹ್ಮ ಸಂಗೀತ ಸಭಾ, ಜಗನ್ಮೋಹನಾ ಅರಮನೆ, ಚಿಕ್ಕಗಡಿಯಾರ ವೇದಿಕೆ, ಪುರಭವನದಲ್ಲಿ ಇತರೆ ಜಾನಪದ, ಸುಗಮ ಸಂಗೀತ, ಐತಿಹಾಸಿಕ, ಸಾಮಾಜಿಕ ನಾಟಕಗಳು ಪ್ರದರ್ಶನಗೊಂಡವು.



ಮೈಸೂರು ತಾಲೂಕು ಇಲವಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಶಾಸಕ ಜಿ.ಟಿ.ದೇವೇಗೌಡರು ಸನ್ಮಾನಿಸಿದರು. ಈ ವೇಳೆ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಉಪಾಧ್ಯಕ್ಷ ರಫೀಕ್, ನಿರ್ದೇಶಕರಾದ ನಟೇಶ್, ಮಹದೇವಸ್ವಾಮಿ, ಸುಧಾಕರ್, ರಮೇಶ್, ಶಿವೇಗೌಡ, ವೆಂಕಟಾಚಲ, ಚಿದಂಬರ, ಮಂಜುಳಾ, ಶ್ರೀಮತಿ ಸಾವಿತ್ರಮ್ಮ, ಡಿ.ಕುಮಾರ, ಸಿಇಓ ಪ್ರಕಾಶ್ ಉಪಸ್ಥಿತರಿದ್ದರು.

ಏಕಲವ್ಯನಗರ ನಿವಾಸಿಗಳಿಂದ ಜಗನ್ಮೋಹನ ಅರಮನೆ ಎದುರು ದಿಢೀರ್ ಪ್ರತಿಭಟನೆ

ಮೈಸೂರು, ಸೆ.29(ಪಿಎಂ)–ಏಕಲವ್ಯ ನಗರದಲ್ಲಿ ತಾವು ವಾಸಿಸುತ್ತಿರುವ ನಿವೇಶನಗಳಿಗೆ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಇಲ್ಲಿನ ಅಲೆಮಾರಿ ಸಮುದಾಯದವರು ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆಸುತ್ತಿರುವ ಅನಿರ್ದಿಷ್ಟಾವಧಿ, ಅಹೋರಾತ್ರಿ ಪ್ರತಿಭಟನೆ 15ನೇ ದಿನವಾದ ಗುರುವಾರವೂ ಮುಂದುವರೆಯಿತಲ್ಲದೆ, ಮಕ್ಕಳ ದಸರಾ ನಡೆಯುತ್ತಿರುವ ಜಗನ್ಮೋಹನ ಅರಮನೆ ಎದುರು ದಿಢೀರ್ ಪ್ರತಿಭಟನೆ ನಡೆಸಿ ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಜಿಲ್ಲಾಧಿಕಾರಿ ಕಚೇರಿಯಿಂದ ಪ್ರತಿಭಟನಾ ಮೆರವಣಿಗೆ ಮೂಲಕ ಜಗನ್ಮೋಹನ ಅರಮನೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ಸಮಸ್ಯೆ ಆಲಿಸುತ್ತಿಲ್ಲ. ಇಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಅವರಿಗೆ ಘೇರಾವ್ ಹಾಕುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರನ್ನು ಸಮಾಧಾನಪಡಿಸಿದ ಪೊಲೀಸರು, ಈಗಾಗಲೇ ಉಸ್ತುವಾರಿ ಸಚಿವರು ಇಲ್ಲಿಂದ ನಿರ್ಗಮಿಸಿದ್ದಾರೆ. ಹಾಗಾಗಿ ಇಲ್ಲಿ ಪ್ರತಿಭಟನೆ ಮಾಡಿ ಪ್ರಯೋಜನವಿಲ್ಲ. ಮಕ್ಕಳ ಕಾರ್ಯಕ್ರಮ ನಡೆಯುತ್ತಿರುವ ಹಿನ್ನೆಲೆಯಲ್ಲಿ ನಿರ್ಗಮಿಸುವಂತೆ ಪ್ರತಿಭಟನಾಕಾರರಲ್ಲಿ ಮನವಿ ಮಾಡಿದರು. ಜಗನ್ಮೋಹನ ಅರಮನೆಯೊಳಗೆ ಶಿಕ್ಷಣ ಸಚಿವರು ಇದ್ದಾರೆ. ಅವರಿಗಾದರೂ ನಮ್ಮ ಸಮಸ್ಯೆ ಹೇಳಿಕೊಳ್ಳುತ್ತೇವೆ ಎಂದು ಪಟ್ಟುಹಿಡಿದ ಪ್ರತಿಭಟನಾಕಾರರು, ಪ್ರತಿಭಟನೆ ಮುಂದುವರೆಸಿ ದರು. ಸ್ಥಳಕ್ಕೆ ಬಂದ ಸಚಿವ ನಾಗೇಶ್, ಪ್ರತಿಭಟನಾಕಾರರ ಮನವಿ ಸ್ವೀಕರಿಸಿ, ಪರಿಶೀಲಿಸಿ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ ಎಂದು ಭರವಸೆ ನೀಡಿ, ನಿರ್ಗಮಿಸಿದರು. ಬಳಿಕ ಪ್ರತಿಭಟನಾಕಾರರು, ಡಿಸಿ ಕಚೇರಿ ಆವರಣಕ್ಕೆ ಬಂದು ಪ್ರತಿಭಟನೆ ಮುಂದುವರೆಸಿದ್ದಾರೆ. ಪ್ರತಿಭಟನೆ ನೇತೃತ್ವ ವಹಿಸಿರುವ ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಟ–ಹೋರಾಟಗಾರ ಚೇತನ್ ಅವರು ನಾಳೆ (ಸೆ.30) ಡಿಸಿ ಕಚೇರಿ ಎದುರಿನ ನಮ್ಮ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ನಮ್ಮ ಹೋರಾಟ ಬೆಂಬಲಿಸಲಿದ್ದಾರೆ ಎಂದರು.

ವಿಚ್ಛೇದನ ಬಯಸಿದ ಪತ್ನಿಗೆ ಮಾಟ: ಪತಿ ವಿರುದ್ಧ ಪ್ರಕರಣ

ಮೈಸೂರು,ಸೆ.29–ವಿಚ್ಛೇದನಕ್ಕಾಗಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವ ಪತ್ನಿಗೆ ಮಾಟ ಮಾಡಿಸಿದ ಆರೋಪದ ಮೇರೆಗೆ ಪತಿ, ಮಂತ್ರವಾದಿ ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ. ಕೋಲ್ಕತ್ತಾದ ಎನ್.ಎಸ್.ಶ್ರೀನಿವಾಸಲು, ಹೈದರಾಬಾದ್‌ನ ಮಂತ್ರವಾದಿ ರಾಜು, ವಿನಾಯಕನಗರದ ಶಿವರಾಮಕೃಷ್ಣ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಮೈಸೂರಿನ ಸಿದ್ಧಾರ್ಥನಗರ ವಿನಯ ಮಾರ್ಗದಲ್ಲಿ ವಾಸವಿರುವ ಪ್ರಾಧ್ಯಾಪಕಿ ಡಾ.ಸೌಮ್ಯ ಅವರು 2008ರಲ್ಲಿ ಶ್ರೀನಿವಾಸಲು ಅವರನ್ನು ವಿವಾಹವಾಗಿದ್ದು, ವೈವಾಹಿಕ ಸಂಬಂಧ ಹದಗೆಟ್ಟಿದ್ದರಿಂದ ಅವರು ವಿಚ್ಛೇದನಕ್ಕಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಪ್ರಕರಣ ವಿಚಾರಣಾ ಹಂತದಲ್ಲಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಡಾ.ಸೌಮ್ಯ ತಿಳಿಸಿದ್ದಾರೆ. ತನ್ನ ಹಾಗೂ ತನ್ನ ಮಗಳಿಗೆ ಮಾನಸಿಕ ಕಿರುಕುಳ ನೀಡುವ ಉದ್ದೇಶದಿಂದ ಪತಿ ಶ್ರೀನಿವಾಸಲು ಆ.29ರಂದು ತಮ್ಮ ಬೈಕ್‌ನ ಡ್ಯಾಶ್‌ಬೋರ್ಡ್ ಮತ್ತು ಮನೆಯ ಮೆಟ್ಟಿಲು ಭಾಗದಲ್ಲಿ ಮಾಟ ಮಾಡಿದ ವಸ್ತುಗಳನ್ನು ಇಟ್ಟಿದ್ದರು. ಮತ್ತೆ ಸೆ.17ರಂದು ಪತಿಯ ಬಾಲ್ಯ ಸ್ನೇಹಿತನಾದ ಮಂತ್ರವಾದಿ ರಾಜು ಮೂಲಕ ನಿಂಬೆಹಣ್ಣು, ಅಕ್ಕಿ, ಮಸಣದ ಮಣ್ಣು ಹಾಗೂ ಕರಿ ಎಳ್ಳನ್ನು ತಮ್ಮ ಮನೆಯ ಬಾಲ್ಕನಿಗೆ ತಂದು ಹಾಕಿದ್ದಾರೆ. ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಇವರುಗಳೇ ಈ ಕೃತ್ಯ ಎಸಗಿರುವುದು ಕಂಡು ಬಂದಿದೆ. ಪತಿ ಮತ್ತು ಮಂತ್ರವಾದಿಗೆ ಮೈಸೂರು ವಿನಾಯಕನಗರದ ಶಿವರಾಮಕೃಷ್ಣ ಸಹಕರಿಸಿದ್ದಾರೆ ಎಂದು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬಹುಮಾನದ ಆಸೆ ತೋರಿಸಿ ಅಡುಗೆ ಭಟ್ಟರಿಗೆ 2.51 ಲಕ್ಷ ವಂಚನೆ

ಮುಂದುವರೆದ ಆನ್‌ಲೈನ್ ದೋಖಾ

ಮಂಡ್ಯ, ಸೆ.29– ಬಹುಮಾನ ಬಂದಿದೆ ಎಂದು ನಂಬಿಸಿ ಅಡುಗೆ ಭಟ್ಟರಿಂದ 2.51 ಲಕ್ಷ ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ. ಮದ್ದೂರು ತಾಲೂಕು ಬೈದರಹಳ್ಳಿ ಗ್ರಾಮದ ಅಡುಗೆ ಭಟ್ಟ ದೇಶಿ ಲಿಂಗಯ್ಯ (42) ವಂಚನೆಗೊಳಗಾದವರಾಗಿದ್ದು, ಸೆ.15ರಂದು ಇವರ ವಿಳಾಸಕ್ಕೆ ಸ್ಪೀಡ್ ಪೋಸ್ಟ್ ಬಂದಿದ್ದು, ಅದರಲ್ಲಿ ನ್ಯಾಪ್ಟಾಲ್ ಆನ್‌ಲೈನ್ ಶಾಪಿಂಗ್ ಪ್ರೈವೇಟ್ ಲಿಮಿಟೆಡ್‌ನ ಕೂಪನ್ ಕಾರ್ಡ್ ಇತ್ತು. ಅದನ್ನು ಸ್ಕ್ರಾಚ್ ಮಾಡಿದಾಗ 13.50 ಲಕ್ಷ ರೂ. ಎಂಬುದು ಕಂಡು ಬಂತು. ಕೂಪನ್‌ನಲ್ಲಿದ್ದ ಮೊಬೈಲ್‌ಗೆ ಕರೆ ಮಾಡಿ ದಾಗ ಮಾತನಾಡಿದ ವಂಚಕ, ದೇಶಿ ಲಿಂಗಯ್ಯ ಅವರ ಆಧಾರ್, ಪಾನ್ ಕಾರ್ಡ್ ಹಾಗೂ ಬ್ಯಾಂಕ್ ಪಾಸ್‌ಬುಕ್‌ನ ಫೋಟೋಗಳನ್ನು ವಾಟ್ಸಾಪ್ ಮೂಲಕ ತರಿಸಿಕೊಂಡಿದ್ದಾನೆ. ಬಹುಮಾನದ ಹಣ ಪಡೆಯಬೇಕಾದರೆ 13,500 ರೂ. ಕಟ್ಟಬೇಕೆಂದು ಮೊದಲಿಗೆ ಹೇಳಿದ ಆತ, ನಂತರ ಕರ್ನಾಟಕ ಸ್ಟೇಟ್ ಟ್ಯಾಕ್ಸ್, ಆರ್‌ಬಿಐನಿಂದ ಎನ್‌ಓಸಿ ಪಡೆಯುವ ಶುಲ್ಕ ಹೀಗೆ ಕೆಲವು ಶುಲ್ಕಗಳನ್ನು ತಿಳಿಸಿ 2,51,600 ರೂ. ಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ನಂತರ ಮತ್ತೆ ಕರೆ ಮಾಡಿದ ಆತ, ನಿಮ್ಮ ಬಹು ಮಾನದ ಹಣ ಡಬ್ಬಲ್ ಆಗಿದೆ. ಹೀಗಾಗಿದೆ. ಮತ್ತೆ ಹಣ ಪಾವತಿಸಬೇಕು ಎಂದು ಹೇಳಿದಾಗ ಅನುಮಾನ ಗೊಂಡ ದೇಶಿಲಿಂಗಯ್ಯ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಮಂಡ್ಯ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಪಾಲಿಕೆಯ 157.3 ಲಕ್ಷ ದುರುಪಯೋಗ ಆರೋಪ

ಮಾಜಿ ಮೇಯರ್ ಪುರುಷೋತ್ತಮ್, ಮಾಜಿ ಕಾರ್ಪೋರೇಟರ್ ಪ್ರಭುಮೂರ್ತಿ ವಿರುದ್ಧ ಪ್ರಕರಣ

ಮೈಸೂರು, ಸೆ.29–ಮಾಜಿ ಮೇಯರ್ ಪುರುಷೋತ್ತಮ್ ಮತ್ತು ಮಾಜಿ ಕಾರ್ಪೋರೇಟರ್ ಪ್ರಭುಮೂರ್ತಿಯವರು ಸೇರಿ ನಗರಪಾಲಿಕೆಯ 157.3 ಲಕ್ಷ ರೂ. ದುರುಪಯೋಗಪಡಿಸಿಕೊಂಡಿರುವ ಸಂಬಂಧ ಕ್ರಿಮಿನಲ್ ಕೇಸ್ ದಾಖಲಾಗಿದೆ.

2001ರಿಂದ 2018ರ ಅವಧಿಯಲ್ಲಿ 27 ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಮಂಜೂರು ಮಾಡಲಾದ ಒಟ್ಟು 157.3 ಲಕ್ಷ ರೂ.ಗಳನ್ನು ಇವರಿಬ್ಬರೂ ದುರುಪಯೋಗಪಡಿಸಿಕೊಂಡಿದ್ದಾರೆಂದು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಆದೇಶದ ಮೇರೆಗೆ ಪಾಲಿಕೆ ವಲಯ ಕಚೇರಿ–2ರ ಅಭಿವೃದ್ಧಿ ಅಧಿಕಾರಿ ಎಂ.ಸೋಮಶೇಖರ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಅಶೋಕಪುರಂ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 406 ಮತ್ತು 420ರಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಿದ್ದಾರೆ.

ಇಎಸ್‌ಐ ಆಸ್ಪತ್ರೆಯಲ್ಲಿ ಯುಪಿಎಸ್ ಬ್ಯಾಟರಿ ಕಳವು

ನಂಜನಗೂಡು, ಸೆ.29–ಇಲ್ಲಿನ ಸುಜಾತಪುರಂನಲ್ಲಿರುವ ಇಎಸ್‌ಐ ಆಸ್ಪತ್ರೆಯ ಯುಪಿಎಸ್ ಬ್ಯಾಟರಿಗಳನ್ನು ಕಳವು ಮಾಡಲಾಗಿದೆ. ಆಸ್ಪತ್ರೆಗೆ ಸಂಬಂಧಿಸಿದ ಕೆಲವು ಪೀಠೋಪಕರಣಗಳು ಮತ್ತು ಯುಪಿಎಸ್ ಬ್ಯಾಟರಿಗಳನ್ನು ಆಸ್ಪತ್ರೆ ಪಕ್ಕದಲ್ಲಿರುವ ವಸತಿ ಗೃಹದಲ್ಲಿ ಇಡಲಾಗಿತ್ತು. ಸೆ.27ರಂದು ಬೆಳಗ್ಗೆ ನೋಡಿದಾಗ ವಸತಿ ಗೃಹದ ಬೀಗ ಒಡೆದಿರುವುದು ಕಂಡು ಬಂದಿದ್ದು, 3 ಯುಪಿಎಸ್ ಬ್ಯಾಟರಿಗಳನ್ನು ಕಳವು ಮಾಡಿದ್ದಾರೆ ಎಂದು ಇಎಸ್‌ಐ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಕೆ.ಜೆ.ದೀಪಕ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಂಜನಗೂಡು ಟೌನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಅ.2, ಮಹಾತ್ಮ ಗಾಂಧಿ ಜಯಂತಿ

ಮೈಸೂರು, ಸೆ.29– ಜಿಲ್ಲಾಡಳಿತ, ಮೈಸೂರು ಮಹಾ ನಗರ ಪಾಲಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದೊಂದಿಗೆ ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಅಕ್ಟೋಬರ್ 2ರಂದು ಬೆಳಗ್ಗೆ 8 ಗಂಟೆಗೆ ಗಾಂಧಿ ವೃತದಲ್ಲಿ ಗಾಂಧೀಜಿಯವರ ಪ್ರತಿಮೆಗೆ ಪುಷ್ಪಾರ್ಚನೆ ಕಾರ್ಯಕ್ರಮ ಹಾಗೂ ಮಹಾತ್ಮ ಗಾಂಧಿ ಜಯಂತಿ ಪ್ರಾರ್ಥನಾ ಸಭೆಯನ್ನು ಶ್ರೀರಂಗಾಚಾರ್ಲು ಸ್ಮಾರಕ ಪುರಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ



ಮೈಸೂರಲ್ಲಿ ಮಕ್ಕಳ ಕಲಾತ್ಮಕ ಲೋಕ, ಪುಟ್ಟ ಕೈಗಳಿಂದ ಅರಳಿದ ವೈವಿಧ್ಯತೆಯ ಅದ್ಭುತ ವಸ್ತು ಪ್ರದರ್ಶನ



● ಮಕ್ಕಳ ದಸರಾದಲ್ಲಿ 'ರಾ... ರಾ... ರಕ್ಕಮ್ಮ...' ಸಾಂಗ್‌ಗೆ ಹೆಜ್ಜೆ ಹಾಕಿದ ಬಾಲಪ್ರತಿಭೆ ವಂಶಿಖಾ ಅಂಜನಿ ಕಶ್ಯಪ್ಪ ● ಮಕ್ಕಳ ಲೋಕದಲ್ಲಿ ನಾನಾ ವಿಸ್ಮಯ ಕಂಡು ಬೆಕ್ಕಸ ಬೆರಗಾದ ಮಹನೀಯರು





ಮೈಸೂರು,ಸೆ.29(ಪಿಎಂ)– ಮಕ್ಕಳ ಸಾಂಸ್ಕೃತಿಕ ಸೊಬಗಿನಲ್ಲಿ ವೈವಿಧ್ಯಮಯ ಕಲಾಲೋಕ ಒಂದೆಡೆ ಅನಾವರಣಗೊಂಡಿದ್ದರೆ, ಮತ್ತೊಂದೆಡೆ ಮಕ್ಕಳ ಬೌದ್ಧಿಕ ಸಾಮರ್ಥ್ಯದ ಮೂಲಕ ಮೂಡಿದ ವಿಜ್ಞಾನದ ನಾನಾ ಮಾದರಿ, ಕರಕುಶಲ ಕಲೆ ಹಾಗೂ ಅರಿವು ಕುರಿತ ವಸ್ತು ಪ್ರದರ್ಶನವು ಜ್ಞಾನದ ವಿವಿಧ ಮಜಲಿನ ಕಣಜವನ್ನೇ ಸೃಷ್ಟಿಸಿದೆ.

ಮೈಸೂರಿನ ಜಗನ್ಮೋಹನ ಅರಮನೆ ಒಳಾವರಣದಲ್ಲಿ ಸಾಂಸ್ಕೃತಿಕ ವೈಭವ, ಹೊರಾವರಣದಲ್ಲಿ ವಿಜ್ಞಾನ–ತಂತ್ರಜ್ಞಾನ ವೈಶಿಷ್ಟ್ಯದ ಮಾದರಿ, ಕಲಾತ್ಮಕ ಲೋಕದ ನಾನಾ ಮಾದರಿ ಹಾಗೂ ಆರೋಗ್ಯ ಸೇರಿದಂತೆ ವಿವಿಧ ವಿಚಾರಗಳ ಜಾಗೃತಿ ಕುರಿತ ಮಾದರಿ ಒಳಗೊಂಡ ವಸ್ತು ಪ್ರದರ್ಶನ ಮಕ್ಕಳ ಪರಿಕಲ್ಪನೆಯಲ್ಲಿ ಮೂಡಿಬಂದಿದೆ.

ದಸರಾ ಪ್ರಯುಕ್ತ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಹಮ್ಮಿಕೊಂಡಿರುವ 2 ದಿನಗಳ (ಸೆ.29, 30) ಮಕ್ಕಳ ದಸರಾ ಇಂತಹ ಚಿಂತನ–ಮಂಥನ ಹಾಗೂ ಮನಮೋಹಕತೆಯನ್ನು ಅನಾವರಣಗೊಳಿಸಿದೆ. ಉದ್ಘಾಟನಾ ಸಮಾರಂಭದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಕ್ಕಳ ದಸರಾಗೆ ಚಾಲನೆ ನೀಡಿದರೆ, 'ಗಿಚ್ಚಿ ಗಿಲಿಗಿಲಿ', 'ನನ್ನಮ್ಮ ಸೂಪರ್ ಸ್ಟಾರ್' ಟಿವಿ ಶೋ ಖ್ಯಾತಿಯ ಬಾಲ ಪ್ರತಿಭೆ ವಂಶಿಖಾ ಅಂಜನಿ ಕಶ್ಯಪ್ಪ ವಿಶೇಷ ಅತಿಥಿಯಾಗಿ ಪಾಲ್ಗೊಂಡು ತನ್ನ ಸಂಭಾಷಣೆ–ನೃತ್ಯದ ಮೂಲಕ ನೆರೆದಿದ್ದ ಮಕ್ಕಳಲ್ಲಿ ಪುಳಕವಿಟ್ಟಳು.

'ಹಾಯ್ ಎಲ್ಲರೂ ಹೇಗಿದ್ದೀರಾ? ಹ್ಯಾಪಿ ದಸರಾ... ರಜಾ ಬೇಕಾ? ಎಷ್ಟು ದಿನ ಬೇಕು? ಆಯ್ತು ತಗೊಳಿ... ನನ್ನನ್ನು ಇಲ್ಲಿಗೆ ಕರೆದಿದ್ದಕ್ಕೆ ಥ್ಯಾಂಕ್ಸ್... ಮೈಸೂರಲ್ಲಿ ಚಾಮುಂಡಿಬೆಟ್ಟ ಎಲ್ಲವನ್ನೂ ನೋಡಬೇಕು... ಬನ್ನಿ ನನ್ನ ಜೊತೆ' ಎಂದು ಗಿಜುಗುಡುವಂತೆ ನೆರೆದಿದ್ದ ಮಕ್ಕಳನ್ನು ಉದ್ದೇಶಿಸಿ ಮಾತನಾಡಿ ವಂಶಿಖಾ ಅಂಜನಿ ಕಶ್ಯಪ್ಪ ಅವರ ಹೃದಯಕ್ಕೆ ಲಗ್ಗೆ ಇಟ್ಟಳು. ತನ್ನ ತಂದೆ ಮಾಸ್ಟರ್ ಆನಂದ್ ಯಾವುದಾದರೂ ಡ್ಯಾನ್ಸ್ ಮಾಡಲು ತಿಳಿಸುತ್ತಿದ್ದಂತೆ 'ವಿಕ್ರಾಂತ್ ರೋಣ' ಸಿನಿಮಾದ 'ರಾ... ರಾ... ರಕ್ಕಮ್ಮ...' ಸಾಂಗ್‌ಗೆ ತನ್ನ ಪುಟಾಣಿ ಹೆಜ್ಜೆ ಹಾಕಿ ನೆರೆದಿದ್ದ ಮಕ್ಕಳಲ್ಲಿ ರೋಮಾಂಚನ ಉಂಟು ಮಾಡಿದಳು.

ವಸ್ತು ಪ್ರದರ್ಶನ: ಇಲ್ಲಿ ಮಕ್ಕಳು ಪ್ರದರ್ಶಿಸಿರುವ ವಿವಿಧ ಮಾದರಿಗಳ ವಸ್ತು ಪ್ರದರ್ಶನ ಕೌತುಕ ಮೂಡಿಸಲಿದೆ. ಇಲ್ಲಿರುವ 6 ಮಳಿಗೆಗಳಲ್ಲಿ 10ಕ್ಕೂ ಹೆಚ್ಚು ವಿಷಯ ವಸ್ತುಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಹೆಚ್‌ಡಿ ಕೋಟೆಯ ವಿಶ್ವ ಭಾರತಿ ಶಾಲೆಯ ವಿದ್ಯಾರ್ಥಿನಿಯರಾದ ಎಸ್.ವರಲಕ್ಷ್ಮಿ ಮತ್ತು ವೈ.ವಿ.ರೇವತಿ ತಮ್ಮ ಶಿಕ್ಷಕ ಶಿವಮೂರ್ತಿ ಮಾರ್ಗದರ್ಶನದಲ್ಲಿ ಕತ್ತಲಾಗುತ್ತಿದ್ದಂತೆ ಸ್ವಯಂಚಾಲಿತವಾಗಿ ಬೆಳಗುವ ಬೀದಿದೀಪದ ಮಾದರಿ ಪ್ರದರ್ಶಿಸಿದ್ದಾರೆ. ಈ ವ್ಯವಸ್ಥೆಯಿಂದ ಸಮಯ, ಶ್ರಮ ಮತ್ತು ವಿದ್ಯುತ್ ಉಳಿಸಬಹುದು. ಈಗಾಗಲೇ ಈ ರೀತಿಯ ವ್ಯವಸ್ಥೆ ಬಳಕೆಯಲ್ಲಿದೆ ಎಂದು ವಿದ್ಯಾರ್ಥಿನಿಯರು ವಿವರಿಸಿದರು.

ವಿಜಯವಿಠ್ಠಲ ವಿದ್ಯಾಶಾಲಾ ವಿದ್ಯಾರ್ಥಿಗಳಿಬ್ಬರು ಭವಿಷ್ಯದ ಜಗತ್ತಿನ ತಂತ್ರಜ್ಞಾನ ಹೇಗೆಲ್ಲಾ ಇರಬಹುದು ಎಂದು ಊಹಿಸಿ ಕೆಲ ಮಾದರಿಗಳನ್ನು ಸಿದ್ಧಪಡಿಸಿ, ಇಟ್ಟಿದ್ದಾರೆ. ವಿಮಾನದಲ್ಲಿ ಹೋಟೆಲ್, ಈಜುಕೊಳ ನಿರ್ಮಾಣದ ಪರಿಕಲ್ಪನೆಯಲ್ಲಿ ಒಂದು ಮಾದರಿ ಮಾಡಿದ್ದರೆ, ವೈದ್ಯಕೀಯ ಲೋಕದಲ್ಲಿ ಸರ್ಜರಿಗೆ ರೋಬೋಟ್ ಬಳಕೆಯ ಬಗ್ಗೆ ಪರಿಚಯಿಸುವ ಮತ್ತೊಂದು ಮಾದರಿ ಪ್ರದರ್ಶಿಸಿದ್ದಾರೆ. ಸಿದ್ಧಾರ್ಥನಗರದ ಗೀತ ಭಾರತಿ ಶಾಲೆ ವಿದ್ಯಾರ್ಥಿನಿಯರಿಬ್ಬರು 'ಸ್ಮಾರ್ಟ್ ಇರಿಗೇಷನ್ ಸಿಸ್ಟಮ್' ಮಾದರಿ ಮೂಲಕ ನೀರಿನ ಉಳಿತಾಯ ಹಾಗೂ ಬೆಳೆಗಳಿಗೆ ಅಗತ್ಯವಿದ್ದಾಗ ನೀರು ಹಾಯಿಸುವ ಸ್ವಯಂಚಾಲಿತ ವಿಧಾನದ ಬಗ್ಗೆ ಪರಿಚಯಿಸಿದ್ದಾರೆ. ಈಗಾಗಲೇ ರಾಜ್ಯದ ಹಲವೆಡೆ ಈ ವಿಧಾನ ಬಳಕೆಯಲ್ಲಿದೆ ಎನ್ನುತ್ತಾರೆ ಈ ವಿದ್ಯಾರ್ಥಿನಿಯರು.

ಒಂಟಿಕೊಪ್ಪಲು ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಬಸವರಾಜು ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು, ಮಾನವನ ತಲೆ ಬುರುಡೆ ಮತ್ತು ಕಾಲಿನ ಅತ್ಯಂತ ದೊಡ್ಡ ಮೂಳೆ, ಹಸುವಿನ ಕಾಲಿನ ಮೂಳೆ, ಹಾವಿನ ಚರ್ಮ ಮೊದಲಾದವನ್ನು ಪ್ರದರ್ಶಿಸಿ, ಅವುಗಳ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ವಿಶೇಷವೆಂದರೆ ನೈಜವಾದ ಮಾದರಿಗಳನ್ನೇ ಕಲೆ ಹಾಕಿ ಇಲ್ಲಿ ಪ್ರದರ್ಶಿಸಲಾಗಿದೆ. ಈ ಬಗ್ಗೆ ವಿವರಿಸಿದ ಶಿಕ್ಷಕ ಬಸವರಾಜು, ಜೀವಶಾಸ್ತ್ರವನ್ನು ಮಕ್ಕಳಿಗೆ ಪಾಠ ಮಾಡುವಾಗ ಮಾದರಿ ಮೂಲಕ ವಿವರಿಸಿದರೆ ಅವರಲ್ಲಿ ಕಲಿಕೆ ಪರಿಣಾಮಕಾರಿಯಾಗಲಿದೆ. ಹಾಗಾಗಿ ಜೀವಶಾಸ್ತ್ರ ಬೋಧನೆಯಲ್ಲಿ ಈ ವಿಧಾನ ಬಳಸಿಕೊಳ್ಳುತ್ತಿರುವುದಾಗಿ ಹೇಳಿದರು.

ಅಲ್ಲದೆ, ಪ್ರದರ್ಶನದಲ್ಲಿರುವ ಹಾವಿನ ಚರ್ಮಗಳ ಬಗ್ಗೆ ಮಾತನಾಡಿ, ರಸ್ತೆಯಲ್ಲಿ ವಾಹನಗಳಿಗೆ ಸಿಲುಕಿ ಮೃತಪಟ್ಟ ಹಾವುಗಳ ಚರ್ಮಗಳನ್ನು ಸಂಗ್ರಹಿಸಿ ಇಲ್ಲಿ ಪ್ರದರ್ಶಿಸಲಾಗಿದೆ. ಹಾವುಗಳು ರಸ್ತೆಯಲ್ಲಿ ಹೇಗೆ ಸಾವನ್ನಪ್ಪುತ್ತಿವೆ ಎಂದು ತೋರಿಸಲು ಹಾಗೂ ಹಾವುಗಳ ಸಂರಕ್ಷಣೆ ಮಹತ್ವ ತಿಳಿಸಲು ಅವುಗಳನ್ನು ಇಲ್ಲಿಡಲಾಗಿದೆ ಎಂದು ತಿಳಿಸಿದರು. ಸೆ.29, 30ರಂದು ಬೆಳಗ್ಗೆ 9.30ರಿಂದ ಸಂಜೆ 4.30ರವರೆಗೆ ಆಸಕ್ತರು ಭೇಟಿ ನೀಡಿ ಪ್ರದರ್ಶನ ವೀಕ್ಷಿಸಬಹುದು. ಪ್ರವೇಶ ಉಚಿತವಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಉಪಮೇಯರ್ ರೂಪ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಮತ್ತಿತರರು ಹಾಜರಿದ್ದರು.


ಮೈಸೂರು ಮಹಾರಾಜರ ಸ್ಮರಿಸಿದ ಸಚಿವ ನಾಗೇಶ್...

ಮಕ್ಕಳ ದಸರಾ ಉದ್ಘಾಟಿಸಿದ ಸಚಿವ ಬಿ.ಸಿ.ನಾಗೇಶ್ ಮಾತನಾಡಿ, ಮೈಸೂರು ಮಹಾರಾಜರು ಉತ್ತಮ ಆಡಳಿತ ನೀಡಿ ರಾಜಪ್ರಭುತ್ವದಲ್ಲೂ ಪ್ರಜಾಪ್ರಭುತ್ವದ ಕಲ್ಪನೆಗೆ ಆದ್ಯತೆ ನೀಡಿದ್ದರು. ಸಾಮಾಜಿಕ ನ್ಯಾಯ ನೀಡಿದ ಮಹಾರಾಜರು ಈ ನಾಡಿನಲ್ಲಿ ಎಲ್ಲರೂ ಸೇರಿ ಸಾಮರಸ್ಯದಿಂದ ಆಚರಿಸುವ ದಸರಾ ಪ್ರಾರಂಭಿಸಿದರು. ಮಹಾರಾಜರ ಕಾಲದ ದಸರಾ ಇಂದಿಗೂ ವಿಜೃಂಭಣೆಯಿಂದ ಆಚರಿಸುತ್ತಿದ್ದು, ಪ್ರತಿದಿನ ಸಮಾಜದ ಒಂದೊಂದು ವರ್ಗ ಒಂದೊಂದು ಕಾರ್ಯಕ್ರಮ ನೀಡುವ ಮೂಲಕ ಮಹಾರಾಜರ ಆಶಯದಂತೆ ಮುಂದುವರೆಸಲಾಗುತ್ತಿದೆ ಎಂದು ನುಡಿದರು.

ಒಂದೇ ಉಸಿರಿನಲ್ಲಿ ಧವನಿಯ ದನಿಯಲ್ಲಿ 224 ಕ್ಷೇತ್ರದ ಹೆಸರು!



ಸಮಾರಂಭದಲ್ಲಿ ಮತ್ತೊಬ್ಬ ಪುಟ್ಟ ಬಾಲಕಿ ಒಂದೇ ಉಸಿರಿನಲ್ಲಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಹೆಸರು ಹೇಳುವ ಮೂಲಕ ಅಚ್ಚರಿ ಉಂಟು ಮಾಡಿದಳು. ಎಲ್ಲಿಯೂ ನೋಡದೇ ಮೈಕ್ ಹಿಡಿದು, ನಿರರ್ಗಳವಾಗಿ ಹೆಗ್ಗನಹಳ್ಳಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ 3ನೇ ತರಗತಿಯ ಎನ್.ಧವನಿ ಈ ರೀತಿಯ ಕೌಶಲ್ಯ ಮೆರೆದು ಮಕ್ಕಳು ಮಾತ್ರವಲ್ಲದೆ, ಹಿರಿಯರನ್ನೂ ನಿಬ್ಬೆರಗಾಗಿಸಿದಳು. ಒಂದೇ ನಿಮಿಷದಲ್ಲಿ ಕ್ಷೇತ್ರಗಳ ಹೆಸರು ಹೇಳಿದ ಈ ಬಾಲಕಿ ಇದರಲ್ಲಿ 'ಗಿನ್ನಿಸ್ ವರ್ಲ್ಡ್ ಆಫ್ ರೆಕಾರ್ಡ್' ದಾಖಲೆ ಬರೆದಿದ್ದಾಳೆ.







ದಸರಾ ಕ್ರೀಡಾಕೂಟ ಉದ್ಘಾಟಿಸಿದ ಒಲಿಂಪಿಕ್ ಪದಕ ವಿಜೇತೆ ಸಾಕ್ಷಿ ಮಲ್ಲಿಕ್

ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಕುಸ್ತಿ ಅಕಾಡೆಮಿ ಸ್ಥಾಪನೆಗೆ ಮನವಿ



ಮೈಸೂರು, ಸೆ.29(ಎಂಕೆ)– ಹೆಣ್ಣು ಮಕ್ಕಳನ್ನು ಕುಸ್ತಿಪಟುಗಳನ್ನಾಗಿಸುವ ನಿಟ್ಟಿನಲ್ಲಿ ಹೆಣ್ಣು ಮಕ್ಕಳಿಗಾಗಿಯೇ ಪ್ರತ್ಯೇಕ ಕುಸ್ತಿ ಅಕಾಡೆಮಿ ಸ್ಥಾಪಿಸಿ, ಪ್ರೋತ್ಸಾಹಿಸುವಂತೆ ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲ್ಲಿಕ್ ಮನವಿ ಮಾಡಿದರು.

ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿರುವ 'ರಾಜ್ಯಮಟ್ಟದ ದಸರಾ ಕ್ರೀಡಾಕೂಟ'ಕ್ಕೆ ಗುರುವಾರ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ನನ್ನ ಕುಸ್ತಿ ವೃತ್ತಿ ಜೀವನದ ಬಳಿಕ ಕುಸ್ತಿ ಅಕಾಡೆಮಿಯೊಂದನ್ನು ಸ್ಥಾಪಿಸಬೇಕು. ಹೆಣ್ಣು ಮಕ್ಕಳನ್ನು ಕುಸ್ತಿ ಪಟುಗಳನ್ನಾಗಿಸಬೇಕು ಎಂದು ಕೊಂಡಿದ್ದೇನೆ. ಅದೇ ರೀತಿ ನಾನು ಭೇಟಿ ನೀಡಿದ ಸ್ಥಳಗಳಲ್ಲಿಯೂ ಕುಸ್ತಿ ಅಕಾಡೆಮಿ ಸ್ಥಾಪಿಸುವಂತೆ ಮನವಿ ಮಾಡುತ್ತಿದ್ದೇನೆ ಎಂದರು.

18 ವರ್ಷಗಳ ಹಿಂದೆ ನನ್ನ ಕುಸ್ತಿ ಜೀವನ ಆರಂಭವಾಯಿತು. ಕ್ರೀಡಾಕೂಟಗಳಲ್ಲಿ ಭಾಗವಹಿಸುವಾಗ ನಿಮ್ಮಂತೆಯೇ ವೇದಿಕೆ ಮುಂಭಾಗ ಕುಳಿತು ವೇದಿಕೆ ಮೇಲೆ ಕುಳಿತುಕೊಳ್ಳುವ ಕನಸು ಕಾಣುತ್ತಿದ್ದೆ. ಅತಿಥಿಗಳನ್ನು ಕಂಡು ಖುಷಿಪಡುತ್ತಿದ್ದೆ. ನಿರಂತರ ಕಠಿಣ ಪರಿಶ್ರಮ, ಶಿಸ್ತಿನ ಅಭ್ಯಾಸದಿಂದ ಸಾಧನೆ ಮಾಡಲು, ಒಲಿಂಪಿಕ್‌ನಲ್ಲಿ ಪದಕ ಗೆಲ್ಲಲು ಸಾಧ್ಯವಾಯಿತು. ಒಲಿಂಪಿಕ್‌ನಲ್ಲಿ ಪದಕಗೆದ್ದ ಭಾರತೀಯ ಮೊದಲ ಮಹಿಳಾ ಕುಸ್ತಿಪಟು ಎಂಬ ಖ್ಯಾತಿಯೂ ನನ್ನದಾಯಿತು ಎಂದು ತಾವು ಬೆಳೆದುಬಂದ ಹಾದಿಯನ್ನು ತಿಳಿಸಿದರು.

ದಸರಾ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಮೈಸೂರು ದಸರಾ ಕ್ರೀಡಾಕೂಟದಲ್ಲಿ 4600ಕ್ಕೂ ಹೆಚ್ಚು ಕ್ರೀಡಾಪಟುಗಳ ಭಾಗವಹಿಸಿರುವುದು ಬಹಳ ಖುಷಿ ತಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡಾಕೂಟಗಳನ್ನು ಆಯೋಜಿಸಲು ಸುಮಾರು 504 ಕೋಟಿ ರೂ.ಗಳನ್ನು ನೀಡಲಾಗಿದೆ ಯೋಗವನ್ನು ಕ್ರೀಡೆಗಳ ಸಾಲಿಗೆ ಸೇರಿಸಿಕೊಂಡು ಯೋಗ ಪಟುಗಳನ್ನು ಸಹ ಪ್ರೋತ್ಸಾಹಿಸಲಾಗುತ್ತಿದೆ. ಕ್ರೀಡಾಪಟುಗಳು ದೇಶದ ಭವಿಷ್ಯವಾಗಿದ್ದು, ಮಕ್ಕಳ ಪಾಠದ ಜೊತೆಗೆ ಕ್ರೀಡೆಗಳಲ್ಲಿ ತೊಡಗಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಧ್ವಜಾರೋಹಣ ನೆರವೇರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ದಸರಾ ಕ್ರೀಡಾಕೂಟಕ್ಕೆ ರಿಯೋ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತೆ, ಕುಸ್ತಿಪಟು ಸಾಕ್ಷಿ ಮಲ್ಲಿಕ್ ಅವರು ಆಗಮಿಸಿರುವುದು ಕ್ರೀಡಾಪಟುಗಳಿಗೆ ಸ್ಫೂರ್ತಿ ಸಿಕ್ಕಂತಾಗಲಿದೆ. ದಸರಾ ಕುಸ್ತಿ ಪಂದ್ಯಾವಳಿಗೆ ನಾನಾ ರಾಜ್ಯಗಳಿಂದ ಕುಸ್ತಿಪಟುಗಳು ಆಗಮಿಸಿದ್ದಾರೆ. ಸಾಕ್ಷಿ ಮಲ್ಲಿಕ್ ಅವರು ಕುಸ್ತಿಪಟುಗಳಿಗೆ ಸಲಹೆ, ಸೂಚನೆಗಳನ್ನು ನೀಡಬೇಕು ಎಂದರು.

4600 ಮಂದಿ ಕ್ರೀಡಾಪಟುಗಳು, 800 ತಾಂತ್ರಿಕ ಸಿಬ್ಬಂದಿ ಸೇರಿದಂತೆ ಒಟ್ಟು 5400ಕ್ಕೂ ಹೆಚ್ಚು ಜನರು ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ. ಎಲ್ಲಾ ಕ್ರೀಡಾಪಟುಗಳಿಗೆ ಸಕಲ ಸೌಕರ್ಯ ಕಲ್ಪಿಸುವುದರ ಜೊತೆಗೆ ಕ್ರೀಡಾ ಇಲಾಖೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಸಚಿವ ನಾರಾಯಣ ಗೌಡ ಮಾಡುತ್ತಿದ್ದಾರೆ ಎಂದು ಹೇಳಿದರು.

> ಮೈಸೂರಿಗೆ ಇದೇ ಮೊದಲ ಬಾರಿಗೆ ಭೇಟಿ ನೀಡಿದ್ದೇನೆ. ಅತ್ಯಂತ ಆತ್ಮೀಯವಾಗಿ ಸ್ವಾಗತಿಸಿದ್ದಾರೆ. ಪ್ರೀತಿಯಿಂದ ಕಂಡು ಅಭಿನಂದಿಸಿದ್ದಾರೆ. ಮೈಸೂರು ದಸರಾಗೆ ಆಹ್ವಾನ ನೀಡಿದ್ದಕ್ಕೆ ಧನ್ಯವಾದ.
>
> – ಸಾಕ್ಷಿ ಮಲ್ಲಿಕ್, ಅಂತರರಾಷ್ಟ್ರೀಯ ಕುಸ್ತಿಪಟು

ಪಥ ಸಂಚಲನ: ದಸರಾ ಕ್ರೀಡಾಕೂಟಕ್ಕೂ ಚಾಲನೆ ನೀಡುವ ಮುನ್ನ ವಿವಿಧೆಡೆಯಿಂದ ಆಗಮಿಸಿದ ಕ್ರೀಡಾಪಟುಗಳು ಪಥ ಸಂಚಲನ ನಡೆಸಿ, ಗಣ್ಯರಿಗೆ ಗೌರವ ಸಲ್ಲಿಸಿದರು. ಕಾರ್ಯಕ್ರಮದ ಕಡೆಯಲ್ಲಿ ಪಥ ಸಂಚಲನದಲ್ಲಿ ಶಿಸ್ತಿನಿಂದ ಭಾಗವಹಿಸಿದ ಬೆಳಗಾವಿ ವಿಭಾಗಕ್ಕೆ ಪ್ರಥಮ ಹಾಗೂ ಕಲಬುರಗಿ ವಿಭಾಗಕ್ಕೆ ದ್ವಿತೀಯ ಬಹುಮಾನ ನೀಡಲಾಯಿತು.

ಕ್ರೀಡಾ ಜ್ಯೋತಿ ಹಸ್ತಾಂತರ: ಕ್ರೀಡಾ ಜ್ಯೋತಿ ಹಿಡಿದು ಕ್ರೀಡಾಂಗಣಕ್ಕೆ ಆಗಮಿಸಿದ ಕ್ರೀಡಾಪಟುಗಳಾದ ಸಂಧ್ಯಾ, ದೀಪ್ತಿ, ನಿಶು, ಅನ್ನಪೂರ್ಣ ಅವರಿಂದ ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ ಕ್ರೀಡಾಜ್ಯೋತಿಯನ್ನು ಪಡೆದುಕೊಂಡರು. ಬಳಿಕ ಮೇಯರ್ ಶಿವಕುಮಾರ್ ಅವರಿಗೆ ಕ್ರೀಡಾಜ್ಯೋತಿಯನ್ನು ಹಸ್ತಾಂತರಿಸಲಾಯಿತು. ನಂತರ ಎಲ್ಲಾ ಕ್ರೀಡಾಪಟುಗಳು ಪ್ರಮಾಣವಚನ ಸ್ವೀಕರಿಸಿದರು.

ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಗೋಪಾಲಕೃಷ್ಣ, ಎಸ್ಪಿ ಚೇತನ್, ದಸರಾ ಉಪಸಮಿತಿ ಅಧ್ಯಕ್ಷ ಶಿವಾನಂದ, ಉಪಾಧ್ಯಕ್ಷ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಪಾಯಿಂಟ್ ಕುಸ್ತಿಗೆ ಸಾಕ್ಷಿ ಮಲ್ಲಿಕ್ ಚಾಲನೆ



ಮೈಸೂರು, ಸೆ.29(ಎಂಕೆ)– ನಗರದ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ದಸರಾ ಕುಸ್ತಿ' ಪಂದ್ಯಾವಳಿಯಲ್ಲಿ ಪಾಯಿಂಟ್ ಕುಸ್ತಿ ಪಂದ್ಯಾವಳಿಗೆ ಅಂತರರಾಷ್ಟ್ರೀಯ ಕುಸ್ತಿಪಟು ಸಾಕ್ಷಿ ಮಲ್ಲಿಕ್ ಗುರುವಾರ ಚಾಲನೆ ನೀಡಿದರು.

ಪೇಟ ಧರಿಸಿ ಅಖಾಡಕ್ಕೆ ನಮಸ್ಕರಿಸುತ್ತಾ ಆಗಮಿಸಿದ ಸಾಕ್ಷಿ ಮಲ್ಲಿಕ್, ಕುಸ್ತಿ ಅಭಿಮಾನಿಗಳತ್ತ ಕೈಬೀಸಿ ಕುಸ್ತಿ ಕ್ರೀಡಾಂಗಣಕ್ಕೆ ಹೊಸ ಕಳೆತಂದರು. ಬಳಿಕ ಅಖಾಡಕ್ಕಿಯಲು ಸಿದ್ಧರಾಗಿದ್ದ ಪೈಲ್ವಾನರ ಪ್ರೋತ್ಸಾಹಿಸಿ, ಪಾಯಿಂಟ್ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕ್ರೀಡೆ ನಿಮ್ಮನ್ನು ದೊಡ್ಡ ಸ್ಥಾನಕ್ಕೆ ಬೆಳೆಸಲಿದೆ. ನಿರಂತರ ಅಭ್ಯಾಸ ನಡೆಸಿ, ಕ್ರೀಡಾಕೂಟಗಳಲ್ಲಿ ಭಾಗವಹಿಸಿ ನಾಡಿಗೆ, ದೇಶಕ್ಕೆ ಕೀರ್ತಿ ತನ್ನಿ ಎಂದರು.



ಬಳಿಕ ಮಟ್ಟಿ ಅಖಾಡದಲ್ಲಿಯೇ 4 ಜೋಡಿಗಳ ಪಾಯಿಂಟ್ ಕುಸ್ತಿ ನಡೆಯಿತು. ಇದೇ ವೇಳೆ 'ದಸರಾ ಪಂಜ ಕುಸ್ತಿ' ಪಂದ್ಯಾವಳಿಯ ಫೈನಲ್ ಪಂದ್ಯವನ್ನು ವೀಕ್ಷಣೆ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಉನ್ನತ ಶಿಕ್ಷಣ ಸಚಿವ ಅಶ್ವತ್ಥ್ ನಾರಾಯಣ, ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರ, ದಸರಾ ಕುಸ್ತಿ ಉಪಸಮಿತಿಯ ಉಪ ವಿಶೇಷಾಧಿಕಾರಿ ಡಾ.ಬಿ.ಎನ್.ನಂದಿನಿ, ಅಧ್ಯಕ್ಷ ಕೆ.ದೇವರಾಜ್, ಕಾರ್ಯಾಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷರಾದ ಹೆಚ್.ಎಸ್.ವೇದರಾಜ್, ಮಹೇಶ್‌ರಾಜ್ ಅರಸ್, ಎಂ.ಎಂ.ರಾಜೇಗೌಡ, ಕಾರ್ಯದರ್ಶಿ ಎಸ್.ಜೆ.ಹರ್ಷವರ್ಧನ್ ಮತ್ತಿತರರಿದ್ದರು.


ಮೈಸೂರು ಮಿತ್ರ
ಶುಕ್ರವಾರ 30-9-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ಈ ವಾರ ತೋತಾಪುರಿ
ಸ್ವಲ್ಪ ಹುಳಿ ಸ್ವಲ್ಪ ಖಾರ...!




ನಾವೆಲ್ಲ ಒಂದೇ ಎಂಬ ಭಾವೈಕ್ಯತೆಯ ಸಂದೇಶ ಸಾರುವ ಕಥಾಹಂದರ ಇರುವ ಹಾಸ್ಯಮಯ ಚಿತ್ರ 'ತೋತಾಪುರಿ' ಈ ವಾರ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಶಿವಲಿಂಗ ಖ್ಯಾತಿಯ ಕೆ.ಎ.ಸುರೇಶ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ನವರಸನಾಯಕ ಜಗ್ಗೇಶ್ ಹಾಗೂ ಆದಿತಿ ಪ್ರಭುದೇವಾ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಈ ಚಿತ್ರಕ್ಕೆ ವಿಜಯ್ ಪ್ರಸಾದ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕಾನ್ಸ್ಟಿಟ್ಯೂಷನ್ ಅಡಿಯಲ್ಲಿ ಬದುಕುತ್ತಿರುವ ನಾವೆಲ್ಲರೂ ಅಣ್ಣ, ತಮ್ಮಂದಿರು ಎಂಬ ಅದ್ಭುತವಾದ ಸಂದೇಶ ಇರುವ ತೋತಾಪುರಿಯಲ್ಲಿ ಉಪ್ಪು, ಹುಳಿ, ಖಾರ ಎಲ್ಲದರ ಸಮನಾದ ಮಿಶ್ರಣವಿದೆ

ಚಿತ್ರದಲ್ಲಿ ಒಬ್ಬ ಮುಸ್ಲಿಂ ಯುವತಿಯಾಗಿ ನಾಯಕಿ ಅದಿತಿ ಪ್ರಭುದೇವಾ ಕಾಣಿಸಿಕೊಂಡಿದ್ದಾರೆ. ಡಾಲಿ ಧನಂಜಯ್, ಸುಮನ್ ರಂಗನಾಥ್, ವೀಣಾಸುಂದರ್, ಹೇಮಾದತ್, ದತ್ತಣ್ಣ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ. ಅನೂಪ್ ಸೀಳಿನ್ ಅವರ ಸಂಗೀತ, ನಿರಂಜನ್‌ಬಾಬು ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ. ನವಿರಾದ ಹಾಸ್ಯದ ಮೂಲಕ ಮನುಷ್ಯತ್ವ, ಮಾನವೀಯತೆಯ ಜೊತೆಗೆ ದೇವರು, ಧರ್ಮದ ವಿಚಾರಗಳನ್ನು ಸಹ ಈ ಚಿತ್ರ ಹೇಳಲಿದೆ, ಜೊತೆಗೆ ಈಗಿನ ಕಾಲಕ್ಕೆ ಅಗತ್ಯವಾದ ಧರ್ಮ ಭಾವೈಕ್ಯತೆಯ ಕುರಿತಂತೆಯೂ ತೋತಾಪುರಿ ಸಿನಿಮಾ ಮಾತನಾಡಲಿದೆ.

ನ್ಯೂಯಾರ್ಕ್ ಟೈಮ್ಸ್‌ಸ್ಕ್ವೇರ್‌ನಲ್ಲಿ ನಟಿ ಇತಿ ಆಚಾರ್ಯ

ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಭಿನಯದ 'ಕವಚ' ಚಿತ್ರದಲ್ಲಿ ನಟಿಸಿದ್ದ ಇತಿ ಆಚಾರ್ಯ ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್ ಬಿಲ್‌ಬೋರ್ಡ್ ಹೋರ್ಡಿಂಗ್ಸ್‌ನಲ್ಲಿ ಕಾಣಿಸಿಕೊಂಡ ಮೊದಲ ಕನ್ನಡ ನಟಿ ಹಿರಿಮೆಗೆ ಪಾತ್ರವಾಗಿದ್ದಾರೆ. ಇತ್ತೀಚೆಗೆ ನ್ಯೂಯಾರ್ಕ್‌ನಲ್ಲಿ ನಡೆದ ನ್ಯೂಯಾರ್ಕ್ ಫ್ಯಾಶನ್‌ವೀಕ್‌ನಲ್ಲಿ ನಟಿ ಇತಿ ಆಚಾರ್ಯ ಪಾಲ್ಗೊಂಡಿದ್ದರು. ಇದನ್ನು ಟೈಮ್ಸ್‌ಸ್ಕ್ವೇರ್ ಬಿಲ್‌ಬೋರ್ಡ್ ತನ್ನ ಹೋರ್ಡಿಂಗ್ಸ್‌ನಲ್ಲಿ ಹಾಕುವ ಮೂಲಕ ಮೊದಲ ಬಾರಿಗೆ ಕನ್ನಡ ನಟಿಯನ್ನು ಗುರುತಿಸಿದೆ. ಸಾಮಾನ್ಯವಾಗಿ ಬಾಲಿವುಡ್ ನಟಿಮಣಿಯರೇ ಈ ಹೋರ್ಡಿಂಗ್ಸ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದು, ಕನ್ನಡದ ನಟಿಯೊಬ್ಬಳು ಇದರಲ್ಲಿ ಕಾಣಿಸಿದ್ದು ಇದೇ ಮೊದಲು. ನಟಿ ಹಾಗೂ ಮಾಡೆಲ್ ಆಗಿರುವ ಇತಿ ಆಚಾರ್ಯ 2016ರ ಮಿಸ್ ಸೌತ್ ಇಂಡಿಯಾ ವಿಜೇತರಾಗಿದ್ದರು. ಆರ್‌ವಿಎಸ್‌ಪಿ ಪ್ರೊಡಕ್ಷನ್ ಹೌಸ್ ಮೂಲಕ ನಿರ್ಮಾಪಕಿಯೂ ಆಗಿರುವ ಇವರು ಇದರ ಜೊತೆಗೆ ನಟನೆಯಲ್ಲೂ ಬ್ಯುಸಿಯಾಗಿದ್ದಾರೆ. ಇತಿ ಆಚಾರ್ಯ ನಟಿಸಿರುವ ಕನ್ನಡದ ಲಕ್ಷ್ಮೀಪುತ್ರ ಚಿತ್ರವಿನ್ನೂ ಬಿಡುಗಡೆಯಾಗಬೇಕಿದೆ. ಕನ್ನಡವಲ್ಲದೆ ಹಿಂದಿ, ತಮಿಳು, ಮಲಯಾಳಂ ಸಿನಿಮಾಗಳಲ್ಲಿಯೂ ಇತಿ ಆಚಾರ್ಯ ಬ್ಯುಸಿಯಾಗಿದ್ದಾರೆ.



ಬನಾರಸ್ ಟ್ರೈಲರ್ ಬಿಡುಗಡೆ ಮಾಡಿದ ರವಿಚಂದ್ರನ್-ಅರ್ಬಾಜ್ ಖಾನ್


ಕನ್ನಡ ಚಿತ್ರರಂಗದಲ್ಲಿ ಇತ್ತೀಚೆಗೆ ಪ್ಯಾನ್ ಇಂಡಿಯಾ ಚಿತ್ರಗಳು ಜೋರಾಗಿ ಸದ್ದು ಮಾಡುತ್ತಿವೆ. ಕೆಜಿಎಫ್, ಕಬ್ಜ ಚಿತ್ರಗಳ ನಂತರ ಕನ್ನಡ, ಹಿಂದಿ, ತಮಿಳು, ತೆಲುಗು ಮತ್ತು ಮಲೆಯಾಳಂನಲ್ಲಿ ತೆರೆಗೆ ಬರಲು ಸಜ್ಜಾಗಿರುವ ಮತ್ತೊಂದು ಚಿತ್ರ ಬನಾರಸ್. ಶಾಸಕ ಜಮೀರ್ ಅಹ್ಮದ್‌ಖಾನ್ ಅವರ ಪುತ್ರ ಜೈದ್‌ಖಾನ್ ನಾಯಕನಾಗಿ ನಟಿಸಿರುವ ಬಹು ನಿರೀಕ್ಷಿತ ಚಿತ್ರ ಇದಾಗಿದ್ದು, ಬೆಲ್‌ಬಾಟಂ ಖ್ಯಾತಿಯ ಜಯತೀರ್ಥ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು. ಈಗಾಗಲೇ ತನ್ನ ಹಾಡುಗಳ ಮೂಲಕ ಜನಪ್ರಿಯತೆ ಗಳಿಸಿರುವ ಬನಾರಸ್ ಚಿತ್ರವೀಗ ತನ್ನ ವಿಭಿನ್ನ ಟ್ರೈಲರ್ ಮೂಲಕ ಸದ್ದು ಮಾಡಲು ಹೊರಟಿದೆ. 'ಬನಾರಸ್' ಏಕಕಾಲದಲ್ಲಿಯೇ ಐದು ಭಾಷೆಗಳಲ್ಲಿ ತಯಾರಾಗಿರುವ ಚಿತ್ರವಾಗಿದ್ದು ಸೋಮವಾರ ಸಂಜೆ ಬೆಂಗಳೂರಿನ ಒರಾಯನ್ ಮಾಲ್‌ನಲ್ಲಿ ಎಲ್ಲಾ ಭಾಷೆಗಳ ಟ್ರೈಲರ್‌ಗಳ ಬಿಡುಗಡೆಯಾಯಿತು. ಈ ಕಾರ್ಯಕ್ರಮದಲ್ಲಿ ಕ್ರೇಜಿಸ್ಟಾರ್ ರವಿಚಂದ್ರನ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಕನ್ನಡ ಭಾಷೆಯ ಟ್ರೈಲರ್ ಲಾಂಚ್ ಮಾಡಿದರೆ, ಬಾಲಿವುಡ್ ನಟ, ನಿರ್ಮಾಪಕ ಅರ್ಬಾಜ್‌ಖಾನ್ ಅವರು ಹಿಂದಿ ಭಾಷೆಯ ಟ್ರೈಲರನ್ನು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಜಯತೀರ್ಥ, ಇದೊಂದು ಟೈಮ್‌ಟ್ರಾವಲ್ ಚಿತ್ರ. ಅಪ್ಪಟ ಪ್ರೇಮಕಥೆಯ ಜೊತೆಗೆ ಥ್ರಿಲ್ಲರ್ ಕಂಟೆಂಟ್ ಕೂಡ ಇದೆ. ಬನಾರಸ್ ಎನ್ನುವ ಲೊಕೇಶನ್ನೇ ಈ ಚಿತ್ರದ ನಿಜವಾದ ನಾಯಕ. ಜೈದ್‌ಖಾನ್ ಮೊದಲ ಚಿತ್ರದಲ್ಲೇ ಭರವಸೆ ಮೂಡಿಸಿದ್ದಾರೆ ಎಂದು ಹೇಳಿದರು. ತನ್ನ ಪಾತ್ರದ ಕುರಿತು ಮಾಹಿತಿ ಹಂಚಿಕೊಂಡ ನಾಯಕ ಜೈದ್‌ಖಾನ್, ಪ್ಯಾನ್‌ಇಂಡಿಯಾ ಸಿನಿಮಾ ಮಾಡಲು ಕಂಟೆಂಟ್ ಮುಖ್ಯವೇ ಹೊರತು ಹೊಸ ನಾಯಕ ಅಥವಾ ಸ್ಟಾರ್ ಮುಖ್ಯವಲ್ಲ. ನಾನೊಬ್ಬ ಕಲಾವಿದ, ನನಗೆ ಜಾತಿ, ಧರ್ಮ, ಮತ ಇಲ್ಲ. ಹಲವು ವರ್ಷಗಳಿಂದ ಹೋರಾಡಿ ಕೊನೆಗೂ ನಾಯಕನಾಗಿದ್ದೇನೆ. ನಿರ್ಮಾಪಕ ತಿಲಕ್‌ರಾಜ್ ಅವರು ನನ್ನ ಗಾಡ್‌ಫಾದರ್, ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಅದ್ಭುತವಾದ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು. ಹಿರಿಯ ಕಲಾವಿದರಾದ ಅಚ್ಯುತ್‌ಕುಮಾರ್, ಸುಜಯ್ ಶಾಸ್ತ್ರಿ, ಛಾಯಾಗ್ರಾಹಕ ಅದ್ವೈತ್ ಗುರುಮೂರ್ತಿ ಚಿತ್ರದ ವಿಶೇಷತೆ ಕುರಿತಂತೆ ಮಾಹಿತಿ ಹಂಚಿಕೊಂಡರು.

ತಿಲಕ್‌ರಾಜ್ ಬಲ್ಲಾಳ್ ಅವರು ಈ ಚಿತ್ರವನ್ನು ಬಹುಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದಾರೆ. ಕರಾವಳಿಯ ಹುಡುಗಿ ಸೋನಲ್ ಮಂತೇರೋ ನಾಯಕಿಯಾಗಿ ಜೈದ್‌ಖಾನ್‌ಗೆ ಸಾಥ್ ಕೊಟ್ಟಿದ್ದಾರೆ. ದೇವರಾಜ್, ಸಪ್ನಾರಾಜ್, ಬರ್ಕತ್‌ಅಲಿ ಮುಂತಾದವರು ಪ್ರಧಾನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈಗಾಗಲೇ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟುಹಾಕಿರುವ ಬನಾರಸ್ ಚಿತ್ರ ನವೆಂಬರ್ 4ರಂದು ದೇಶಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ.



ಸಿನಿಪದಬಂಧ-027

ಆಜ್ಹಾದ್ ಜಿ. ಆಚಾರ್ಯ 6361429085



ಹೆಸರು ______________
ವಿಳಾಸ ______________
ದೂರವಾಣಿ ಸಂಖ್ಯೆ ______________

ಎಡದಿಂದ ಬಲಕ್ಕೆ

1. ನಿಖಿಲ್ ಮಂಜು ಲಿಂಗಯ್ಯ ನಿರ್ದೇಶನದಲ್ಲಿ ರಾಘವೇಂದ್ರ-ರಾಜಕುಮಾರ್ ಚಿತ್ರ(5)
3. _ _ _ _ _ ಬಳ್ಳಿಗೆ, ಮಗುವೊಂದು ಬೇಕು ಹೆಣ್ಣಿಗೆ (5)
6. _ _ _ ಹಮ್ಮೀರ, ಅಂಬರೀಶ್-ಸುಮನ್ ರಂಗನಾಥ್ ಅಭಿನಯದ ಚಿತ್ರ (3)
8. ಏಳು ಸುತ್ತಿನ ಕೋಟೆ ಚಿತ್ರದ ನಾಯಕಿ (3)
9. ಅರ್ಜುನ್ ಕುಮಾರ್ ನಿರ್ದೇಶನದಲ್ಲಿ ಲಿಕಿತ್ ಶೆಟ್ಟಿ ಅಭಿನಯದ ಚಿತ್ರ (9)
12. ವಾರೆನೋಟ ನೋಡೈತೆ... ಈ ಸುಪ್ರಸಿದ್ಧ ಗೀತೆಯನ್ನು ಒಳಗೊಂಡ ಚಿತ್ರ (3)
13. ಶಂಕರನಾಗ್-ಆರತಿ ಅಭಿನಯದ 1983ರ ಚಿತ್ರ ಹಿಂದಿರುಗಿದೆ (3)
15. ಟಿ. ಆರ್. ರಾಮಣ್ಣ ನಿರ್ದೇಶನದಲ್ಲಿ ವಿಷ್ಣು-ಮಂಜುಳಾ-ದ್ವಾರಕೀಶ್ ಚಿತ್ರ (5)
16. ಕೆ. ವಿ. ಜಯರಾಮ್ ನಿರ್ದೇಶನದಲ್ಲಿ ಅನಂತನಾಗ್-ಗೀತಾ ಅಭಿನಯದ ಚಿತ್ರ (5)

ಮೇಲಿನಿಂದ ಕೆಳಕ್ಕೆ

1. ಕಾಶಿನಾಥ್ ನಿರ್ದೇಶನದಲ್ಲಿ ಸುರೇಶ್ ಹೆಬ್ಳೀಕರ್ ಅಭಿನಯದ 1978ರ ಚಿತ್ರ (5)
2. ಎಸ್. ಮೋಹನ್ ನಿರ್ದೇಶನದಲ್ಲಿ ರವಿಚಂದ್ರನ್ ಅಭಿನಯದ 2012ರ ಚಿತ್ರ (4)
4. ಗೀತಪ್ರಿಯ ನಿರ್ದೇಶನದಲ್ಲಿ ಮಹಾಲಕ್ಷ್ಮಿ ಅಭಿನಯಿಸಿರುವ 1991ರ ಚಿತ್ರ (4)
5. ಅನಂತನಾಗ್-ಆರತಿ-ಅಂಬರೀಶ್ ಅಭಿನಯದ ಹಯವದನ ಎಂಬರ್ಥದ ಚಿತ್ರ (5)
7. ಸಾಧು ಕೋಕಿಲ ನಿರ್ದೇಶನದಲ್ಲಿ ಉಪೇಂದ್ರ-ಅಭಿರಾಮಿ ಅಭಿನಯದ ಚಿತ್ರ (5)
8. ಅನಂತನಾಗ್-ಶ್ರುತಿ-ಮಾಸ್ಟರ್ ಆನಂದ್ ಅಭಿನಯದ ಚಿತ್ರ (5)
10. ಆರಂಭ _ _ _ _ _ ಮನೆದೇವ್ರು ಸಿನಿಮಾದ ಪ್ರಸಿದ್ಧ ಗೀತೆ (5)
11. ಧನಂಜಯ್-ರಚಿತಾ ರಾಮ್ ಅಭಿನಯದ ನೂತನ ಚಲನಚಿತ್ರ (5)
12. ಗಣೇಶ್-ರೇಖಾ ಅಭಿನಯದ 2007ರ ಚಿತ್ರ ತಲೆಕೆಳಗಾಗಿದೆ (4)
14. ಪ್ರಶಾಂತ್ ಕುಮಾರ್ ನಿರ್ದೇಶನದಲ್ಲಿ ರಘು ಮುಖರ್ಜಿ-ಡೈಸಿ ಷಾ ಅಭಿನಯದ ಚಿತ್ರ (4)

ಸಿನಿ ಪದಬಂಧ 026ರ ಸರಿ ಉತ್ತರ

ಜ	ಗ	ಜ್ಯೋ	ತಿ	ಬ	ಸ	ವೇ	ಶ್ವ	ರ		ಗಂ
ಗ					ರಿ					ಧ
ವೇ				ಸೀ	ತಾ		ಪ್ರೇ		ಬಂ	ದ
ಒಂ	ದೇ	ರ	ಕ್ತ				ಮ			ಗು
ದು		ವಿ				ಚೋ	ಮ	ನ	ದು	ಡಿ
			ಡಿ				ಯಿ			
ಕಿ	ಲಾ	ಡಿ	ಜೋ	ಡಿ				ಮೀ		ಶು
ರ			ಲೇ				ಜ	ರಾ	ಲೇ	ಭ
ಗೂ	ಳಿ		ಭ		ರ	ಮ್ಯ				ಮಂ
ರಿ					ವಿ					ಗ
ನ		ಯಾ	ರಿ	ಗೆ	ಸಾ	ಲು	ತ್ತೆ	ಸಂ	ಬ	ಳ

ವಿಜೇತರು: ಶಿವನಂಜಪ್ಪ, ರಾಘವೇಂದ್ರನಗರ, ಮೈಸೂರು

ಲವ್‌ಲೀ ಗೆಟಪ್‌ನಲ್ಲಿ ವಸಿಷ್ಠಸಿಂಹ





ಪ್ರತಿಭಾವಂತ ನಟ ವಸಿಷ್ಠಸಿಂಹ ಅಭಿನಯದ ಬಹುನಿರೀಕ್ಷಿತ ಸಿನಿಮಾಗಳಲ್ಲೊಂದು ಲವ್‌ಲೀ. ಈ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದ್ದು ಈಗಾಗಲೇ ಮೊದಲ ಶೆಡ್ಯೂಲ್ ಮುಗಿಸಿರುವ ಚಿತ್ರತಂಡ ಸೆಕೆಂಡ್ ಶೆಡ್ಯೂಲ್ ಚಿತ್ರೀಕರಣದಲ್ಲಿ ಬ್ಯುಸಿಯಾಗಿದೆ. ನಾಗರಭಾವಿಯ ಕಿಂಗ್ಸ್‌ಕ್ಲಬ್‌ನಲ್ಲಿ 'ಲವ್‌ಲೀ' ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಇಲ್ಲಿ ಆಫೀಸ್‌ಸೆಟ್‌ನಲ್ಲಿ ನಡೆಯುತ್ತಿರುವ ಚಿತ್ರೀಕರಣದಲ್ಲಿ ನಾಯಕ ವಸಿಷ್ಠಸಿಂಹ, ಸಾಧು ಕೋಕಿಲಾ, ನಟಿ ಸಮೀಕ್ಷಾ, ಕಾಮಿಡಿ ಕಿಲಾಡಿಗಳು ಸೂರಜ್ ಇನ್ನಿತರರು ಪಾಲ್ಗೊಂಡಿದ್ದರು.

ಲವ್‌ಲೀ ಚಿತ್ರಕ್ಕೆ ಚೇತನ್ ಕೇಶವ್ ನಿರ್ದೇಶನವಿದೆ. ಇದೊಂದು ಕಮರ್ಷಿಯಲ್ ರೊಮ್ಯಾಂಟಿಕ್ ಲವ್‌ಸ್ಟೋರಿ ಆಗಿದ್ದು, ರೌಡಿಸಂ ಕಥಾಹಂದರವೂ ಚಿತ್ರದಲ್ಲಿದೆ. ವಸಿಷ್ಠಸಿಂಹ ಜೊತೆ ನಾಯಕಿಯಾಗಿ ಜಾರ್ಖಂಡ್ ಮೂಲದ ಸ್ಟೆಫಿ ಪಟೇಲ್ ನಟಿಸುತ್ತಿದ್ದು, ಕೊರಿಯನ್ ವೆಬ್‌ಸೀರೀಸ್ ಅಲ್ಲದೆ ತಮಿಳು, ಹಿಂದಿ ಸಿನಿಮಾಗಳಲ್ಲಿ ನಟಿಸಿರುವ ಸ್ಟೆಫಿ ಪಟೇಲ್ ಮೊದಲ ಬಾರಿಗೆ ಕನ್ನಡ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮಾಸ್ಟರ್ ಆನಂದ್ ಪುತ್ರಿ ವಂಶಿಕಾ ಕೂಡ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರವನ್ನು ಎಂ.ಆರ್.ರವೀಂದ್ರ ಕುಮಾರ್ ನಿರ್ಮಿಸುತ್ತಿದ್ದು, ಅಶ್ವಿನ್‌ಕೆಡಿ ಅವರ ಕ್ಯಾಮರಾ ವರ್ಕ್, ಹರೀಶ್ ಕೊಮ್ಮೆ ಅವರ ಸಂಕಲನ ಹಾಗೂ ಅನೂಪ್ ಸೀಳಿನ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಇದು ರನ್ನನ ಗದಾಯುದ್ಧವಲ್ಲ..!



ಬ್ಲ್ಯಾಕ್‌ಮ್ಯಾಜಿಕ್ ಅಥವಾ ವಾಮಾಚಾರ ಮನುಷ್ಯನ ಜೀವವನ್ನೇ ತೆಗೆಯಬಹುದು. ಇದರ ಬಗ್ಗೆ ಸಾಕಷ್ಟು ರಿಸರ್ಚ್ ಮಾಡಿರುವ ಶ್ರೀವತ್ಸ ಅವರು ಗದಾಯುದ್ಧ ಹೆಸರಿನ ಚಿತ್ರವೊಂದರ ಮೂಲಕ ಜನರಿಗೆ ಹೇಳಹೊರಟಿದ್ದಾರೆ. ಚಿತ್ರದ ನಾಯಕನಾಗಿ ಮರುಜನ್ಮ ತಳೆದ ಭೀಮ 'ಗದಾಯುದ್ಧ'ದ ಮೂಲಕವೇ ದುಷ್ಟ ವಾಮಾಚಾರಿಗಳನ್ನು ಹೇಗೆ ಸಂಹರಿಸುತ್ತಾನೆ ಎನ್ನುವ ಕಥೆ ಈ ಚಿತ್ರದಲ್ಲಿದೆ. ಬೆಳಗಾವಿ ಮೂಲದ ನಿತಿನ್ ಶಿರಗುರ್‌ಕರ್ ಅವರ ನಿರ್ಮಾಣದ ಈ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು, ಚಿತ್ರದಲ್ಲಿ ನಿರ್ಮಾಪಕರ ಪುತ್ರ ಸುಮಿತ್ ಅವರೇ ನಾಯಕನಾಗಿದ್ದು, ಧನ್ಯಪಾಟೀಲ್ ನಾಯಕಿ, ಡ್ಯಾನಿಕುಟ್ಟಪ್ಪ ವಾಮಾಚಾರಿಯ ಪಾತ್ರದಲ್ಲಿ ನಟಿಸಿದ್ದಾರೆ.

ನಿರ್ಮಾಪಕ ನಿತಿನ್ ಅವರಿಗೆ ಚಿಕ್ಕಂದಿನಿಂದ ಸಿನಿಮಾ ನೋಡೋ ಹುಚ್ಚಿತ್ತು. ಅವರ ಮಾತೃಭಾಷೆ ಮರಾಠಿಯಲ್ಲೇ ಸಾಕಷ್ಟು ಆಫರ್ ಬಂದರೂ, ನಾನು ಕನ್ನಡ ಚಿತ್ರವನ್ನೇ ಮಾಡಬೇಕೆಂದು 'ಗದಾಯುದ್ಧ' ಚಿತ್ರವನ್ನು ಐದು ಭಾಷೆಗಳಲ್ಲಿ ನಿರ್ಮಿಸಿದ್ದಾರೆ. ನಿರ್ದೇಶಕ ಶ್ರೀವತ್ಸ ಮಾತನಾಡಿ, ಪ್ರತಿದಿನ ನಡೆಯುವ ಆತ್ಮಹತ್ಯೆ ಪ್ರಕರಣಗಳ ಹಿಂದೆ ವಾಮಾಚಾರದ ಪ್ರೇರಣೆ ಇರುತ್ತದೆ. ಇದೇ ಕಂಟೆಂಟ್ ಇಟ್ಟುಕೊಂಡು ಈ ಸೈನ್ಸ್ ಫಿಕ್ಷನ್ ಕಥೆಯನ್ನು ಹೇಳಿದ್ದೇನೆ. ಹಿಂದೆ ನಡೆದ ಪೌರಾಣಿಕ ಘಟನೆ ಹಾಗೂ ಈಗಿನ ಕಥೆಯನ್ನಿಟ್ಟುಕೊಂಡು ಗದಾಯುದ್ಧ ಚಿತ್ರಮಾಡಿದ್ದೇನೆ ಮೊದಲು ನಾಯಕನ ಪಾತ್ರವನ್ನು ಚಿರಂಜೀವಿ ಸರ್ಜಾ ಅವರೇ ಮಾಡಬೇಕಿತ್ತು. ಅವರಿಗೆ ಪಾತ್ರ ಹೇಳಿ ಒಪ್ಪಿಸಿಯೂ ಆಗಿತ್ತು. ಚೆಕ್ ನೀಡಲೆಂದು ಅವರ ಮನೆಗೆ ಹೋದಾಗ ನಿರ್ಮಾಪಕರ ಜೊತೆಗಿದ್ದ ಸುಮಿತ್‌ರನ್ನೇ ನಾಯಕನನ್ನಾಗಿ ಮಾಡಿಸಿ, ನಾನು ಆಂಜನೇಯನ ಪಾತ್ರವನ್ನು ಸಂಭಾವನೆ ತೆಗೆದುಕೊಳ್ಳದೆ ಮಾಡುತ್ತೇನೆಂದು ಚೆಕ್ ವಾಪಸ್ ಮಾಡಿದ್ದರು. ಆ ಪಾತ್ರವನ್ನು ಗ್ರಾಫಿಕ್ಸ್‌ನಲ್ಲೇ ಮಾಡಿದ್ದೇವೆ. ಚಿತ್ರವೀಗ ಸೆನ್ಸಾರ್ ಹಂತದಲ್ಲಿದೆ ಎಂದು ಹೇಳಿದರು. ಐಶ್ವರ್ಯ ಸಿಂದೋಗಿ, ಸ್ಪರ್ಶರೇಖಾ, ಶರತ್ ಲೋಹಿತಾಶ್ವ ಯತಿರಾಜ್ ಅಲ್ಲದೆ ಸತ್ಯಜಿತ್, ಶಿವರಾಮಣ್ಣರ ಕೊನೇ ಚಿತ್ರವೂ ಹೌದು.

ಹುಣಸೂರಲ್ಲಿ ಜಿಟಿಟಿಸಿ ಕೇಂದ್ರ ಉದ್ಘಾಟನೆ

ದೇಶದಲ್ಲೇ ಕಡಿಮೆ ನಿರುದ್ಯೋಗವುಳ್ಳ ರಾಜ್ಯ ಕರ್ನಾಟಕ

ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಅಭಿಪ್ರಾಯ

ಹುಣಸೂರು, ಸೆ.29– ಇಡೀ ದೇಶದಲ್ಲೇ ಅತ್ಯಂತ ಕಡಿಮೆ ನಿರುದ್ಯೋಗ ಹೊಂದಿರುವ ರಾಜ್ಯವೆಂದರೆ ಕರ್ನಾಟಕ ಮಾತ್ರ. ಕಾಲಕ್ಕೆ ತಕ್ಕಂತೆ ನೀತಿಗಳನ್ನು ರೂಪಿಸಿಕೊಂಡು, ಹೊಸತನಕ್ಕೆ ತೆರೆದುಕೊಳ್ಳುತ್ತಿರುವುದರಿಂದ ಇದು ಸಾಧ್ಯವಾಗಿದೆ ಎಂದು ಉನ್ನತ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಅಭಿಪ್ರಾಯಪಟ್ಟರು.



ನಗರದ ಕೈಗಾರಿಕಾ ಪ್ರದೇಶದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ 8.5 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಸಂಸ್ಥೆ (ಜಿಟಿಟಿಸಿ) ಉದ್ಘಾಟಿಸಿ ಅವರು ಮಾತನಾಡಿದರು.

ಈ ಕೇಂದ್ರದಲ್ಲಿ ಪ್ರತಿ ವರ್ಷ ಎಸ್ಎಸ್ಎಲ್‌ಸಿ, ಪಿಯುಸಿ, ಐಟಿಐ ಮತ್ತು ಬಿಎ ವ್ಯಾಸಂಗ ಮಾಡಿದ 500 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುವುದು. ಅಲ್ಲದೇ ಗ್ರಾಮೀಣ ವಿದ್ಯಾರ್ಥಿಗಳಿಗೆ ಆಧುನಿಕ ಕೌಶಲ್ಯಗಳಿರುವ ತರಬೇತಿ ನೀಡಿ, ಅವರನ್ನು ಉದ್ಯೋಗಗಳಿಗೆ ಅರ್ಹರನ್ನಾಗಿ ಮಾಡಲಾಗುವುದು. ಡಿಪ್ಲೊಮಾ, ಐಟಿಐ, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಲಿತವರು ಕೂಡ ತರಬೇತಿ ಪಡೆಯಬಹುದು. ಇದ್ಯಾವುದಕ್ಕೂ ವಿದ್ಯಾರ್ಥಿಗಳ ಬಳಿ ಸರ್ಕಾರ ನಯಾಪೈಸೆ ಶುಲ್ಕ ತೆಗೆದುಕೊಳ್ಳದೆ, ಸಂಪೂರ್ಣ ಉಚಿತವಾಗಿ ತರಬೇತಿ ನೀಡಲಿದೆ ಎಂದರು.

ಟೊಯೋಟಾ ಸೇರಿದಂತೆ ವಿವಿಧ ಕಂಪನಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಈ ಕೇಂದ್ರದಲ್ಲಿ ಈಗಾಗಲೇ ಫಿಟ್ಟರ್, ವೆಲ್ಡರ್ ಸೇರಿದಂತೆ ವಿವಿಧ ತರಬೇತಿಗಳನ್ನು ನೀಡಲಾಗುತ್ತಿದೆ. ಇವುಗಳಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿಗಳಿವೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಕೋರ್ಸ್‌ಗಳನ್ನು ಆರಂಭಿಸಲಾಗುವುದು. ತರಬೇತಿ ಪಡೆದ ಪ್ರತಿಯೊಬ್ಬರಿಗೂ ಉದ್ಯೋಗ ಸಿಗಲಿದೆ ಎಂದರು.

ಯುವಜನರ ಸಬಲೀಕರಣಕ್ಕಾಗಿ ವಿಶ್ವಕರ್ಮ ದಿನಾಚರಣೆಯನ್ನು 'ಐಟಿಐ ಗ್ರ್ಯಾಜುಯೇಷನ್ ಡೇ' ಮಾಡಿ ಪದವಿ ನೀಡಲಾಗುತ್ತಿದೆ. ಕರ್ನಾಟಕದ ಈ ಮಾದರಿಯನ್ನು ತಮಿಳುನಾಡು, ಅಸ್ಸಾಂ, ಉತ್ತರ ಪ್ರದೇಶ, ಬಹುತೇಕ ರಾಜ್ಯಗಳು ಅನುಕರಿಸುತ್ತಿವೆ ಎಂದರು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಕೆ.ಆರ್.ನಗರ ಸುತ್ತಮುತ್ತಲಿನ ತಾಲೂಕುಗಳ ವಿದ್ಯಾವಂತ ಯುವ ಜನರಿಗಾಗಿ ಕೌಶಲ್ಯಾಧಾರಿತ ತರಬೇತಿ ನೀಡಲು ಈ ಜಿಟಿಟಿಸಿ ಅನುಕೂಲವಾಗಲಿದೆ. ಇದು ಹುಣಸೂರಿನಲ್ಲಿ ನಿರ್ಮಾಣವಾಗಲು ಮಾಜಿ ಸಿಎಂ ಸಿದ್ದರಾಮಯ್ಯ ಕೊಡುಗೆ, ಶಾಸಕ ಹೆಚ್.ಪಿ.ಮಂಜುನಾಥ್ ಪರಿಶ್ರಮವೇ ಕಾರಣ. ಆದರೆ ನಮ್ಮ ಅವಧಿಯಲ್ಲಿ ಇದು ಉದ್ಘಾಟನೆಗೊಳ್ಳುತ್ತಿದೆ ಎಂದರು.

> **6** ರಾಜ್ಯಾದ್ಯಂತ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ 5 ಸಾವಿರ ಕೋಟಿ ರೂ. ವೆಚ್ಚದಲ್ಲಿ 150 ಐಟಿಐಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಉಳಿದ 30 ಐಟಿಐಗಳನ್ನು ಈ ವರ್ಷ ಅಭಿವೃದ್ಧಿಪಡಿಸಲಾಗುವುದು. ಪಾಲಿಟೆಕ್ನಿಕ್‌ಗಳಲ್ಲಿ ಶೇ.100ರಷ್ಟು ದಾಖಲಾತಿ ಆಗುವಂತೆ ವಿದ್ಯಾರ್ಥಿಗಳನ್ನು ಆಕರ್ಷಿಸಲಾಗುತ್ತಿದೆ. ಜಿಟಿಟಿಸಿಗಳಿಗಂತೂ ಇತ್ತೀಚಿನ ವರ್ಷಗಳಲ್ಲಿ ಭಾರೀ ಬೇಡಿಕೆ ಸೃಷ್ಟಿಯಾಗುತ್ತಿದೆ.
> - ಡಾ.ಸಿ.ಎನ್.ಅಶ್ವತ್ಥನಾರಾಯಣ್, ಉನ್ನತ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು.

ಅನ್ಯಥಾ ಭಾವಿಸಬೇಡಿ: ಶಿಷ್ಟಾಚಾರದ ಪ್ರಕಾರ ಕೇಂದ್ರದ ಉದ್ಘಾಟನೆಗೆ ಬರಬೇಕಿದ್ದ ಸಚಿವರು ಭದ್ರತಾ ಸಿಬ್ಬಂದಿ ತಪ್ಪು ಮಾಹಿತಿಯಿಂದ ಮಹಿಳಾ ಪದವಿ ಕಾಲೇಜಿಗೆ ಹೋಗಿ ವಾಪಾಸ್ ಬರಬೇಕಾಯಿತು. ಆದರೆ ಇದನ್ನು ಶಾಸಕ ಮಂಜಣ್ಣನವರು ಅನ್ಯಥಾ ಭಾವಿಸಬಾರದು. ನನಗೆ ಮೈಸೂರಿನಲ್ಲಿ ಯುವ ದಸರಾದ ಕಾರ್ಯಕ್ರಮವಿದ್ದರೂ, ಸಚಿವರು ಹುಣಸೂರಿಗೆ ಬರುತ್ತಿದ್ದಾರೆ ಎಂಬ ಉದ್ದೇಶದಿಂದ ನಾನು ಕಾರ್ಯಕ್ರಮಕ್ಕೆ ಬಂದಿದ್ದೇನೆ. ನಾನು ಸಚಿವರಿಗೆ ಯಾವುದೇ ಮಾರ್ಗ ಬದಲಾವಣೆ ಮಾಡಿಲ್ಲ. ನಮ್ಮ ಕೆಲಸವಾಗಲು ಸಚಿವರಿಗಾಗಿ ಒಂದು ಗಂಟೆ ಕಾದರೂ ತಪ್ಪಿಲ್ಲ. ಆದರೆ ವಿನಾಕಾರಣ ತಪ್ಪು ಗ್ರಹಿಕೆ ಮಾಡಬಾರದು ಎಂದರು.

ಶಾಸಕ ಹೆಚ್‌ಪಿಎಂ ಬೇಸರ: ಇದಕ್ಕೂ ಮುನ್ನಾ ಮಧ್ಯಾಹ್ನ 3 ಗಂಟೆಗೆ ನಿಗದಿಯಾಗಿದ್ದ ಕಾರ್ಯಕ್ರಮಕ್ಕಾಗಿ 1 ಗಂಟೆಗೂ ಹೆಚ್ಚು ಕಾಲ ಶಾಸಕ ಹೆಚ್.ಪಿ.ಮಂಜುನಾಥ್ ಕಾಯ್ದರಾದರೂ, ಸಚಿವರು ಈ ಕಾರ್ಯಕ್ರಮ ಬಿಟ್ಟು ಬೇರೆ ಕಡೆ ಹೋದ ಕಾರಣ ಹೂಗುಚ್ಛ ಬಿಸಾಡಿ ಬೇಸರದಿಂದ ಹೊರ ನಡೆದರು.

ಕಾರ್ಯಕ್ರಮದಲ್ಲಿ ಹುಡಾ ಅಧ್ಯಕ್ಷ ಗಣೇಶ್ ಕುಮಾರ್‌ಸ್ವಾಮಿ, ತಾಲೂಕು ನಾಯಕರ ಸಂಘದ ಅಧ್ಯಕ್ಷ ಅಣ್ಣಯ್ಯ ನಾಯ್ಕ, ತಾಲೂಕು ಬಿಜೆಪಿ ಅಧ್ಯಕ್ಷ ನಾಗಣ್ಣಗೌಡ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವ್ಯವಸ್ಥಾಪಕ ನಿರ್ದೇಶಕ ಹೆಚ್.ರಾಘವೇಂದ್ರ ಸೇರಿದಂತೆ ಇನ್ನಿತರರಿದ್ದರು.

ಚಿರತೆ ದಾಳಿಗೆ ಕರು ಬಲಿ



ಹನಗೋಡು, ಸೆ.29– ಚಿರತೆ ದಾಳಿಗೆ ಕರು ಬಲಿಯಾಗಿರುವ ಘಟನೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಂಚಿನ ಹೊಸ ಪೆಂಜಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹದೇವಚಾರ್ ಅವರಿಗೆ ಸೇರಿದ ಕರು ಸಾವನ್ನಪ್ಪಿರುವುದು. ಕೊಟ್ಟಿಗೆಯಲ್ಲಿ ಕಟ್ಟಿದ್ದ ಕರು ಮೇಲೆ ರಾತ್ರಿ ವೇಳೆ ಚಿರತೆ ದಾಳಿ ನಡೆಸಿ ಕೊಂದು ಎಳೆದೊಯ್ಯುತ್ತಿದ್ದನ್ನು ಗಮನಿಸಿದ ಮಹದೇವಚಾರ್ ಹಾಗೂ ಬೈಕ್ ಸವಾರರು ಕೂಗಾಡಿದ್ದರಿಂದ ಚಿರತೆ ಕರು ಬಿಟ್ಟು ಕಾಡಿನತ್ತ ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿ ದ್ವಾರಕನಾಥ್ ಹಾಗೂ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೇ ಚಿರತೆ ಸೆರೆ ಹಿಡಿಯಲು ಹುಣಸೂರು ಪ್ರಾದೇಶಿಕ ಅರಣ್ಯ ವಲಯದ ವತಿಯಿಂದ ಬೋನ್ ಇರಿಸಿ, ಚಿರತೆ ಹಿಡಿಯುವ ಭರವಸೆ ನೀಡಿದ್ದಾರೆ.

ಕೋಟೆಯಲ್ಲಿ ಅದ್ದೂರಿ 'ಗ್ರಾಮೀಣ ದಸರಾ'

ಹೆಚ್.ಡಿ.ಕೋಟೆ, ಸೆ.29– ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಗ್ರಾಮೀಣ ದಸರಾ ಪಟ್ಟಣದಲ್ಲಿ ಅದ್ದೂರಿಯಾಗಿ ನಡೆಯಿತು.

ಪಟ್ಟಣದ ವರದರಾಜಸ್ವಾಮಿ ದೇವಾಲಯದ ಆವರಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಗಿರಿಜನ ಹೋರಾಟಗಾರ್ತಿ ಸೋಮಮ್ಮ, ತಹಸೀಲ್ದಾರ್ ರತ್ನಂಬಿಕಾ ಹಾಗೂ ವಿವಿಧ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ನಂದಿ ಕಂಬಕ್ಕೆ ಪೂಜೆ ಸಲ್ಲಿಸುವ ಮೂಲಕ ಗ್ರಾಮೀಣ ದಸರಾಕ್ಕೆ ಚಾಲನೆ ನೀಡಲಾಯಿತು.

ಬಳಿಕ ಬೆಳ್ಳಿರಥದಲ್ಲಿ ತಾಯಿ ಚಾಮುಂಡೇಶ್ವರಿಯನ್ನು ಪ್ರತಿಷ್ಠಾಪಿಸಿ ಮಂಗಳವಾದ್ಯ, ಆಕರ್ಷಕ ಜೋಡಿ ಎತ್ತುಗಳು, ವೀರಗಾಸೆ, ಕಂಸಾಳೆ, ವಿವಿಧ ಸ್ತಬ್ಧಚಿತ್ರಗಳು, ಬುಡಕಟ್ಟು ಸಮುದಾಯದ ನೃತ್ಯ, ವಿವಿಧ ಕಲಾ ತಂಡಗಳ ಮೂಲಕ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು.

ಬಳಿಕ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ ವೇದಿಕೆ ಕಾರ್ಯಕ್ರಮವನ್ನು ಗಿರಿಜನ ಹೋರಾಟಗಾರ್ತಿ ಸೋಮಮ್ಮ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಈ ಬಾರಿ ಮೈಸೂರು ದಸರಾವನ್ನು ಆದಿವಾಸಿ ಮಹಿಳೆ ರಾಷ್ಟ್ರಪತಿ ದ್ರೌಪದಿಮುರ್ಮು ಉದ್ಘಾಟಿಸಿರುವುದು ಈ ನಾಡಿಗೆ ಸಂದ ಗೌರವ. ಅದರಂತೆ



ತಾಲೂಕಿನಲ್ಲಿ ಗಿರಿಜನರ ಹೋರಾಟಗಾರ್ತಿ ಸೋಮಮ್ಮ ಗ್ರಾಮೀಣ ದಸರಾಕ್ಕೆ ಚಾಲನೆ ಕೊಟ್ಟಿರುವುದು ತಾಲೂಕಿಗೆ ಹೆಮ್ಮೆ ತರುವ ವಿಚಾರ ಎಂದರು.

ಸೋಮಮ್ಮ ಅವರು ನಿರಂತರವಾಗಿ ಆದಿವಾಸಿಗಳ ಪರ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಅವರು ಉನ್ನತ ಮಟ್ಟದಲ್ಲಿ ಬೆಳೆಯಲಿ ಎಂದು ಶುಭ ಕೋರಿದರು. ಗ್ರಾಮೀಣ ದಸರಾ ಅಂಗವಾಗಿ ರಕ್ತದಾನ ಶಿಬಿರ, ಆರೋಗ್ಯ ಮೇಳ, ಆಹಾರ ಮೇಳ ಹಾಗೂ ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಬಗ್ಗೆ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರತ್ನಾಂಬಿಕಾ, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಇಓ ರಾಜೇಶ್ ಜೆರಾಲ್ಡ್, ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ನಾರಾಯಣಸ್ವಾಮಿ, ಬಿಇಓ ಉದಯಕುಮಾರ್, ಕೃಷಿ ಇಲಾಖೆ ಎ.ಡಿ ರಂಗಸ್ವಾಮಿ, ರೇಷ್ಮೆ ಇಲಾಖೆ ಮಂಜುನಾಥ್, ತೋಟಗಾರಿಕೆ ಇಲಾಖೆ ಶ್ರೀಧರ ಮೂರ್ತಿ, ಮೀನುಗಾರಿಕೆ ಇಲಾಖೆ ರೇಣುಕಾಸ್ವಾಮಿ, ಪುರಸಭಾ ಮುಖ್ಯ ಅಧಿಕಾರಿ ಸುರೇಶ್, ಸಿಡಿಪಿಓ ಆಶಾ, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಶಶಿಕಲಾ, ಕೆಎಸ್ಆರ್‌ಟಿಸಿ ಮ್ಯಾನೇಜರ್ ತ್ಯಾಗರಾಜ್, ಜಿಪಂ ಮಾಜಿ ಸದಸ್ಯ ಹೆಚ್.ಸಿ.ಮಂಜುನಾಥ್, ಬಸವರಾಜ್, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ, ಪುರಸಭಾ ಅಧ್ಯಕ್ಷೆ ಅನಿತಾ, ಸದಸ್ಯರಾದ ಶಾಂತಮ್ಮ, ಸುಹಾಸಿನಿ, ಎಚ್.ಸಿ.ನರಸಿಂಹಮೂರ್ತಿ, ಮಧು, ಪ್ರೇಮ್ ಸಾಗರ್ ಇನ್ನಿತರರಿದ್ದರು.

ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು

ತಿ.ನರಸೀಪುರ, ಸೆ.29–ಮನೆ ಬಾಗಿಲು ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ತಿ.ನರಸೀಪುರ ತಾಲೂಕು ಆಲಗೂಡು ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಶಾಂತಕುಮಾರ್(29) ಎಂಬುವರು ಪತ್ನಿ ಸಮೇತ ಪಕ್ಕದ ಬೀದಿಯಲ್ಲಿರುವ ಅತ್ತೆಯ ಮನೆಗೆ ಸೆ.25ರಂದು ರಾತ್ರಿ ತೆರಳಿದ್ದು, ಮರುದಿನ ಹಿಂತಿರುಗಿದಾಗ ಮನೆಯ ಬೀಗ ಮುರಿದಿರುವುದು ಕಂಡು ಬಂದಿದೆ. ಖದೀಮರು 50 ಸಾವಿರ ರೂ. ನಗದು, ಚಿನ್ನ ಹಾಗೂ ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ತಿ.ನರಸೀಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ

ಶ್ರೀಕಂಠೇಶ್ವರನಿಗೆ ಸಚಿವ ಎಸ್‌ಟಿಎಸ್ ವಿಶೇಷ ಪೂಜೆ



ನಂಜನಗೂಡು, ಸೆ.29– ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಸಂಸದ ಪ್ರತಾಪ್ ಸಿಂಹ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು.

ಸಚಿವ ಸೋಮಶೇಖರ್ ಮಾತನಾಡಿ, ಮೈಸೂರು ದಸರಾ ಹಿನ್ನೆಲೆಯಲ್ಲಿ ಶ್ರೀನಂಜುಂಡೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದ್ದು, ಯಾವುದೇ ಅಡೆತಡೆಯಾಗದಂತೆ ಮೈಸೂರು ದಸರಾ ನಡೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ದಸರಾಕ್ಕೆ ಆಗಮಿಸುವರಿಗೆ ದೇವರು ಒಳ್ಳೆಯದನ್ನು ಮಾಡಲಿ ಎಂದು ಬೇಡಿಕೊಂಡಿದ್ದೇನೆ ಎಂದರು.

ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



ತಿ.ನರಸೀಪುರ, ಸೆ.29– ಕ್ಷೇತ್ರ ವ್ಯಾಪ್ತಿಯ ಹಳ್ಳಿಗಳಿಗೆ ಮೂಲ ಸೌಕರ್ಯ ಒದಗಿಸುವ ಮೂಲಕ ಮತದಾರರ ಋಣ ತೀರಿಸುತ್ತೇನೆ ಎಂದು ಶಾಸಕ ಎಂ. ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ನೀಲಸೊಗೆ ಗ್ರಾಮದಲ್ಲಿ ಕೆಆರ್‌ಐಡಿಎಲ್‌ನ 20 ಲಕ್ಷ ರೂ. ವೆಚ್ಚದ ಸಿಸಿ ಚರಂಡಿ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ವಿವಿಧ ಯೋಜನೆಗಳ ಮೂಲಕ ಸಾಕಷ್ಟು ಅನುದಾನ ನೀಡುತ್ತಿದ್ದು, ಪ್ರತಿಯೊಂದು ಹಳ್ಳಿಯಲ್ಲಿ ಸಿಸಿ ರಸ್ತೆ, ಶುದ್ಧ ಕುಡಿಯುವ ನೀರು, ಆಶ್ರಯ ಮನೆ, ಶೌಚಾಲಯ, ಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ, ನರೇಗಾ ಯೋಜನೆಯಡಿ ಉದ್ಯೋಗ ಸೇರಿದಂತೆ ಮೂಲ ಸೌಲಭ್ಯಗಳನ್ನು ಕಲ್ಪಿಸಿ, ಜನರ ಆರ್ಥಿಕ ಮಟ್ಟ ಸುಧಾರಿಸಲಾಗುತ್ತಿದೆ ಎಂದರು.

ಈ ವೇಳೆ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಯುವ ಜೆಡಿಎಸ್ ತಾಲೂಕು ಅಧ್ಯಕ್ಷ ಮಹೇಶ್, ಮಾದಾಪುರ ಗ್ರಾಪಂ ಅಧ್ಯಕ್ಷೆ ನಳಿನ, ಸದಸ್ಯರಾದ ಶೇಖರಪ್ಪ, ರವಿಕುಮಾರ್, ಡೈರಿ ನಂಜುಂಡಸ್ವಾಮಿ, ಸಿದ್ದರಾಜು, ಕೃಷ್ಣ, ಮಹೇಶ್, ಬಸವರಾಜ್, ಮೂಗೂರು ಶಿವಮೂರ್ತಿ, ಪಿಡಿಓ ಕೆಂಪೇಗೌಡ ಮತ್ತಿತರಿದ್ದರು.

ಕೂಡ್ಲಪುರ ಪಿಎಸಿಎಸ್‌ಗೆ 2.90 ಲಕ್ಷ ರೂ. ಲಾಭ



ಮಲ್ಲುಂಡಿ, ಸೆ.29– ಸರ್ವ ಸದಸ್ಯರ ಸಹಕಾರದಿಂದ ಕೂಡ್ಲಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಮಾರಶೆಟ್ಟಿ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ಸಂಘ 2.90 ಲಕ್ಷ ರೂ. ಲಾಭ ಗಳಿಸಿದೆ. ಸದಸ್ಯರು ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸಿದರೆ ಇನ್ನೂ ಹೆಚ್ಚಿನ ಲಾಭ ಕಾಣಲು ಸಾಧ್ಯ. ಪ್ರತಿಯೊಬ್ಬರೂ ಸಹಕಾರ ಸಂಘದಲ್ಲಿ ಷೇರುದಾರರಾಗಿ ಸಂಘದಲ್ಲಿ ಸಿಗುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ನಿರ್ದೇಶಕರಾದ ಸಿದ್ದಶೆಟ್ಟಿ, ಕೆ.ಬಿ.ಶಿವರಾಜ್, ಕೆ.ಬಿ.ನಾಗರಾಜ್, ಶಿವಣ್ಣ, ಪುಟ್ಟಸಿದ್ದಮ್ಮ, ಸಿಇಓ ಮಹೇಶ್, ಗುಮಾಸ್ತ ಮಹೇಶ್ ಸೇರಿದಂತೆ ಇತರರಿದ್ದರು.

ಜೆಡಿಎಸ್‌ನಿಂದ ಪಕ್ಷದ ಮಾಜಿ ಅಧ್ಯಕ್ಷ ನಾಗರಾಜು ಅಮಾನತು

ಹೆಚ್.ಡಿ.ಕೋಟೆ, ಸೆ.29– ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜು ಅವರನ್ನು ಪಕ್ಷದಿಂದ ಅಮಾನತುಗೊಳಿಸಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಜಿಲ್ಲಾ ಅಧ್ಯಕ್ಷರು, ಮುಖಂಡ ಕೆ.ಎಂ.ಕೃಷ್ಣನಾಯಕ ಪಕ್ಷದ ಪರ ಮಾಡಿರುವ ಅನೇಕ ಕಾರ್ಯಕ್ರಮಗಳು ಸಮಂಜಸವಾಗಿದ್ದರೂ, ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜು ಅವರು ಪಕ್ಷದ ಹಿತದೃಷ್ಟಿಯಿಂದ ತಾವು ನಡೆದುಕೊಂಡ ರೀತಿ ಪಕ್ಷದ ನಿಯಮಾವಳಿಗಳಿಗೆ ಮತ್ತು ಪಕ್ಷದ ತಾಲೂಕು ಅಧ್ಯಕ್ಷರ ಗೌರವಕ್ಕೆ ಧಕ್ಕೆ ಉಂಟು ಮಾಡಿರುವುದು ಕಂಡು ಬಂದಿರುವುದರಿಂದ ವರಿಷ್ಠರ ಸೂಚನೆ ಮೇರೆಗೆ ಮುಂದಿನ ಆದೇಶದವರೆಗೆ ಪಕ್ಷದಿಂದ ಅಮಾನತು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಪೌರಕಾರ್ಮಿಕರ ಶ್ರಮಕ್ಕೆ ಬೆಲೆ ಕಟ್ಟಲಾಗದು

ಪೌರಕಾರ್ಮಿಕರ ದಿನಾಚರಣೆಯಲ್ಲಿ ಪುರಸಭಾಧ್ಯಕ್ಷ ಎಸ್.ಮದನ್‌ರಾಜ್



ತಿ.ನರಸೀಪುರದ ಸಿಡಿಎಸ್ ಭವನದಲ್ಲಿ ಆಯೋಜಿಸಿದ್ದ ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.29– ಪೌರ ಕಾರ್ಮಿಕರು ಕಾಯಕ ಯೋಗಿಗಳಾಗಿದ್ದು, ಊರನ್ನು ಸ್ವಚ್ಛವಾಗಿಡುವ ಅವರ ಶ್ರಮಕ್ಕೆ ಬೆಲೆ ಕಟ್ಟಲಾಗದು ಎಂದು ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.

ಪಟ್ಟಣದ ಸಿಡಿಎಸ್ ಭವನದಲ್ಲಿ ಪುರಸಭೆಯಿಂದ ಆಯೋಜಿಸಿದ್ದ ಪೌರ ಕಾರ್ಮಿಕರ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೇಶ ಕಾಯುವ ಸೈನಿಕರು ಹಾಗೂ ದೇಶ ಸ್ವಚ್ಛಗೊಳಿಸುವ ಪೌರ ಕಾರ್ಮಿಕರು ಇಬ್ಬರೂ ದೇಶಕ್ಕೆ ತಮ್ಮದೇ ಆದ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹೀಗಾಗಿ ನಾವು ಅವರನ್ನು ಗೌರವಿಸಬೇಕು. ನಾವು ವಾಸಿಸುವ ಸುತ್ತಮುತ್ತಲ ಪರಿಸರ ಸ್ವಚ್ಛವಾಗಿಟ್ಟುಕೊಂಡರೆ ಇಡೀ ನಗರವೇ ಶುಚಿತ್ವದಿಂದ ಇರಲಿದೆ. ಆ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸಬೇಕು. ಗಾಳಿ, ಮಳೆ, ಬಿಸಿಲು, ಚಳಿ ಎನ್ನದೆ, ನಿತ್ಯ ಸ್ವಚ್ಛತಾ ಕಾರ್ಯ ಕೈಗೊಳ್ಳುವ ಪೌರಕಾರ್ಮಿಕರು ನಿಜವಾದ ಸ್ವಚ್ಛತಾ ರೂವಾರಿಗಳು ಎಂದರು.

ನಾನು ಅಧಿಕಾರದಲ್ಲಿರಲೀ ಅಥವಾ ಇಲ್ಲದಿರಲೀ ಪ್ರತಿ ವರ್ಷ ನಡೆಯುವ ಪೌರ ಕಾರ್ಮಿಕರ ದಿನಾಚರಣೆಗೆ 10 ಸಾವಿರ ರೂ. ನೀಡುತ್ತೇನೆ. ಪೌರಕಾರ್ಮಿಕರ ಸೇವಾ ಕಾರ್ಯಕ್ಕೆ ನನ್ನ ಸಹಕಾರ ಇರುತ್ತದೆ ಎಂದರು.

ಚಿತ್ರನಟರೂ ಆದ ಪುರಸಭಾ ಸದಸ್ಯ ಅರ್ಜುನ್ ಮಾತನಾಡಿ, ನಗರದ ಸ್ವಚ್ಛತೆ ಕಾಪಾಡುವಲ್ಲಿ ಪೌರ ಕಾರ್ಮಿಕರ ಕಾರ್ಯ ಮಹತ್ವವಾದದು. ಪೌರ ಕಾರ್ಮಿಕರ ದಿನಾಚರಣೆ ಕೇವಲ ಕಣ್ಣೊರೆಸುವ ಕಾರ್ಯಕ್ರಮವಾಗಬಾರದು. ಇಂದಿಗೂ ಪೌರಕಾರ್ಮಿಕರಿಗೆ ಮನೆಗಳಲ್ಲಿ ಒಂದು ಲೋಟ ನೀರು ಕೊಡದಂತಹ ಅನಿಷ್ಟ ಪದ್ಧತಿ ಜಾರಿಯಲ್ಲಿದೆ. ಈ ಪದ್ಧತಿ ಎಂದು ತೊಲಗುತ್ತದೋ ಅಂದು ಪೌರ ಕಾರ್ಮಿಕರ ದಿನಾಚರಣೆ ಸಾರ್ಥಕತೆ ಪಡೆಯುತ್ತದೆ ಎಂದರು.

ಪೌರ ಕಾರ್ಮಿಕರು ಸ್ವಾಭಿಮಾನಿಯಾಗಿ ಬದುಕಬೇಕು. ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಸಮಾಜದಲ್ಲಿ ಸತ್ಪ್ರಜೆಗಳನ್ನಾಗಿ ಮಾಡಲು ಮುಂದಾಗಬೇಕು ಎಂದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ. ಮರಯ್ಯ ಮಾತನಾಡಿ, ಕಾರ್ಮಿಕರ ಸಮುದಾಯ ಭವನ ನಿರ್ಮಾಣಕ್ಕೆ ಪುರಸಭೆಯಿಂದ ಗುರ್ತಿಸಿರುವ ನಿವೇಶನವನ್ನು ಅಧಿಕಾರಿಗಳು ಆದಷ್ಟು ಬೇಗ ಮಂಜೂರು ಮಾಡಿಕೊಡಬೇಕು. ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ವೇತನ ನೀಡಬೇಕು. ಅವರ ಸಮಸ್ಯೆಗೆ ಯಾವುದೇ ಸಮಯದಲ್ಲೂ ಅಧಿಕಾರಿಗಳು ಹಾಗೂ ಸದಸ್ಯರು ಬೆಂಗಾವಲಾಗಿ ನಿಲ್ಲಬೇಕು ಎಂದರು. ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಸಮವಸ್ತ್ರ ನೀಡುವ ಜೊತೆಗೆ ವಿವಿಧ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸೈಯದ್, ಉಪಾಧ್ಯಕ್ಷೆ ನಾಗರತ್ನ, ಮುಖ್ಯಾಧಿಕಾರಿ ಬಸವರಾಜು, ಪರಿಸರ ಅಭಿಯಂತರೆ ಲೋಕೇಶ್ವರಿ, ಸದಸ್ಯರಾದ ಬಾದಾಮಿ ಮಂಜು, ಎಸ್.ಕೆ.ಕಿರಣ್, ಎಲ್.ಮಂಜುನಾಥ್, ಟಿ.ಎಂ.ನಂಜುಂಡಸ್ವಾಮಿ, ಸಿಸ್ಟಂ ಸಿದ್ದು, ರೂಪಾ, ನಾಗರಾಜು, ನಾಮ ನಿರ್ದೇಶಕರಾದ ಗಣೇಶ್, ಎನ್. ಲೋಕೇಶ್, ಅಕ್ಕಿನಂಜುಂಡಸ್ವಾಮಿ, ಚಿಕ್ಕ ಮಹದೇವ, ಮಾಜಿ ಪುರಸಭಾ ಸದಸ್ಯ ರಾಘವೇಂದ್ರ, ಶ್ರೀಕಂಠ, ಹೇಮಂತ್, ಸೋಮಶೇಖರ್, ಸ್ವಾಮಿ, ಸಿ.ಮಹದೇವ, ಆಲಗೂಡು ರಾಜು, ಲೆಕ್ಕಾಧಿಕಾರಿ ವಿನಯ್, ಸಮುದಾಯ ಸಂಘಟಕ ಮಹಾದೇವ, ರಾಜೇಂದ್ರ ಕಂದಾಯಾಧಿಕಾರಿ ವೆಂಕಟೇಶ್, ಇಂಜಿನಿಯರ್ ಸಿದ್ದಯ್ಯ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ತೋತಾಪುರಿ–1 (ಕ): ರಾ.10.30ಕ್ಕೆ.
ಸ್ಕ್ರೀನ್ 2	ವಿಕ್ರಂ ವೇದಾ (ಹಿಂ): ಬೆ.10.30ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ, ನಾನೇ ವರುವೇನ್ (ತ): ಮ.1.30ಕ್ಕೆ, ಗುರುಶಿಷ್ಯರು (ಕ): ಸಂ.4ಕ್ಕೆ.
ಸ್ಕ್ರೀನ್ 3	ಗುರುಶಿಷ್ಯರು (ಕ): ಬೆ.10.05ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಮ.1.10ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.20ಕ್ಕೆ, ತೋತಾಪುರಿ–1(ಕ): ರಾ.7.20ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಮ.3.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಪೊನ್ನಿಯನ್ ಸೆಲ್ವನ್–1(ತ): ಬೆ.9.55ಕ್ಕೆ, ತೋತಾಪುರಿ –1(ಕ): ಮ.1.15ಕ್ಕೆ, ರಾ.7.10ಕ್ಕೆ, ಕಾಂತಾರ (ಕ): ಸಂ.4.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಪೊನ್ನಿಯನ್ ಸೆಲ್ವನ್–1(ತ): ರಾ.10.20ಕ್ಕೆ.
ಸ್ಕ್ರೀನ್ 3	ವಿಕ್ರಮ್ ವೇದಾ (ಹಿಂ): ರಾ.10.30ಕ್ಕೆ.
ಸ್ಕ್ರೀನ್ 4	ಗುರು ಶಿಷ್ಯರು (ಕ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸ್ವಚ್ಛ ಕರ್ನಾಟಕ (ಕ): ಬೆ.11ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ಸಂ.4.30ಕ್ಕೆ, ಕೊಟ್ಟು (ಮ): ರಾ.7.45ಕ್ಕೆ
ಸ್ಕ್ರೀನ್ 2	ಗುರುಶಿಷ್ಯರು (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.45ಕ್ಕೆ.
ಸ್ಕ್ರೀನ್ 3	ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ.
ಸ್ಕ್ರೀನ್ 4	ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಗುರುಶಿಷ್ಯರು (ಕ): ಸಂ.4.35ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.11.30ಕ್ಕೆ, ಮ.3.50ಕ್ಕೆ, ಸಂ.6.15ಕ್ಕೆ, ಮಾನ್ಸೂನ್ ರಾಗ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಮ.12ಕ್ಕೆ, ಮ.2.45ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ವೆಂದು ತನಿಂದದು ಕಾಡು (ತ): ಬೆ.10.05ಕ್ಕೆ, ಬೆ.11.30ಕ್ಕೆ, ಮ.3.05ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ವೇರ್ ದಿ ಕ್ರೌಡಾಡ್ಸ್ ಸಿಂಗ್ (ಇಂ): ಮ.1.40ಕ್ಕೆ, ರಾ.9.45ಕ್ಕೆ, ನೇನು ಮೀಕು ಭಾಗ ಕಾವಾಲ್ಸಿನವಾಡಿನಿ (ತೆ): ರಾ.7.30ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ಸಂ.4.25ಕ್ಕೆ, ರಾ.10.20ಕ್ಕೆ, ಜಹಾನ್ ಚಾರ್ ಯಾರ್ (ಹಿಂ): ಮ.1.05ಕ್ಕೆ, ಸಿಯಾ (ಹಿಂ): ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ನಾನೇ ಒರುವೇನ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಿಎಸ್–1 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟ್ರಿಗರ್ (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ರಾಜಾ ರಾಣಿ ರೋರರ್ ರಾಕೆಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಕ್ರಮ್‌ವೇದಾ (ಹಿಂ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಮೈಸೂರು ರೇಸುಗಳು–2022

11ನೇ ದಿನ, ಶುಕ್ರವಾರ 30–9–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಲಲಿತ ಮಹಲ್ ಪ್ಲೇಟ್ ಡಿ2–1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಡಾನ್ಸ್ ಡೆನ್ 2. ರೂಮರ್ ಲೇಡಿ 3. ಮೈ ವಿಷನ್

II. ತ್ರಿವೇಣಿ ಪ್ಲೇಟ್–1100 ಮೀ. ಡಿ–2 ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಇನ್‌ಫಿನಿಟಿ ಪಾಸಿಬಲಿಟಿ 2. ಕ್ವಾಂಡೊ ಕ್ವಾಂಡೊ 3. ಸ್ಟಾರ್‌ಪೆಕ್

III. ಲಲಿತ ಮಹಲ್ ಪ್ಲೇಟ್ ಡಿ1–1200 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1 ಲೈಟ್‌ನಿಂಗ್ ಚಾರ್ಲಿ 2. ಡ್ಯಾಡಿಸ್ ಗರ್ಲ್ 3. ಚಿಲ್ಲಿಬ್ರೀಜ್

IV. ಪೊಲೀಸ್ ಟ್ರೋಫಿ–1200 ಮೀ. ರೇಟೆಡ್ 60 ರಿಂದ 85. ಮ.3.30ಕ್ಕೆ
1. ಟ್ಯಾಕ್ಟಿಕಲ್ ಕಮಾಂಡ್ 2. ಗಲೇನ್ 3. ನಥಿಂಗ್ ಟು ವರಿ

V. ಸರ್‌ದಾರ್ ಕೆ.ಬಿ.ರಾಮಚಂದ್ರ ರಾಜೇ ಅರಸ್ ಮೆಮೋರಿಯಲ್ ಟ್ರೋಫಿ– 1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ನೈಟ್ ಇನ್ ಹೂವ್ಸ್ 2. ಸಿಲ್ವರ್ ಫ್ಲೇವರ್ಸ್


VI. ತ್ರಿವೇಣಿ ಪ್ಲೇಟ್–1100 ಮೀ. ಡಿ–1 ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಸಂ.4.30ಕ್ಕೆ
1. ಕಂಟ್ರೆಸ್ ಫ್ಲಾಷ್ 2. ಐ ದಿ ಮೈಂಡ್ 3. ವಿಜಯ ಫಾಲ್ಕನ್

VII. ಹೊಗೇನಕಲ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1 ಸರ್‌ಕ್ಯಾಲಿಕ್ಯೂಲಸ್ 2. ಸೆಫಿನಾ 3. ಜಿರಲಿ

ದಿನದ ಅತ್ಯುತ್ತಮ	: ನೈಟ್ ಇನ್ ಹೂವ್ಸ್
ಡಬ್ಬಲ್	: ಡಾನ್ಸ್ ಡೆನ್, ಸರ್‌ಕ್ಯಾಲಿಕ್ಯೂಲಸ್
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್ ಸ್ಟರ್ ಪಿಜೆಸಿ

ನರಸಿಂಹಯ್ಯ ನಿಧನ



ಹುಣಸೂರು, ಸೆ.29– ನಗರದ ಕರಿಗೌಡರ ಬೀದಿ ನಿವಾಸಿ ನರಸಿಂಹಯ್ಯ(84) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರ ಟಿಎಪಿಸಿಎಂಎಸ್ ನೌಕರ ರವಿ ಹಾಗೂ ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನಗರದ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ನೆರವೇರಿತು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರಾದ ಶ್ರೀ. ಎಂ. ಸುಜೀತ್ ಕುಮಾರ್ ಬಿನ್ ಮಂಚಗಯ್ಯರವರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಭಕ್ತವಚಲ ಬಿನ್ ವಿ.ಜಿ. ರಾಮಯ್ಯರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಆದ ಕಾರಣ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ತಿಳಿಸಿದ ವ್ಯಕ್ತಿಯಲ್ಲದೆ ಬೇರೆ ಯಾರಿಗಾದರೂ, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ನನ್ನ ಕಕ್ಷಿದಾರರನ್ನು ದೂರವಾಣಿ ನಂ. 9886403395 ಮತ್ತು 9916224750 ರ ಮೂಲಕ ಸಂಭಂದಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದರೆ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿಗೆ ಸಂಭಂದಪಟ್ಟಂತೆ ಮೇಲೆ ತಿಳಿಸಿದ ವ್ಯಕ್ತಿಯನ್ನು ಹೊರತು ಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ವಿಜಯನಗರ 4ನೇ ಹಂತ, 2ನೇ ಫೇಸ್ ಬಡಾವಣೆಯಲ್ಲಿರುವ ಖಾಲಿ ನಿವೇಶನ ಸಂಖ್ಯೆ 2484 ರ ಸ್ವತ್ತಿಗೆ ಚೆಕ್ಕು ಬಂಧಿ – ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ. 2539, ಉತ್ತರಕ್ಕೆ : ನಿವೇಶನ ಸಂಖ್ಯೆ : 2483, ದಕ್ಷಿಣಕ್ಕೆ : ನಿವೇಶನ ಸಂಖ್ಯೆ. 2485. ಈ ಮಧ್ಯ ಇರುವ ಪೂರ್ವ ಪಶ್ಚಿಮ 24.00 ಮೀಟರ್‌ಗಳು ಹಾಗೂ ಉತ್ತರದಿಂದ ದಕ್ಷಿಣಕ್ಕೆ 15.00 ಮೀಟರ್‌ಗಳು ಒಟ್ಟು 360.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನದ ಸ್ವತ್ತು ಮಾತ್ರ ಈ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟ ಸ್ವತ್ತಾಗಿರುತ್ತದೆ.

ವಕೀಲರು : PRAVEEN D.B
Advocate, saraswathipuram
Mysuru. 9916224750
ಸ್ಥಳ : ಮೈಸೂರು
ದಿನಾಂಕ : 29/9/2022